ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ,

"೧೯೮೯ನೇ ಇಸವಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ"

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೯-೯೦ನೆಯ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಡಾ. ಎಚ್. ಎಲ್. ತಿಮ್ಮೇಗೌಡ (ಹುಣಸೂರು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾದಮೇಲೆ ಮೊದಲನೆಯ ಆಯವ್ಯಯ ಪತ್ರವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇದು ಒಂದು ನಿರಾಶಾದಾಯಕ ಆಯವ್ಯಯಪತ್ರವೆಂದರೆ ಉತ್ಪ್ರೇಕ್ಷೆಯಾಗಲಾರದು. ಸರ್ಕಾರದವರು ಹಿಂದಿನ ವರ್ಷಗಳಲ್ಲಿ ನಮ್ಮ ರಾಜ್ಯದ ಆದಾಯ ಕಡಿಮೆಯಾಗುವುದಕ್ಕೆ ಏನೇನೋ ಸಬೂಬುಗಳನ್ನು ಕೊಡುತ್ತಿದ್ದರು. ಅದೇರೀತಿಯ ಸಬೂಬನ್ನು ಶ್ರೀಮಾನ್ ಬೊಮ್ಮಾಯಿಯವರು ತಮ್ಮ ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದವರಮೇಲೆ ಕೆಲವು ಜವಾಬ್ದಾರಿಗಳನ್ನು ಹೇಳಿರುವುದನ್ನು ಬಿಟ್ಟರೆ ಮತ್ತೇನು ಇಲ್ಲ. ನಮ್ಮ ಸರ್ಕಾರದ ಆದಾಯವನ್ನು ಯಾವರೀತಿ ಹೆಚ್ಚು ಮಾಡಬೇಕು ಎನ್ನುವುದನ್ನು ಹೇಳುವುದು ಬಿಟ್ಟು ಕೇಂದ್ರ ಸರ್ಕಾರದಿಂದ ಹಣಬರಬೇಕು, ಅದು ಬರಬೇಕು ಇದು ಬರಬೇಕು ಎನ್ನುವುದನ್ನು ಮಾತ್ರ ಹೇಳಿದ್ದಾರೆ. ಈ ಒಂದು ಪರಿಸ್ಥಿತಿ ಎಲ್ಲ ರಾಜ್ಯಗಳಿಗೂ ಇದೆ. ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಈ ಪರಿಸ್ಥಿತಿ ಎಲ್ಲ ರಾಜ್ಯಗಳಿಗೂ ಇದ್ದರೂ ಕೂಡ ಅವರು ಹೆಚ್ಚಿನ ಆದಾಯವನ್ನು ಅವರ ರಾಜ್ಯಗಳಲ್ಲಿ ಮಾಡಿಕೊಂಡು ನಮಗಿಂತ ಹೆಚ್ಚು ಖರ್ಚನ್ನು ಪ್ಲಾನಿಂಗ್‌ನಲ್ಲಿ ಮಾಡುತ್ತಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ ಕೇಂದ್ರ ಸರ್ಕಾರದವರಮೇಲೆ ತಾವು ಒತ್ತಾಯ ಮಾಡತಕ್ಕಂಥದ್ದು ಮಾಡಲೇಬೇಕಾಗುತ್ತದೆ. ನ್ಯಾಯವಾಗಿ ಯಾವ ಯಾವ ತೆರಿಗೆಗಳಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಪಾಲು ಬರಬೇಕು ಎಂದು ಕೇಳುವಂಥಾದ್ದನ್ನು ಫೈನಾನ್ಸ್ ಕಮಿಷನ್ ಬಂದಾಗ ಮತ್ತು ಪಾರ್ಟಿ ಮುಖ್ಯಮಂತ್ರಿಗಳ ಸಭೆಯಲ್ಲಿ ಹೇಳುವುದನ್ನೆಲ್ಲ ಹೇಳಿ. ಅದನ್ನೆಲ್ಲ ಹೇಳಿಕೊಂಡು ನಮ್ಮ ಸರ್ಕಾರದಿಂದ ಜನತೆಗೆ ಅನುಕೂಲವಾಗದಿದ್ದರೆ ಏನೇನು ಒಳ್ಳೆಯ ಕೆಲಸ ಮಾಡಿದಂತಾಗುವುದಿಲ್ಲವೆಂದು ನಾವು ತಿಳಿದುಕೊಂಡಿದ್ದೇವೆ. ಹಲವಾರು ಕ್ಷೇತ್ರಗಳಲ್ಲಿ ನಮ್ಮ ಸರ್ಕಾರ ವಿಫಲಗೊಂಡಿದೆ ಎಂದು ನಾವು ತಿಳಿದುಕೊಂಡಿರುತ್ತೇವೆ. ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡುತ್ತೇವೆಂದು ಹೇಳಿರುವುದು ಇದರಲ್ಲಿ ಇದೆ. ಕಳೆದ ವರ್ಷ ಡಿ.ಸಿ.ಎಚ್. ವರಲಕ್ಷ್ಮೀ ಹತ್ತಿಬೀಜ ಒಳ್ಳೆಯ ಗುಣಮಟ್ಟದ ಹತ್ತಿಬೀಜ ರೈತರಿಗೆ ಸಿಕ್ಕದೆ ಖಾಸಗಿಯವರು ಮಾರಾಟ ಮಾಡಿದ ನಕಲಿ ಹತ್ತಿಬೀಜವನ್ನು ರೈತರು ತಮ್ಮ ಹೊಲಗಳಲ್ಲಿ ಹಾಕಿ ಬೆಳೆದದ್ದರಿಂದ ಕೋಟ್ಯಂತರ ರೂಪಾಯಿಗಳ ನಷ್ಟವನ್ನು ಅನುಭವಿಸಬೇಕಾಯಿತು. ಇಲಾಖೆಯವರು ಒಳ್ಳೆಯ ಗುಣಮಟ್ಟದ ಹತ್ತಿಬೀಜವನ್ನು ರೈತರಿಗೆ ಒದಗಿಸಿಕೊಡಲಿಲ್ಲ, ಅದೇರೀತಿಯಲ್ಲಿ ಹಲವಾರು ಎಣ್ಣೆ ಬೀಜಗಳು ಒಳ್ಳೆಯ ಗುಣಮಟ್ಟದವುಗಳನ್ನು ಒದಗಿಸಲಾಗಲಿಲ್ಲ. ನಮ್ಮ ರಾಜ್ಯಕ್ಕೆ ಎಷ್ಟು ಬಿತ್ತನೇ ಬೀಜ ಬೇಕಾಗುತ್ತದೆ, ಎಷ್ಟು ಉತ್ಪಾದನೆಯನ್ನು ಮಾಡಬೇಕೆಂದು ಲೆಕ್ಕ ಹಾಕಿ ರೈತರಿಗೆ ಒದಗಿಸಿಕೊಡಲು ಸಾಧ್ಯವಾಗಲಿಲ್ಲ. ಕಳೆದವರ್ಷ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಮಳೆ ಬಹಳ ಕಡಿಮೆಯಾಯಿತು. ಆದ್ದರಿಂದ ಸರ್ಕಾರದ ಲೋಕೋಪಯೋಗಿ ಇಲಾಖೆಯವರು ಕಡಿಮೆ'ಅವಧಿಯಲ್ಲಿ ಫಸಲು ಬರತಕ್ಕಂಥ ಬತ್ತವನ್ನು ಹಾಕಿ ಎಂದು ಹೇಳಿದರು. ನಮ್ಮ ಹುಣಸೂರು ತಾಲ್ಲೂಕಿನಲ್ಲಿ ೨೫ ಸಾವಿರ ಎಕರೆಗಳಲ್ಲಿ ೫ ಸಾವಿರ ಎಕರೆಯಲ್ಲಿ ಮಾತ್ರ ಲಾಂಗ್ ಡ್ಯೂರೇಷನ್ ಪ್ಯಾಡಿಯನ್ನು ಹಾಕಲಾಯಿತು. ೨೦ ಸಾವಿರ ಎಕರೆಯಲ್ಲಿ ಷಾರ್ಟ್ ಡ್ಯೂರೇಷನ್ ಪಾಡಿಯನ್ನು ಹಾಕಲಾಯಿತು. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಮಳೆಯಾಗದ ಕಾರಣದಿಂದಾಗಿ ೨೦ ಸಾವಿರ ಎಕರೆಗಳಲ್ಲಿ ಸುಮಾರು ೮ ಕೋಟಿ ರೂಪಾಯಿಗಳಷ್ಟು ಬೆಳೆ ಆಗದೆ ನಷ್ಟ ಉಂಟಾಯಿತು. ಈ ರೀತಿ ನಮ್ಮ ಒಂದು ತಾಲ್ಲೂಕಿನಲ್ಲಿಯೇ ಅಲ್ಲ ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಸೀಡ್ ಕಾರ್ಪೊರೇಷನ್‌ನವರು ಉತ್ತಮ ಗುಣಮಟ್ಟದ ಬತ್ತದ ಬೀಜ, ಹತ್ತಿಯ ಬೀಜ ಮತ್ತು ಎಣ್ಣೆಯ ಬೀಜಗಳನ್ನು ಒದಗಿಸದಿದ್ದುದರಿಂದ ನಷ್ಟಕ್ಕೆ ಕಾರಣವಾಯಿತು. ಸೀಡ್ ಕಾರ್ಪೊರೇಷನ್‌ನವರು ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಒಟ್ಟಿಗೆ ಸೇರಿ ರಾಜ್ಯಕ್ಕೆಎಷ್ಟು ಬಿತ್ತನೇಬೀಜ ಬೇಕಾಗುತ್ತದೆಂಬುದನ್ನು ಲೆಕ್ಕಹಾಕಿ ಒಳ್ಳೆಯ ಗುಣಮಟ್ಟದ ಬೀಜವನ್ನು ರೈತರಿಗೆ ಒದಗಿಸದಿದ್ದರಿಂದ

ಕೋಟ್ಯಾಂತರ ರೂಪಾಯಿಗಳು ನಮ್ಮ ರಾಜ್ಯಕ್ಕೆ ನಷ್ಟವಾಯಿತು. ಈ ವರ್ಷ ಸರಿಮಾಡುತ್ತೇವೆಂದು ಮಾನ್ಯಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಆ ಒಂದು ದೃಷ್ಟಿಯಲ್ಲಿ ಏನು ಕ್ರಮವನ್ನು ತೆಗೆದು ಕೊಳ್ಳಬೇಕೋ ಆ ಒಂದು ಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನೂ ಕೂಡ ಹುಣಸೂರು ತಾಲ್ಲೂಕಿಗೆ ಯಾವಯಾವ ಬೀಜಗಳು ಬೇಕು ಎಂಬುದರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಆದರೆ ಕೃಷಿ ಮಂತ್ರಿಗಳಿಂದ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಉತ್ತರ ಬಂದಿಲ್ಲ. ಆದರೆ ಬಜೆಟ್ ಭಾಷಣದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಿಜವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ಇನ್ನು ಮೇಲಾದರೂ ತೆಗೆದುಕೊಂಡು ಒಳ್ಳೆಯ ಬೀಜಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿಲ್ಲದಿದ್ದರೆ ನಮ್ಮ ರಾಜ್ಯಕ್ಕೆ ಬೇಕಾಗತಕ್ಕ ಬೀಜ ಗಳನ್ನು ಬೇರೆ ಕಡೆಗಳಿಂದ ತರಿಸಿ ರೈತರಿಗೆ ಸಕಾಲದಲ್ಲಿ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ಆಹಾರದ ಮತ್ತು ಎಣ್ಣೆಕಾಳುಗಳ ಉತ್ಪಾದನೆ ಕಡಿಮೆಯಾಗುತ್ತದೆ. ನಿನ್ನೆ ದಿವಸ ನಮ್ಮ ಕೃಷಿ ಮಂತ್ರಿಗಳು ಕೆಲವುಕಡೆ ಹುಚ್ಚು ಇರುವೆಗಳು ಇದ್ದು ಔಷಧಿ ಉಪಯೋಗಿಸಿದರೂ ಪ್ರಯೋಜನವಾಗಲಿಲ್ಲ ಎಂದು ಹೇಳಿದರು. ಕಳೆದವರ್ಷ ಹೊಸ ಟೊಮೆಟೊ ತಳಿ ಬಂದಿದೆ. ಚೆನ್ನಾಗಿ ಬೆಳೆದರೆ ಒಂದು ಎಕರೆಗೆ ೪೦ ಸಾವಿರ ರೂಪಾಯಿ ಉತ್ಪತ್ತಿ ಬರು ತ್ತದೆ. ಖರ್ಚು ತೆಗೆದರೆ ೩೦ ಸಾವಿರ ರೂಪಾಯಿ ಬೆಳೆ ತೆಗೆಯಬಹುದು. ಈ ಮನೆಯ ಮಾಜಿ ಸದಸ್ಯ ರೊಬ್ಬರು ೫ ಎಕರೆಗೆ ಟೊಮೆಟೊ ಹಾಕಿದ್ದರು. ಅದಕ್ಕೆ ಖಾಯಿಲೆ ಬಂದಾಗ ಅಗ್ರಿಕಲ್ಚರ್ ಡಿಪಾರ್ಟ್ ಮೆಂಟಿನವರು ಮತ್ತು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ಪ್ರಯತ್ನಪಟ್ಟರೂ ರೋಗ ತಡೆ ಗಟ್ಟುವುದಕ್ಕಾಗದೆ ತೊಂದರೆಯಾಯಿತು. ಒಂದು ಲಕ್ಷ ರೂಪಾಯಿ ಬರಬೇಕಾದ ಕಡೆ ೧೦ ಸಾವಿರ ರೂಪಾಯಿ ಕೂಡ ಬರಲಿಲ್ಲವೆಂದು ಅವರು ಹೇಳಿದರು. ಈ ರೀತಿ ಖಾಯಿಲೆ ಬಂದರೆ ಔಷಧಿಗಳು ಸಕಾಲ ದಲ್ಲಿ ದೊರೆಯುವಂತೆ ಏರ್ಪಾಡು ಮಾಡಿರುವುದಿಲ್ಲ. ಈಗ ಜಿಲ್ಲಾ ಪರಿಷತ್ತುಗಳು ಜವಾಬ್ದಾರಿ ಎಂದು ಹೇಳಿಬಿಡುತ್ತೇವೆ. ಅಗ್ರಿಕಲ್ಚರಲ್ ಆಫೀಸರ್ಸ್ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಬರುತ್ತಾರೆ. ಆದರೆ ಅವರ ಮೇಲೆ ಕಂಟ್ರೋಲ್ ಇರತಕ್ಕದ್ದು ಅಗ್ರಿಕಲ್ಚರಲ್ ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್ ಅವರಿಗೆ. ಜಿಲ್ಲಾ ಪರಿಷತ್ತಿಗೆ ಕಂಟ್ರೋಲ್ ಇಲ್ಲ. ಯಾವಯಾವ ಔಷಧಗಳನ್ನು ಯಾವಯಾವ ಕಾಲ ದಲ್ಲಿ ತರಿಸಿ ಇಡಬೇಕು ಎಂಬುದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಗೊತ್ತಿರುವುದಿಲ್ಲ. ಯಾವಯಾವ ತಾಲ್ಲೂಕಿಗೆ ಎಷ್ಟೆಷ್ಟು ಔಷಧಗಳು ಬೇಕು ಎಂಬ ಮಾಹಿತಿ ಅವರ ಹತ್ತಿರ ಇರುವುದಿಲ್ಲ. ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಯಾರು ಜಿಲ್ಲಾಪರಿಷತ್ತಿನ ಅಧೀನದಲ್ಲಿ ಕೆಲಸ ಮಾಡುತ್ತಿದ್ದಾರೆ ಅವರು ರೈತರಿಗೆ ಸಕಾಲದಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡದಿದ್ದರೆ ಬೆಳೆ ನಾಶವಾಗು ತ್ತದೆ. ಹುಚ್ಚು ಇರುವೆಗಳ ಬಗ್ಗೆ ಕ್ರಮ ಕೈಗೊಳ್ಳುವುದಕ್ಕಾಗಲಿಲ್ಲ ಎಂದು ಮಾನ್ಯ ಮಂತ್ರಿಗಳು ನಿನ್ನೆ ದಿವಸ ಉತ್ತರದಲ್ಲಿ ಹೇಳಿದ್ದಾರೆ. ಮುಂದೆಯಾದರೂ ಈರೀತಿ ಆಗಬಾರದು. ನಗರ ಪ್ರದೇಶಗಳಲ್ಲಿ ಗಿಡಗಳನ್ನು ಬೆಳೆಸಿದ್ದಕ್ಕಾಗಿ ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ ಬಂದಿದೆ ಎಂದು ಹೇಳಿದ್ದಾರೆ. ಸಂತೋಷ. ಜೀವಿಜಯ ಅವರು ಅರಣ್ಯ ಮಂತ್ರಿಗಳಾಗಿದ್ದಾಗ ಫುಟ್‌ಪಾತ್‌ಗಳಲ್ಲಿ ಗಿಡಗಳನ್ನು ನೆಡು ವುದನ್ನು ಆರಂಭ ಮಾಡಿಸಿದರು. ಅಲ್ಲಿರತಕ್ಕ ಮನೆಯವರಿಗೆ ನೀರನ್ನು ಹಾಕತಕ್ಕ ಜವಾಬ್ದಾರಿ ಕೊಟ್ಟು ಪಾಲನೆ ಮಾಡತಕ್ಕ ಹೊಣೆಯನ್ನು ವಹಿಸಿದಮೇಲೆ ಚೆನ್ನಾಗಿ ಗಿಡಮರಗಳು ಬೆಳೆದಿವೆ, ಮುಖ್ಯವಾಗಿ ಬೆಂಗಳೂರಿನಲ್ಲಿ ಗಿಡಗಳು ಚೆನ್ನಾಗಿ ಬೆಳೆದಿವೆ. ಫುಟ್‌ಪಾತ್‌ಗಳಲ್ಲಿ ಹಣ್ಣಿನ ಗಿಡಗಳು, ಹೂವಿನ ಗಿಡಗಳು ಮತ್ತು ನೆರಳು ನೀಡುವ ಗಿಡಗಳು ಚೆನ್ನಾಗಿ ಬೆಳೆದು ನಮಗೆ ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪ್ರಶಸ್ತಿ ದೊರಕಿರುವುದು ಸಂತೋಷದ ಸಂಗತಿ. ಇದೇ ಕಾರ್ಯವನ್ನು ಬೇರೆ ಪಟ್ಟಣಗಳಲ್ಲೂ ವಿಸ್ತರಿಸು ವುದು ಬಹಳ ಮುಖ್ಯವಾದುದು. ಗಿಡಗಳನ್ನು ಬೆಳೆಸುವುದಕ್ಕೆ ಸಾಮಾಜಿಕ ಅರಣ್ಯ ಇಲಾಖೆ ಇದ್ದರೂ ಕೂಡ ಅದರ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಅವರು ಗಿಡಗಳನ್ನು ಬೆಳೆಸತಕ್ಕ ಕಾರ್ಯವನ್ನು ಸರಿಯಾಗಿ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ರೆವಿನ್ಯೂ ಮಂತ್ರಿಗಳಾಗಿದ್ದಾಗ ಒಂದು ಪ್ರಾರ್ಥನೆ ಮಾಡಿದ್ದೆ. ಎಲ್ಲಾ ಮಂಡಲ ಪಂಚಾಯಿತಿಗಳ ಕೆರೆಗಳನ್ನು ಅಳತೆ ಮಾಡಿಸಿ ಬೌಂಡರಿ ಫಿಕ್ಸ್ ಮಾಡಿಸಿ ಒಳಗಡೆ ಇರತಕ್ಕ ಪ್ರದೇಶದಲ್ಲಿ ಬಿದಿರು ಮತ್ತು ಇತರ ಗಿಡಗಳನ್ನು ಹಾಕಿಸಿ ಎಂದು ಹೇಳಿದ್ದೆ. ಈಗಿರತಕ್ಕ ರೂಲ್ಸ್‌ನಲ್ಲಿ ಸರ್ವೆ ನಂಬರುಗಳನ್ನು ಅಳತೆ ಮಾಡಬೇಕಾದರೆ ೫೦ ರೂಪಾಯಿ ಒಂದು ಸರ್ವೆ ನಂಬರ್‌ಗೆ ಕೊಡಬೇಕೆಂದಿದೆ. ಅದನ್ನು ಮನ್ನಾ ಮಾಡಬೇಕೆಂದು ನಾನು ಹಿಂದೆ ಹೇಳಿದ್ದೆ. ಆಗ ಕಂದಾಯ ಮಂತ್ರಿಗಳಾಗಿದ್ದ ಬೊಮ್ಮಾಯಿಯವರು ಆ ರೀತಿ ಮನ್ನಾ ಮಾಡುವುದು ಕಷ್ಟವಾಗುತ್ತದೆ, ಅದು ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಇದು ದೇಶದ ಹಿತದೃಷ್ಟಿಯ ಪ್ರಶ್ನೆ, ಮಂಡಲ ಪಂಚಾಯಿತಿಗೆ ಕೊಡತಕ್ಕ ದುಡ್ಡು ಕೂಡ ಸರ್ಕಾರದಿಂದ ಹೋಗುವುದರಿಂದ ಮನ್ನಾ ಮಾಡಬೇಕೆಂದು ಹೇಳಿದ್ದೆ.

೩-೦೦ ಪಿ.ಎಂ.

ಅದನ್ನು ಮನ್ನಾ ಮಾಡಿ. ಎಲ್ಲಾ ಕೆರೆಯ ಅಂಗಳಗಳು ಏನು ಇವೆ, ಅವುಗಳೆಲ್ಲಾ ಸರ್ಕಾರದ ಜಮೀನು. ಆದರೆ ಬಹಳಷ್ಟು ಕೆರೆಗಳ ಅಂಗಳವನ್ನು ಜನರು ಒತ್ತುವರಿ ಮಾಡಿಕೊಂಡಿದ್ದಾರೆ. ಹೆಚ್ಚು ಮಳೆಗಾಲ ಇಲ್ಲದ ಸಮಯದಲ್ಲಿ ಆ ಜಾಗದಲ್ಲಿ ಬೆಳೆಯನ್ನು ಬೆಳೆಯುತ್ತಾರೆ. ಮಳೆ ಬಂದಾಗ ಆ ಮಣ್ಣು ಕೆರೆಗೆ ಹೋಗಿ ಹೂಳಾಗಿ ತುಂಬುತ್ತದೆ. ಕೆರೆಗಳಿಗಿರತಕ್ಕ ಬೌಂಡರಿಯನ್ನು ನಿಗದಿ ಮಾಡಬೇಕು. ಅಲ್ಲಿ ಟ್ರಂಚನ್ನು ಹೊಡೆಸಿ ಅದರ ಮೇಲುಗಡೆ ಇರತಕ್ಕ ಸರ್ಕಾರಿ ಜಮೀನಿನಲ್ಲಿ ಬಂಬೂಗಳನ್ನು ಬೆಳೆಸುವುದರ ಜೊತೆಗೆ ಮತ್ತಿತರ ಗಿಡಗಳನ್ನು ಹಾಕಿ ಕೆರೆಗಳಿಗೆ ಹೂಳು ಬರದಂತೆ ಮಾಡಬೇಕು. ಇದಕ್ಕಾಗಿ ಸರ್ಕಾರದವರು ಮಂಡಲ್ ಪಂಚಾಯ್ತಿಯವರ ಮೂಲಕ ಪ್ರತಿಯೊಂದು ಕೆರೆಯ ಸರ್ವೆ ನಂಬರ್ ಹಾಗೂ ಅದರ ಬೌಂಡರಿಯನ್ನು ನಿಗದಿ ಮಾಡಿಸುವ ಕೆಲಸ ಮಾಡಿಸಬೇಕು. ಮಂಡಲ್ ಪಂಚಾಯ್ತಿಯವರು ಇದಕ್ಕಾಗಿ ಪ್ರತ್ಯೇಕವಾಗಿ ದುಡ್ಡು ಕೊಟ್ಟರೆ ಮಾತ್ರ ಅದನ್ನು ಅಳತೆ ಮಾಡುತ್ತೇವೆಂದು ಹೇಳುತ್ತಿದ್ದಾರೆಂದು ಕೇಳಿದ್ದೇನೆ. ಅದನ್ನು ಮನ್ನಾ ಮಾಡಿ. ಪ್ರತಿಯೊಂದು ಕೆರೆಯನ್ನೂ ಅಳತೆ ಮಾಡಿಸಿ ಬೌಂಡರಿಯನ್ನು ನಿಗದಿ ಮಾಡಿಸಿ, ಯಾರ್ಯಾರು ಒತ್ತುವರಿ ಮಾಡಿಕೊಂಡಿದ್ದಾರೆ, ಅವರನ್ನು ಅಲ್ಲಿಂದ ಬಿಡಿಸಿ, ಕೆರೆಯ ಅಂಗಳದಲ್ಲಿ ಗಿಡಗಳನ್ನು ಬೆಳೆಸತಕ್ಕ ಕೆಲಸವನ್ನು ಮಾಡಿದಾಗ ಮಾತ್ರ ಸಾಮಾಜಿಕ ಅರಣ್ಯ ಒಳ್ಳೆಯದಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹುಣಸೂರಿನ ಡಿ.ಎಫ್.ಓ. ಒಬ್ಬರು ಇದ್ದಾರೆ. ಅವರ ಹತ್ತಿರ ಆ ಭಾಗದಲ್ಲಿರತಕ್ಕ ಮೇದರ ಜಾತಿಯವರು ಹೋಗಿ ನಮಗೆ ಬಂಬು ಕೊಡಿ ಎಂಬುದಾಗಿ ಕೇಳಿದಾಗ ಅವರು ನಿಮಗೆ ಕೊಡುವುದಕ್ಕೆ ಬಂಬು ಎಲ್ಲಿದೆ, ನಿಮ್ಮ ವೃತ್ತಿಯನ್ನೇ ಬದಲಾಯಿಸಿಕೊಂಡು ಬಿಡಿ ಎಂಬುದಾಗಿ ಹೇಳಿದ್ದಾರೆ. ಈ ವಿಚಾರವನ್ನು ಮಾನ್ಯ ಅರಣ್ಯ ಮಂತ್ರಿಗಳಿಗೆ ಹೇಳಿದಾಗ, ಅವರು ಅವರಿಗೆ ಬುದ್ಧಿ ಹೇಳುತ್ತೇನೆ. ಬಂಬು ಕೊಡಿಸುತ್ತೇನೆಂದು ಹೇಳಿದರು. ಆದರೂ ಆ ಮೇದರರಿಗೆ ಬಂಬು ದೊರೆಯಲಿಲ್ಲ. ಕಡೆಗೆ ಅವರು ಹುಣಸೂರಿನಿಂದ ಬೆಂಗಳೂರಿಗೆ ಬಂದು ಮಾನ್ಯ ಮಂತ್ರಿಗಳ ಮನೆಯ ಮುಂದೆ ಹೋಗಿ ಜೊತೆಗೆ ನಾನು ಕೂಡ ಅವರ ಜೊತೆ ಹೋಗಿ ಕೋರಿಕೆ ಮಾಡಿದ ಮೇಲೆ ಅವರಿಗೆ ಬಂಬು ಕೊಡಿಸುವಂತಹ ವ್ಯವಸ್ಥೆ ಮಾಡಿದರು. ಬಿದುರುಗಳನ್ನು ಬೆಳೆಯುವುದರಿಂದ ಕಾಗದದ ಕಾರ್ಖಾನೆಗೆ ಕೊಡತಕ್ಕದ್ದಕ್ಕೆ ಸಹಾಯವಾಗುತ್ತದೆ. ಜೊತೆಗೆ ಮೇದಾರ ಜಾತಿ ಜನರಿಗೂ ಕೂಡ ಕೊಡುವುದಕ್ಕೆ ಸಹಾಯಕವಾಗುತ್ತದೆ. ಇಂತಹ ಕೆಲಸವನ್ನು ಮಾಡುವುದಕ್ಕೆ ನಮ್ಮ ಅರಣ್ಯ ಇಲಾಖೆಯಲ್ಲಿರತಕ್ಕ ಡಿ.ಎಫ್.ಓ ರವರು ನಿಮಗೆ ಬಂಬನ್ನು ಒದಗಿಸುವುದಕ್ಕಾಗುವುದಿಲ್ಲ, ನಿಮ್ಮ ಕಸಬನ್ನೇ ಬದಲಾಯಿಸಿಕೊಂಡು ಬಿಡಿ ಎಂಬುದಾಗಿ ಹೇಳುವಂತಹವರು ಈ ಸಮಾಜವನ್ನು ಮುನ್ನಡೆಸುವ ಕಾರ್ಯಕ್ರಮಗಳ ಬಗ್ಗೆ ಜವಾಬ್ದಾರಿ ತೆಗೆದುಕೊಂಡು ಮಾಡುತ್ತಾರೆಯೇ ಎಂಬುದರ ಬಗ್ಗೆ ಯೋಚನೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಮಾನ್ಯ ಕಂದಾಯ ಮಂತ್ರಿಗಳಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪ್ರತಿಯೊಂದು ಮಂಡಲ್ ಪಂಚಾಯ್ತಿಯ ಜೂರಿಸ್‌ಡಿಕ್ಷನ್‌ನಲ್ಲಿರತಕ್ಕ ಎಲ್ಲಾ ಕೆರೆಗಳ ಅಂಗಳಗಳನ್ನೂ ಅಳತೆ ಮಾಡಿಸಿ ಅಲ್ಲಿರತಕ್ಕ ಎನ್‌ಕ್ರೋಚ್‌ಮೆಂಟ್‌ನ್ನು ಬಿಡಿಸಿ ಆ ಜಾಗದಲ್ಲಿ ಮರಗಳನ್ನು ಬೆಳೆಸುವಂತಹ ಕೆಲಸವನ್ನು ಮಾಡಬೇಕು. ಹಾಗೂ ಪ್ರತಿಯೊಂದು ಊರಿನ ವಿಸ್ತೀರ್ಣವನ್ನು ಅಳತೆ ಮಾಡಿಸಿ, ಅದರ ಬೌಂಡರಿಯನ್ನು ನಿಗದಿ ಮಾಡತಕ್ಕ ಕೆಲಸವನ್ನು ಮಂಡಲ್ ಪಂಚಾಯ್ತಿಯವರು ಇದಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ತೆಗೆದುಕೊಳ್ಳದೆ ಈ ಕೆಲಸವನ್ನು ಮಾಡುವಂತೆ ಸೂಚನೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೇಷ್ಮೆ ಮಾರುಕಟ್ಟೆ ವಿಚಾರದಲ್ಲಿ ಹೇಳುವುದಾದರೆ, ರೇಷ್ಮೆ ಮಾರುಕಟ್ಟೆಯನ್ನು ಬಹಳಷ್ಟು ಕಡೆ ಸರ್ಕಾರದವರು ತೆರೆದಿದ್ದಾರೆ. ಆದರೆ ಎಲ್ಲೆಲ್ಲಿ ಫಿಲೇಚರ್‌ಗಳು ಈ ರೇಷ್ಮೆ ಮಾರುಕಟ್ಟೆಯಲ್ಲಿ ರೇಷ್ಮೆ ಗೂಡನ್ನು ಕೊಂಡುಕೊಳ್ಳುವುದಕ್ಕೆ ಭಾಗವಹಿಸುವುದಿಲ್ಲವೋ ಅಲ್ಲೆಲ್ಲಾ ಒಂದು ಕೇಜಿಗೆ ೨೦ ರೂಪಾಯಿ ೩೦ ರೂಪಾಯಿ ಕಡಿಮೆ ಬೆಲೆಗೆ ಮಾರಾಟವಾಗುತ್ತದೆ. ಇದರಿಂದಾಗಿ ಹುಣಸೂರಿನಲ್ಲಿರತಕ್ಕ ರೈತರು ತಾವು ಬೆಳೆದಂತಹ ರೇಷ್ಮೆ ಗೂಡನ್ನು ಮಾರಾಟ ಮಾಡಲಿಕ್ಕಾಗಿ ರಾಮನಗರಕ್ಕೋ ಅಥವಾ ಟಿ. ನರಸೀಪುರಕ್ಕೋ ಹೋಗಬೇಕಾಗಿದೆ. ಎಲ್ಲಾ ರೇಷ್ಮೆ ಮಾರುಕಟ್ಟೆಗಳಲ್ಲಿಯೂ ಸಿಲ್ಕ್ ದಾರಗಳನ್ನು ತೆಗೆಯುವ ಯೂನಿಟ್‌ಗಳನ್ನು ಇಟ್ಟುಕೊಂಡಿರತಕ್ಕಂತಹವರೂ ಕೂಡ ರೇಷ್ಮೆ ಮಾರುಕಟ್ಟೆಗೆ ಬಂದು ರೇಷ್ಮೆ ಗೂಡುಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇ ಆದರೆ ರೈತರಿಗೂ ಸಹಾಯವಾಗುತ್ತದೆ. ಬೆಲೆಯೂ ಹೆಚ್ಚು ಆಗುತ್ತದೆ. ರೇಷ್ಮೆ ನೂಲನ್ನು ತೆಗೆಯುವುದಕ್ಕೆ ಸರ್ಕಾರದವರು ಯಾರ್ಯಾರಿಗೆ ಲೈಸೆನ್ಸನ್ನು ಕೊಟ್ಟಿದ್ದಾರೋ ಅವರಿಗೆ ರೇಷ್ಮೆ ಗೂಡು ಸಿಕ್ಕುವುದಿಲ್ಲ. ರೇಷ್ಮೆ ಗೂಡನ್ನು ಮಾರಾಟ ಮಾಡತಕ್ಕ ರಾಮನಗರ ಟಿ. ನರಸೀಪುರಕ್ಕೆ ಹೋಗಿ ತೆಗೆದುಕೊಂಡು ಬರಬೇಕು. ಇದರಿಂದ ಅವರಿಗೂ ಕೂಡ ಬಹಳ ಕಷ್ಟವಾಗುತ್ತದೆ. ಆದ್ದರಿಂದ ರೇಷ್ಮೆ ಮಾರುಕಟ್ಟೆಯಲ್ಲಿಗೆ ಹೋಗಿ

ಫಿಲೇಚರ್‌ನವರು ನೇರವಾಗಿ ಭಾಗವಹಿಸಿ ರೇಷ್ಮೆ ಗೂಡನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು.

ಇನ್ನು ಭಾಗ್ಯಜ್ಯೋತಿ ಯೋಜನೆಯಲ್ಲಿ ಒಂದೊಂದು ಮನೆಗೂ ಒಂದೊಂದು ಬಲ್ಬನ್ನು ಹಾಕಿದರು. ಅದಕ್ಕೆ ವಿದ್ಯುಚ್ಛಕ್ತಿ ಚಾರ್ಜ್ ಕೊಡಬೇಕೆಂದು ಮೊದಲು ಹೇಳಲೇ ಇಲ್ಲ. ಕಳೆದ ವರ್ಷ ವಿದ್ಯುಚ್ಛಕ್ತಿ ಚಾರ್ಜ್‌ಸನ್ನು ಕೊಡಬೇಕೆಂದು ವಿದ್ಯುಚ್ಛಕ್ತಿ ಮಂಡಲಿಯವರು ಡಿಸ್‌ಕನೆಕ್ಟ್ ಮಾಡಿದರು. ಹಿಂದೆ ವಿದ್ಯುಚಕ್ತಿ ಮಂತ್ರಿಗಳಾಗಿದ್ದ ಶ್ರೀ ಜೆ. ಹೆಚ್. ಪಟೇಲ್‌ರವರಲ್ಲಿ ಹೇಳಿದಾಗ ಆ ರೀತಿ ಮಾಡಿದ್ದುದು ತಪ್ಪು ಪುನಃ ರೀಕನೆಕ್ಷನ್ ಕೊಡಿಸುತ್ತೇನೆಂದು ಹೇಳಿದ್ದರು. ಆದರೆ ಬಹಳಷ್ಟು ಕಡೆ ರೀ–ಕನೆಕ್ಷನ್ ಇದುವರೆವಿಗೂ ಆಗಲಿಲ್ಲ. ಬಹಳಷ್ಟು ಜನ ಪರಿಶಿಷ್ಟ ಜಾತಿಯವರಿದ್ದು, ಅವರು ಎಲೆಕ್ಟ್ರಿಸಿಟಿ ಚಾರ್ಜಸನ್ನು ಕೊಡುವಂತಹ ಸ್ಥಿತಿಯಲ್ಲಿಲ್ಲ. ಇದು ಹುಣಸೂರು ತಾಲ್ಲೂಕು ಒಂದರಲ್ಲೇ ಇದೇ ರೀತಿ ರಾಜ್ಯದ ಎಲ್ಲಾ ಕಡೆಯೂ ಆಗಿದೆ. ಆದ್ದರಿಂದ ಮುಂದೆ ಈ ಯೋಜನೆಯಲ್ಲಿ ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸತಕ್ಕ ಸಮಯದಲ್ಲಿ ಎಲೆಕ್ಟ್ರಿಸಿಟಿ ಚಾರ್ಜಸ್‌ನ್ನು ಕೊಡಬೇಕೆಂದು ಅವರಿಗೆ ತಿಳುವಳಿಕೆ ಕೊಡಬೇಕು. ನಾಲ್ಕೈದು ವರ್ಷಗಳು ಆದ ಮೇಲೆ ಒಂದೇ ಸಲ ಬಾಕಿ ಹಣವನ್ನು ಕಟ್ಟಿ ಎಂದರೆ ಆ ಹರಿಜನರು ಎಲ್ಲಿಂದ ಹಣವನ್ನು ತರುತ್ತಾರೆ ? ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ಇನ್ನು ನೀರಾವರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ೩೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ- ಭಾರೀ ನೀರಾವರಿಗೆ ೧೫೫ ಕೋಟಿ ಸಣ್ಣ ನೀರಾವರಿಗೆ ೩೪ ಕೋಟಿ, ಕಾಡಾಗೆ ೧೮ ಕೋಟಿ ಹಾಗೂ ಪ್ರವಾಹ ನಿಯಂತ್ರಣಕ್ಕೆ ೦.೮೯ ಕೋಟಿ ರೂಪಾಯಿ ಎಂದು ಹೇಳಿ ಒಟ್ಟು ೩೦೦ ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಸದನ ದಲ್ಲಿ ಬೇರೆ ಅನುಪಯುಕ್ತವಾಗಿರತಕ್ಕ ಖರ್ಚನ್ನು ಕಡಿಮೆ ಮಾಡಿ ಹೆಚ್ಚಿನ ಹಣವನ್ನು ನೀರಾವರಿ ಗೋಸ್ಕರ ಒದಗಿಸುವ ಸಲುವಾಗಿ ಈ ಸದನದಲ್ಲಿ ಒಂದು ಸಮಿತಿ ಮಾಡಿ ಅದರಲ್ಲಿ ಚರ್ಚೆ ಮಾಡಿ ಹಣ ಸಿಗದಿ ಮಾಡುವ ಬಗ್ಗೆ ಎಲ್ಲಾ ಪಕ್ಷಗಳವರೂ ಒಂದು ಅಭಿಪ್ರಾಯಕ್ಕೆ ಇಲ್ಲಿ ಬಂದಿದ್ದರು. ಆ ರೀತಿ ಮಾಡದೇ ೩೦೦ ಕೋಟಿ ಈ ವರ್ಷ ಕೊಟ್ಟಿದ್ದೇವೆ ಎಂದರೆ ಹೇಗೆ ? ಇವತ್ತು ಕಾವೇರಿ ಜಲಾನಯನ ದಲ್ಲಿ ೧೯೭೫ನೇ ಇಸವಿಗಿಂತ ಮೊದಲು ಏನೇನು ನೀರಾವರಿ ಕೆಲಸ ಕಾರ್ಯಗಳನ್ನು ಮಾಡಬೇಕಾಗಿತ್ತು, ಅದನ್ನು ಮಾಡುವುದಕ್ಕೆ ನಮಗೆ ೬೦೦ ಕೋಟಿ ರೂಪಾಯಿಗಳು ಬೇಕಾಗಿದೆ. ಚುನಾವಣೆ ಸಮಯ ದಲ್ಲೇನೋ ಮಾನ್ಯ ಕರುಣಾನಿಧಿಯವರು ನಮ್ಮ ವಿವಾದವನ್ನು ನಾವೇ ಕುಳಿತು ಚರ್ಚೆ ಮಾಡಿ ಬಗೆಹರಿಸಿಕೊಳ್ಳೋಣವೆಂದು ಹೇಳಿದ್ದಾರೆ. ಮುಂದೆ ಅವರು ಯಾವ ರೀತಿಯ ನಿಲುವನ್ನು ತೆಗೆದು ಕೊಳ್ಳುತ್ತಾರೋ ಗೊತ್ತಿಲ್ಲ. ಅವರೇನಾದರೂ ಕೇಂದ್ರಕ್ಕೆ ಹೋಗಿ ಟ್ರಿಬ್ಯುನಲ್‌ಗೆ ಹೋಗಬೇಕೆಂದರೆ ಆಗ ನಮ್ಮ ಸರ್ಕಾರದ ನಿಲುವು ಏನು ? ಕಬಿನಿ ೨ನೇ ಸ್ಟೇಜ್‌ಗೆ ನಮ್ಮಲ್ಲಿ ಫೌಂಡೇಷನ್ ಆಗಿದೆ. ಇವತ್ತು ಅಲ್ಲಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಮುಂದೆ ಹೋದಾಗ ಅದು ವನ್ಯ ಸಂರಕ್ಷಿತ ಪ್ರದೇಶ ದಲ್ಲಿ ಬರುತ್ತದೆಂದು ನಮ್ಮ ಎಂಜಿನಿಯರ್ಸ್‌ಗೆ ಇನ್‌ವೆಸ್ಟಿಗೇಟ್ ಮಾಡಲು ಅರಣ್ಯ ಇಲಾಖೆಯವರು ಒಳಗೇ ಬಿಟ್ಟಿಲ್ಲ. ಇವತ್ತು ಕಾವೇರಿ ಜಲಾನಯನದ ಕೆಲಸಕ್ಕೆ ೬೦೦ ಕೋಟಿ ರೂಪಾಯಿಗಳು ಬೇಕಾಗಿದೆ. ಇವತ್ತು ಬರೀ ಕಬಿನಿಯ ೨ನೇ ಸ್ಟೇಜ್‌ನಲ್ಲಿ ೧ ಲಕ್ಷ ಎಕರೆ ನೀರಾವರಿ ಏನು ಆಗಬೇಕಾಗಿತ್ತು, ಅದರ ಪ್ರಶ್ನೆ ಹಾಗೆಯೇ ಇದೆ. ಇದರ ಜೊತೆಗೆ ಹಾರಂಗಿ ಹೇಮಾವತಿ ಯೋಜನೆಗಳು ಬೇರೆ ಇವೆ. ಇವನ್ನೆಲ್ಲಾ ಮುಗಿಸುವುದಕ್ಕೆ ಈ ೩೦೦ ಕೋಟಿ ರೂಪಾಯಿಗಳು ಹೇಗೆ ಸಾಕಾಗುತ್ತದೆ ? ಇದನ್ನು ತಾವು ಯೋಚನೆ ಮಾಡಬೇಕು. ಮತ್ತೆ ಕೃಷ್ಣಾದಲ್ಲಿ ೨೦೦೦ನೇ ಇಸವಿಯ ಹೊತ್ತಿಗೆ ೭೦೦ ಟಿಎಂಸಿ ಅಡಿ ನೀರನ್ನು ನಾವು ಉಪಯೋಗ ಮಾಡದೇ ಹೋದರೆ ಅದರಲ್ಲಿ ಅರ್ಧ ಪಾಲನ್ನು ಆಂಧ್ರ ಮತ್ತು ಮಹಾರಾಷ್ಟ್ರಕ್ಕೆ ಕೊಡಬೇಕೆಂದು ಬಚಾವತ್ ಅವಾರ್ಡ್‌ನಲ್ಲಿ ಇದೆ. ಅದನ್ನು ಮುಕ್ತಾಯ ಮಾಡಲು ನಮಗೆ ೭೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಕೇವಲ ೧೦೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇವತ್ತು ವಿಶ್ವಬ್ಯಾಂಕಿನ ಸಹಾಯವನ್ನೂ ಲೆಕ್ಕಕ್ಕೆ ತೆಗೆದು ಕೊಂಡರೂ ಈ ಯೋಜನೆ ಮುಗಿಯುವುದರೊಳಗೆ ನೀವು ಇಟ್ಟಿರುವ ಹಣವನ್ನು ಲೆಕ್ಕಕ್ಕೆ ತೆಗೆದು ಕೊಂಡರೆ ತಾವು ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಯಾವ ರೀತಿ ವಿಫಲರಾಗಿದ್ದೀರಿ ಅದೇ ರೀತಿಯ ವಿಫಲತೆಯನ್ನು ಕೃಷ್ಣಾದಲ್ಲೂ ಕಾಣಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಹಿಂದೆ ಮಾನ್ಯ ಮುಖ್ಯಮಂತ್ರಿಗಳೂ ಕೂಡಾ ಚರ್ಚೆಯಲ್ಲಿ ಭಾಗವಹಿಸಿದ್ದರು. ಈ ಸದನದಲ್ಲಿ ಎಲ್ಲರ ಅಭಿಪ್ರಾಯ ಕೂಡಾ ಒಂದೇ ಆಗಿತ್ತು, ಅನುಪಯುಕ್ತ ಕೆಲಸಗಳ ಬಗೆ ಖರ್ಚು ಕಡಿಮೆ ಮಾಡಿ ನೀರಾವರಿಗೆ ಹೆಚ್ಚು ಹಣವನ್ನು ಒದಗಿಸುವ ಬಗ್ಗೆ ಯೋಜನೆ ಮಾಡುವ ಕಡೆಗೆ ಎಲ್ಲಾ ಪಕ್ಷದ ಸದಸ್ಯರೂ ತಮ್ಮ ಸಮ್ಮತಿಯನ್ನು ವ್ಯಕ್ತ ಮಾಡಿದ್ದರು. ಈ ವಿಷಯ ಇದೇ ಸದನ ದಲ್ಲಿ ಚರ್ಚೆ ಆಗಿದೆ. ಅದನ್ನು ಅನುಷ್ಠಾನಕ್ಕೆ ತಂದು ತಾವು ಕೆಲಸ ಮಾಡಿ. ಈಗ ಭಾರಿ, ಮಧ್ಯಮ

ಹಾಗೂ ಸಣ್ಣ ನೀರಾವರಿಗೆಲ್ಲಾ ಸೇರಿ ೩೦೦ ಕೋಟಿ ರೂಪಾಯಿ ಏನು ಇಟ್ಟಿದ್ದೀರಿ ಇದನ್ನು ಹೆಚ್ಚು ಮಾಡತಕ್ಕದ್ದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಯಾರು ನಮ್ಮ ರಾಜ್ಯದ ರೈತರು ಇದ್ದಾರೆ. ಯಾರು ನಮಗೆ ಅನ್ನ ನೀಡುತ್ತಿದ್ದಾರೆ ಅವರಿಗೆ ನಾವು ಮೋಸ ಮಾಡಿದ ಹಾಗೆ ಆಗುತ್ತದೆ, ದೇಶಕ್ಕೆ ಮೋಸ ಮಾಡಿದ ಹಾಗೆ ಆಗುತ್ತದೆ. ನಮಗೆ ಬರತಕ್ಕ ನೀರು ಪರ್ಮನೆಂಟಾಗಿ ಆಂಧ್ರ, ತಮಿಳುನಾಡಿಗೆ ಹೋಗಲು ಬಿಟ್ಟರೆ ನಮ್ಮ ರೈತರಿಗೆ ವಂಚನೆ ಮಾಡಿದ ಹಾಗೆ ಆಗುತ್ತದೆಯಾದ್ದರಿಂದ ಈ ಬಗ್ಗೆ ಪೂರ್ಣ ಜವಾಬ್ದಾರಿಯುತವಾಗಿ ಯೋಚನೆ ಮಾಡತಕ್ಕ ಪ್ರಶ್ನೆ ಬಂದಿದೆ ಎಂದು ಹೇಳಿ ಈ ಬಗ್ಗೆ ತಕ್ಷಣ ಕಾರ್ಯ ತತ್ಪರರಾಗಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ವರ್ಷ ೨೬೭ ಕೋಟಿ ರೂಪಾಯಿಗಳ ಖೋತ ಬಜೆಟ್ ಮಂಡಿಸಿದ್ದೀರಿ. ೧೦೦ ಕೋಟಿ ರೂಪಾಯಿ ತೆರಿಗೆಯನ್ನು ಹಾಕಿ ಅದನ್ನು ಹೇಗಾದರೂ ಮಾಡಿ ಸರಿಮಾಡುತ್ತೇವೆಂದು ಹೇಳುತ್ತೀರಿ. ಕಳೆದ ವರ್ಷ ಸಹ ಇದೇರೀತಿ ಹೇಳಿದ್ದೀರಿ. ಖೋತಾವನ್ನು ಸರಿಮಾಡತಕ್ಕ ಕೆಲಸ ಆಗಲಿಲ್ಲ. ಈ ವರ್ಷ ಕೂಡ ಅದೇರೀತಿ ಆಗುತ್ತದೆ. ಎಲ್ಲಿಯವರೆಗೆ ನಮ್ಮ ಆದಾಯವನ್ನು ಹೆಚ್ಚು ಮಾಡುವುದಕ್ಕೆ ಹೆಚ್ಚಿನ ಗಮನಹರಿಸಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಒಂದು ಪರಿಸ್ಥಿತಿ ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತದೆ. ನಮ್ಮ ಮುಖ್ಯಮಂತ್ರಿಗಳು ಅವರ ಆಬ್ಜೆಕ್ಟೀವ್ಸ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ ಅದು ಪ್ರಶಂಸನೀಯವಾದುದು. ಅವನ್ನು ಕಾರ್ಯರೂಪಕ್ಕೆ ತರಲಿಕ್ಕೆ ಏನು ಬೇಕೋ ಅದನ್ನು ಅವರು ಪೂರ್ತಿ ಮಾಡಲಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಓದತಕ್ಕ ಮಕ್ಕಳು ಏನಿದ್ದಾರೆ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ಓದತಕ್ಕ ಮಕ್ಕಳಿಗೆ ೭ ತರಗತಿಗಳು ಇರುತ್ತವೆ ಅಲ್ಲಿಗೆ ಕನಿಷ್ಟ ಪಕ್ಷ ೭ ಜನ ಉಪಾಧ್ಯಾಯರು ಇರುತ್ತಾರೆ. ಹಳ್ಳಿಗಳಲ್ಲಿರತಕ್ಕ ಶಾಲೆಗಳಲ್ಲಿ ೭ ತರಗತಿಗಳು ಇರತಕ್ಕ ಮಿಡ್ಲಿಸ್ಕೂಲಿನಲ್ಲಿ ಇಬ್ಬರು ಉಪಾಧ್ಯಾಯರು ಇರುತ್ತಾರೆ. ಅದರಲ್ಲಿ ಒಬ್ಬರನ್ನು ಇನ್ನೊಂದು ಶಾಲೆಯಲ್ಲಿ ಉಪಾಧ್ಯಾಯರಿಲ್ಲವೆಂದು ಡೆಪ್ಯುಟೇಷನ್ ಕಳುಹಿಸುತ್ತಾರೆ. ಹಳ್ಳಿಯಲ್ಲಿರತಕ್ಕ ಮಕ್ಕಳಿಗೆ ಈ ರೀತಿಯ ವಿದ್ಯಾಭ್ಯಾಸವನ್ನು ಕೊಟ್ಟರೆ, ಅವರು ಪಟ್ಟಣಗಳಲ್ಲಿರತಕ್ಕ ಅಧಿಕಾರಿಗಳ ಹಾಗೂ ಶ್ರೀಮಂತರ ಮಕ್ಕಳ ಜೊತೆಯಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಇನ್ನಿತರ ಪರೀಕ್ಷೆಗಳಲ್ಲಿ ಸ್ಪರ್ಧೆ ಮಾಡಿ ಹೆಚ್ಚಿಗೆ ಅಂಕಗಳನ್ನು ಪಡೆದು ಮೆಡಿಕಲ್ ಕಾಲೇಜು, ವೃತ್ತಿ ಶಿಕ್ಷಣ ಕಾಲೇಜು ಇನ್ನಿತರ ಕಡೆಗಳಲ್ಲಿ ಅವರು ಮುಂದೆ ಬರುವುದಕ್ಕೆ ಖಂಡಿತಾ ಸಾಧ್ಯವಿಲ್ಲವೆನ್ನುವುದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಮುಖ್ಯ ಮಂತ್ರಿಗಳು ಇನ್ನೊಂದು ವಿಚಾರವನ್ನು ಹೇಳಿದ್ದಾರೆ ಅದೇನೆಂದರೆ ಈ ವರ್ಷ ೩,೪೮೯ ಪ್ರಾಥಮಿಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ ಒಂದು ಸ್ಕೂಲಿಗೆ ಒಬ್ಬ ಶಿಕ್ಷಕರನ್ನು ಕೊಡುತ್ತೇವೆಂದರೆ ಕನಿಷ್ಟಪಕ್ಷ ಒಂದು ತಾಲ್ಲೂಕಿಗೆ ೨೦೦ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿ ೧೭೫ ತಾಲ್ಲೂಕುಗಳಿಗೆ ೩೫ ಸಾವಿರ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಒಂದೊಂದು ಪ್ರಾಥಮಿಕ ಶಾಲೆಗೆ ಒಬ್ಬರಂತೆ ಒಟ್ಟು ೩,೪೮೯ ಪ್ರಾಥಮಿಕ ಶಿಕ್ಷಕರನ್ನು ೧೯೮೯–೯೦ನೇ ಸಾಲಿನಲ್ಲಿ ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ನಾವು ಹಳ್ಳಿಯಲ್ಲಿರತಕ್ಕ ರೈತರ ಹಾಗೂ ಬಡವರ ಮಕ್ಕಳಿಗೆ ಎಷ್ಟು ಮೋಸ ಮಾಡುತ್ತಿದ್ದೇವೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಪ್ರತಿಯೊಂದು ಜಿಲ್ಲಾ ಪರಿಷತ್‌ನಲ್ಲೂ ಈ ವಿಚಾರ ಚರ್ಚೆಯಾಗುತ್ತಿದೆ. ಸರ್ಕಾರದವರು ಮಂಜೂರು ಮಾಡಿ ಇಷ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳಿ ಎಂದರೆ ಅವರು ನೇಮಕ ಮಾಡಿಕೊಳ್ಳುತ್ತಾರೆ. ಸರ್ಕಾರದವರು ರಾಜ್ಯದಲ್ಲಿ ೩೫೦೧ ಜನ ಉಪಾಧ್ಯಾಯರುಗಳನ್ನು ೧೯೮೯–೯೦ನೇ ಸಾಲಿನಲ್ಲಿ ನೇಮಕ ಮಾಡುತ್ತೇವೆಂದು ಹೇಳಿಕೆ ಕೊಟ್ಟ ಮೇಲೆ ೨೦ ಜಿಲ್ಲೆಗಳಿಗೆ ಎಷ್ಟು ಜನ ಉಪಾಧ್ಯಾಯರುಗಳು ಬರುತ್ತಾರೆ ? ಅದರಿಂದ ಏನು ಪ್ರಯೋಜನವಾಗುತ್ತದೆ ? ಈ ರೀತಿಯ ಶಿಕ್ಷಣವನ್ನು ಮಕ್ಕಳಿಗೆ ಕೊಟ್ಟರೆ ಏನು ಪ್ರಯೋಜನ ? ರಾಜ್ಯಾಂಗದಲ್ಲಿ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡಬೇಕೆಂದು ಇದೆ. ಎಲ್ಲಿಯವರೆಗೆ ನಾವು ಬಡವರ ಮಕ್ಕಳಿಗೆ ಶಿಕ್ಷಣವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಏನೂ ಸಾಧಿಸುವುದಕ್ಕೆ ಆಗುವುದಿಲ್ಲ. ನಾವು ಹೇಳುತ್ತೇವೆ, ಮಕ್ಕಳನ್ನು ದನ ಕಾಯುವುದಕ್ಕೆ ಕಳುಹಿಸಬೇಡಿ ಸ್ಕೂಲಿಗೆ ಕಳುಹಿಸಿ ಎಂದು. ಆ ಮಕ್ಕಳು ಸ್ಕೂಲಿಗೆ ಬಂದರೆ ಅಲ್ಲಿ ಉಪಾಧ್ಯಾಯರು ಇರುವುದಿಲ್ಲ. ೭ ತರಗತಿಗಳಿಗೆ ಒಬ್ಬರು ಶಿಕ್ಷಕರು ಇದ್ದರೆ ಅವರು ಏನು ಕಲಿಯುತ್ತಾರೆ ? ನಾವು ಶಾಸಕರಾಗಿ ಅಲ್ಲಿಗೆ ಹೋಗಿ ಏತಕ್ಕೆ ಭಾಷಣ ಮಾಡಬೇಕು ? ತಂದೆತಾಯಿಗಳು ವಿದ್ಯಾವಂತರಾಗಲಿಲ್ಲ, ನೀವಾದರೂ ವಿದ್ಯಾವಂತರಾಗಿಯೆಂದು ಮಕ್ಕಳಿಗೆ ಹೇಳುತ್ತೇವೆ. ಮಕ್ಕಳ ತಂದೆತಾಯಿಗಳಿಗೆ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿಯೆಂದು ಹೇಳುತ್ತೇವೆ. ಅವರು ಮಕ್ಕಳನ್ನು ಸ್ಕೂಲಿಗೆ ಕಳುಹಿಸುತ್ತೇವೆ ಅಲ್ಲಿ ಉಪಾಧ್ಯಾಯರೇ ಇಲ್ಲವೆಂದು ಹೇಳಿದಾಗ ನಾವು ಬಾಯಿ ಮುಚ್ಚಿಕೊಂಡು ಬರಬೇಕು.

ಶ್ರೀ ಬಿ. ಜಿ. ಕೊಟ್ರಪ್ಪ.— ತಾವು ಮಂತ್ರಿಗಳಾಗಿದ್ದಾಗ ಇಂತಹ ಪರಿಸ್ಥಿತಿ ಇತ್ತೋ ಇಲ್ಲವೋ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ನಾನು ಮಂತ್ರಿಮಂಡಲದಲ್ಲಿದ್ದಾಗ ಏನು ಹೇಳಿದ್ದೇನೆ ಎನ್ನುವುದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ನೀವು ಮಂತ್ರಿಯಾದ ಮೇಲೆ ನಿಮಗೆ ಗೊತ್ತಾಗಬಹುದು. ವ್ಯಂಗ್ಯವಾಗಿ, ನಗುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ನಿಜವಾಗಿಯೂ ಹಳ್ಳಿಯಲ್ಲಿರತಕ್ಕ ಪ್ರಾಥಮಿಕ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಯಾವರೀತಿ ನಡೆಯುತ್ತಿದೆನ್ನುವುದನ್ನು ತಾವು ಸ್ವಲ್ಪಮಟ್ಟಿಗೆ ಸೀರಿಯಸ್ಸಾಗಿ ಯೋಚನೆ ಮಾಡಬೇಕು. ವೇಗ್ ಆಗಿ ತಮಾಷೆಯಾಗಿ ಮಾತನಾಡುವುದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ತಮ್ಮ ಲಿಸ್ಟ್‌ನಲ್ಲಿದ್ದವರು ಹೇಗೆ ತಪ್ಪಿಸಿಕೊಂಡರು ಎಂಬುದು ಗೊತ್ತಾಗುತ್ತಿಲ್ಲ.

ಡಾ. ಹೆಚ್. ಎಲ್. ತಿಮ್ಮೇಗೌಡ.— ನಮ್ಮಿಂದ ತಪ್ಪಿಸಿಕೊಂಡು ಹೋದುದರಿಂದ ಈ ರೀತಿ ಮಾತನಾಡುತ್ತಿದ್ದಾರೆ. ಈ ಆಯವ್ಯಯದಲ್ಲಿ ಹೆಚ್ಚು ತೆರಿಗೆಗಳನ್ನು ಹಾಕದೆ ಇದ್ದರೂ ಕೂಡ ನಮ್ಮ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ನಮ್ಮ ರಾಜ್ಯದಲ್ಲಿ ನೀರಾವರಿ ಮತ್ತು ಹಳ್ಳಿಗಳಲ್ಲಿ ಉತ್ಪಾದನೆ ಜಾಸ್ತಿಯಾಗುವ ದೃಷ್ಟಿಯಿಂದ ನೋಡಿದರೆ ಇದು ಒಂದು ನಿರಾಶದಾಯಕವಾದ ಆಯವ್ಯಯವಾಗಿದೆ. ಶ್ರೀ ನಜೀರ್ ಸಾಬ್‌ರವರು ನೀರು ಸಾಹೇಬರು ಎಂಬ ಹೆಸರನ್ನು ಪಡೆದಿದ್ದರು. ಈಗ ಅವರು ದಿವಂಗತರಾಗಿದ್ದಾರೆ. ಅವರ ಕಾಲದಲ್ಲಿ ಸಾವಿರಾರು ಕುಡಿಯುವ ನೀರಿನ ಬಾವಿಗಳನ್ನು ತೊಡಲಾಯಿತು. ಈಗ ಪ್ರತಿಹಳ್ಳಿಗಳಲ್ಲಿ ಇರತಕ್ಕ ಕುಡಿಯುವ ನೀರಿನ ಬಾವಿಗಳು ಕೆಟ್ಟುಹೋದರೆ ಮಂಡಲ್ ಪಂಚಾಯತಿಯವರು ದುಡ್ಡು ಕೊಡದೇ ಹೋದರೆ ರಿಪೇರಿ ಆಗುವುದಿಲ್ಲ. ಮಂಡಲ್ ಪಂಚಾಯತಿಯಲ್ಲಿ ಏನಾಗಿದೆ ಎಂದರೆ ಒಂದು ಸರ್ಕಾರೀ ಆಜ್ಞೆ ಅವರಿಗೆ ಹೋಗಿದೆ. ಅವರ ಪ್ರಕಾರ ಅವರು ತಿಂಗಳಿಗೆ ೧೫ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಡ್ರಾ ಮಾಡುವ ಹಾಗೆ ಇಲ್ಲ. ಅವರದೇ ದುಡ್ಡು ಇದ್ದರೂ ಕೂಡ ಅವರು ಖರ್ಚು ಮಾಡುವ ಹಾಗೆ ಇಲ್ಲ. ವಿದ್ಯುತ್ ಮುಂತಾದವುಗಳಿಗೆಲ್ಲ ಹಣವನ್ನು ಖರ್ಚು ಮಾಡಿದ ಮೇಲೆ ಈ ಕುಡಿಯುವ ನೀರಿನ ಬಾವಿಗಳನ್ನು ರಿಪೇರಿ ಮಾಡಿಸಲು ದುಡ್ಡು ಖರ್ಚು ಮಾಡಬೇಕಾದರೆ ಅವರಿಗೆ ಸಾಧ್ಯವಾಗುತ್ತಿಲ್ಲ, ಕೆಲವು ಊರಿನಲ್ಲಿ ಒಂದೇ ಒಂದು ಬಾವಿ ಇರುತ್ತದೆ. ಅಲ್ಲಿ ಕುಡಿಯುವ ನೀರಿನ ಬಾವಿ ಕೆಟ್ಟು ಹೋದರೆ ಆ ಊರಿಗೆ ನೀರೇ ಇರುವುದಿಲ್ಲ. ಮಂಡಲ್ ಪಂಚಾಯಿತಿಗಳಿಗೆ ಹಾಕಿರುವ ಈ ನಿರ್ಬಂಧವನ್ನು ತೆಗೆಯಬೇಕು. ಅವರ ದುಡ್ಡನ್ನು ಡ್ರಾ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಆ ದುಡ್ಡು ಅವರೇ ಸಂಪಾದನೆ ಮಾಡಿದ ದುಡ್ಡು. ಅವರು ಕೆರೆಗಳಲ್ಲಿ ಮೀನಿನ ಮರಿಗಳನ್ನು ಉತ್ಪತ್ತಿ ಮಾಡಿ ಅದನ್ನು ಹರಾಜು ಮಾಡಿ ದುಡ್ಡನ್ನು ಇಟ್ಟಿರುತ್ತಾರೆ. ಅದನ್ನು ಖರ್ಚು ಮಾಡಬೇಡಿ ಎಂದರೆ ಬಹಳ ಕಷ್ಟವಾಗುತ್ತದೆ. ಎಲ್ಲಾಕಡೆ ನಲ್ಲಿ ನೀರನ್ನು ಕೊಡುತ್ತೇವೆಂದು ಹೇಳಿದ್ದಾರೆ. ೨೦೦೦ ಪ್ರಜಾ ಸಂಖ್ಯೆ ಇದ್ದರೆ ಮಾತ್ರ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆ ಕೊಡತಕ್ಕದ್ದು ಇದೇ ೧೦೦೦ ಪ್ರಜಾ ಸಂಖ್ಯೆ ಇದ್ದರೆ ಮಿನಿ ವಾಟರ್ ಯೋಜನೆ ಕೊಡತಕ್ಕದ್ದು ಜಾರಿಯಲ್ಲಿದೆ. ಅದನ್ನು ಈಗ ೭೫೦ ಮಾಡಿದ್ದಾರೆ. ಆದರೆ ೧೯೮೦ನೇ ಇಸವಿ ಮೇಲೆ ಲೆಕ್ಕ ಮಾಡಿ ನಮ್ಮ ಅಧಿಕಾರಿಗಳು ಕಾನೂನು ಪ್ರಕಾರ ಈ ರೀತಿ ಮಾಡಲಾಗುವುದಿಲ್ಲವೆಂದು ಹೇಳುತ್ತಾರೆ. ಆಗ ಅದು ಜಿಲ್ಲಾ ಪರಿಷತ್ತಿನಿಂದ ಸರ್ಕಾರಕ್ಕೆ ಬರುತ್ತದೆ. ಇಲ್ಲಿ ಆಗುವುದಿಲ್ಲವೆಂದು ವಾಪಸ್ಸು ಹೋಗುತ್ತದೆ. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ ೧೯೮೦ ರಿಂದ ಇಲ್ಲಿಯವರೆಗೆ ಅಂದರೆ ೯ ವರ್ಷಗಳಲ್ಲಿ ಎಷ್ಟು ಪ್ರಜಾ ಸಂಖ್ಯೆ ಜಾಸ್ತಿಯಾಗಿದೆ ಎಂಬುದು. ೭೫೦ ಪ್ರಜಾಸಂಖ್ಯೆಗೆ ಮಿನಿ ವಾಟರ್ ಸಪ್ಲೈ ಎಂದು ಇರುವುದನ್ನು ೫೦೦ ಎಂದು ಮಾಡಿದರೆ ಒಳ್ಳೆಯದು. ಊರಿನಲ್ಲಿರತಕ್ಕ ಜನ ಸಂಖ್ಯೆಯನ್ನು ಲೆಕ್ಕ ಹಾಕಿ ಆ ಆಧಾರದ ಮೇಲೆ ನಲ್ಲಿ ನೀರಿನ ಯೋಜನೆಯನ್ನು ಜಾರಿಗೆ ತರಬೇಕು. ೨೦೦೦ ಪ್ರಜಾ ಸಂಖ್ಯೆ ಇರುವುದನ್ನು ೧೫೦೦ಕ್ಕೆ ಇಳಿಸಬೇಕು. ಕೆಲವು ಕಡೆ ಒಂದು ಊರು ಮತ್ತೊಂದು ಊರಿಗೆ ಕೇವಲ ೧೦ ಅಡಿ ದೂರವಿರುತ್ತದೆ. ಅಂದರೆ ರಸ್ತೆಯ ಒಂದು ಕಡೆ ಒಂದು ಊರು ಇರುತ್ತದೆ. ಇನ್ನೊಂದು ಕಡೆ ಇನ್ನೊಂದು ಊರು ಇರುತ್ತದೆ. ಈ ಎರಡನ್ನೂ ಸೇರಿಸಿದರೆ ಪ್ರಜಾ ಸಂಖ್ಯೆ ಹೆಚ್ಚಾಗುತ್ತದೆ. ಈ ಎರಡನ್ನು ಸೇರಿಸಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತನ್ನಿ ಎಂದರೆ ಒಪ್ಪಿಕೊಳ್ಳುವುದಿಲ್ಲ. ಜಿಲ್ಲಾ ಪರಿಷತ್ತಿನಲ್ಲಿ ಚೀಫ್ ಇಂಜಿನಿಯರ್‌ರವರು ಆಗುವುದಿಲ್ಲವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಒಪ್ಪುವುದಿಲ್ಲವೆಂದು ಉತ್ತರ ಕೊಡುತ್ತಾರೆ ನನ್ನ ಕ್ಷೇತ್ರದಲ್ಲಿ ರಸ್ತೆಯ ಎರಡೂ ಕಡೆಯಲ್ಲಿಯೂ ಎರಡು ಊರುಗಳಿವೆ. ರೆಡ್ಡಿ ಕೊಪ್ಪ ಮಂಟಿಕೊಪ್ಪಲು. ಎಂದು ೪೦ ಅಡಿ ಅಗಲ ಇರತಕ್ಕ ರಸ್ತೆಯ ಎರಡು ಬದಿಗಳಲ್ಲಿ ಒಂದೊಂದು ಊರು ಇದೆ, ಇವೆರಡನ್ನೂ ಸೇರಿಸುವುದಕ್ಕಾಗುವುದಿಲ್ಲವೆಂದು ಜಿಲ್ಲಾ ಪರಿಷತ್ತಿನಲ್ಲಿ ಹೇಳುತ್ತಾರೆ. ಈ ಎರಡನ್ನೂ ಸೇರಿಸಿದರೆ ರಾಷ್ಟ್ರೀಯ ಯೋಜನೆಯನ್ನು ಜಾರಿಗೆ ತರಬಹುದು.

ಈ ರೀತಿ ಸರ್ಕಾರದವರು ಜಿಲ್ಲಾ ಪರಿಷತ್ತಿನವರಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಇದಕ್ಕೆ ಅಗತ್ಯವಾದಂತ ದುಡ್ಡನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಇಷ್ಟು ಹೊತ್ತು ಈ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಮಂತ್ರಿಗಳಾಗಿ ನಮ್ಮ ಮುಂದೆ ಆಯವ್ಯಯ ಪತ್ರವನ್ನು ಇಟ್ಟಿದ್ದಾರೆ. ಇದರ ಪ್ರಕಾರ ನನ್ನ ಅನುಭವದ ಹಿನ್ನಲೆಯಲ್ಲಿ ಹೇಳುವುದಾದರೆ ಇದು ನಾನ್‌ಪರ್‌ಫಾರ್ಮಿಂಗ್ ಬಜೆಟ್ ಮತ್ತು ನಾನ್–ಪರ್‌ಫಾರ್ಮಿಂಗ್ ಗವರ್ನಮೆಂಟ್ ಎಂದು ಹೇಳಿ. ಎರಡು ಮಾತನ್ನು ಹೇಳಬೇಕಾಗಿದೆ. ನಾನ್ ಪರ್‌ಫಾರ್ಮೆನ್ಸ್ ಬಜೆಟ್ ಎಂದು ಏಕೆ ಹೇಳುತ್ತಿದ್ದೇನೆ ಎಂದರೆ ೧೯೮೮–೮೯ನೇ ಇಸವಿಯಲ್ಲಿ ಏನೊಂದು ಆಯವ್ಯಯ ಪತ್ರವನ್ನು ಇಲ್ಲಿ ನಾವು ಅಂಗೀಕರಿಸಿದೆವು, ಅದನ್ನು ಯಾವರೀತಿಯಾಗಿ ಈ ಸರ್ಕಾರ ಕಾರ್ಯಗತ ಮಾಡಿದೆ ಎನ್ನತಕ್ಕದ್ದು ಒಂದು ಪ್ರಶ್ನೆ. ಆಯವ್ಯಯ ಪಟ್ಟಿಯಲ್ಲಿ ಯಾವ ಯಾವ ಬಾಬುಗಳಲ್ಲಿ ಎಷ್ಟೆಷ್ಟು ಮೊಬಲಗನ್ನು ಒದಗಿಸಿದ್ದಾರೆ, ಅದನ್ನು ನಿಷ್ಟೆಯಿಂದ ಯಾವ ರೂಪದಲ್ಲಿ ಕಾರ್ಯಗತ ಮಾಡಿದ್ದಾರೆ ಎನ್ನತಕ್ಕದ್ದು ಒಂದು ಪ್ರಶ್ನೆ. ಆ ಪ್ರಶ್ನೆಗೆ ನನಗೆ ಉತ್ತರ ಇಲ್ಲ. ಹೋದ ವರ್ಷದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇಟ್ಟಿದ್ದಂಥ ಏನೊಂದು ಮೊಬಲಗು ಇತ್ತು, ಆ ಮೊಬಲಗನ್ನು ಈ ತಿಂಗಳವರೆಗೂ ಖರ್ಚು ಮಾಡದೆ ಹಾಗೆಯೇ ಇಟ್ಟಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಹೇಳುವುದಾದರೆ ಅಭಿವೃದ್ಧಿ ಕಾರ್ಯಗಳಿಗಾಗಿ ಆ ಬಜೆಟ್‌ನಲ್ಲಿ ಎಷ್ಟು ಹಣವನ್ನು ಒದಗಿಸಲಾಗಿತ್ತು ಅದನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಇದೇರೀತಿಯಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಇರಬಹುದು. ಮತ್ತು ಏನು ಒಂದು ಕಾರ್ಯಗತ ಮಾಡಿ ನಾವು ಹಣವನ್ನು ಖರ್ಚುಮಾಡಿದ್ದೇವೆ ಎಂದು ಹೇಳಿಬಿಟ್ಟು, ಅವರು ಕೊಟ್ಟಿರುವ ಅಂಕಿಅಂಶಗಳನ್ನು ಏನು ನೋಡುತ್ತಿದ್ದೇವೆ, ಅದಕ್ಕೆ ಅರ್ಥವೇ ಇಲ್ಲ. ಹಣವನ್ನು ಬೇರೆ ರೂಪದಲ್ಲಿ ವ್ಯಯ ಮಾಡದೆ ಕೊನೆಗಳಿಗೆಯವರೆಗೂ ಹಾಗೆಯೇ ಇಟ್ಟು ಅದನ್ನು ಬೇರೆ ಒಂದು ರೂಪದಲ್ಲಿ ತೋರಿಸುವ ವಿಧಾನವೇನು ಈ ಸರ್ಕಾರದ್ದು ಇದೆ ಅದನ್ನು ನಾವು ತೀಕ್ಷ್ಣವಾಗಿ ಖಂಡಿಸಬೇಕು. ಹೋದವರ್ಷ, ತಾವೆಲ್ಲರೂ ನೋಡಿದ್ದೀರಿ. ಜನತಾದಳವಾಗಲಿ, ಜನತಾ ಪಕ್ಷವಾಗಲೀ. ವಿರೋಧ ಪಕ್ಷದಲ್ಲಿಯಾಗಲೀ ಪ್ರತಿಯೊಬ್ಬರೂ ಒಪ್ಪಬೇಕು. ಅವರವರ ಕ್ಷೇತ್ರದಲ್ಲಿ ಈ ಆಯವ್ಯಯಪತ್ರದ ಪ್ರಕಾರ ಎಷ್ಟು ಹಣ ವ್ಯಯ ಮಾಡಿದ್ದಾರೆ ಎಂದು ಪ್ರಶ್ನೆ ಹಾಕಿದರೆ ನನಗೆ ಉತ್ತರ ಬರುವುದೇ ಇಲ್ಲ. ಯಾವುದು ಮಾಡಬಾರದೋ ಅದಕ್ಕೆ ಖರ್ಚುಮಾಡುತ್ತಾರೆ. ಯಾವುದು ಮಾಡಬೇಕೋ ಅದಕ್ಕೆ ಖರ್ಚು ಮಾಡುವುದಿಲ್ಲ. ಹೀಗಾಗಿ ಈಗ ಪುನಃ ಆಯವ್ಯಯ ಪತ್ರವನ್ನು ತೆಗೆದುಕೊಂಡು ನಮ್ಮ ಮುಂದೆ ಬಂದಿದ್ದಾರೆ. ಇದನ್ನು ಮಂಜೂರು ಮಾಡಿದರೂ ಕೂಡ ಯಾವರೀತಿಯಲ್ಲಿ ಕಾರ್ಯಗತ ಮಾಡುತ್ತಾರೆ, ವ್ಯಯ ಮಾಡುತ್ತಾರೆ ಖರ್ಚು ಮಾಡುತ್ತಾರೆ ಎನ್ನುವುದೊಂದು ಪ್ರಶ್ನೆ. ಖರ್ಚು ಮಾಡುವುದಕ್ಕೆ ಹಣವನ್ನು ಎಲ್ಲಿಂದ ತರುತ್ತಾರೆ ? ಸ್ವಾಮಿ, ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ, ಈಗ ಬೊಮ್ಮಾಯಿಯವರ ಸರ್ಕಾರವಾಗಲೀ, ಶ್ರೀ ರಾಮಕೃಷ್ಣ ಹೆಗಡೆಯವರ ಸರ್ಕಾರವಾಗಲೀ, ಇವರು ಅರ್ಥಹೀನ ಒಂದು ವ್ಯವಸ್ಥೆಯ ಹಿನ್ನಲೆಯಲ್ಲಿ ಈ ಸರ್ಕಾರವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಎತ್ತಿದರು. ನಾವು ಬಹಳ ಹೋರಾಟ ಮಾಡಿದ್ದೇವೆ ಜನತಾದಳ ಸರ್ಕಾರ ನಮ್ಮದು ಎಂದು ಹೇಳಿದ್ದಾರೆ. ಇದು ಜನತಾದಳ ಸರ್ಕಾರ ಅಲ್ಲವೆಂದು ನಾವು ವಾದ ಮಾಡಿದ್ದೇವೆ. ಮಾನ್ಯ ಸಭಾಧ್ಯಕ್ಷರು ಅದರಮೇಲೆ ತೀರ್ಪು ಕೊಟ್ಟಿದ್ದಾರೆ. ಈ ಹಿಂದೆ ಒಂದು ಸಲ ತೀರ್ಪನ್ನು ಕೊಟ್ಟಿದ್ದರು. ಈ ಸಾರಿಯೂ ತೀರ್ಪನ್ನು ಕೊಟ್ಟಿದ್ದಾರೆ. ಅದು ಸರಿ ಅಥವಾ ತಪ್ಪು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅವರ ರೂಲಿಂಗ್ ಇದೆ. ಆದರೆ ಅವರು ಕಾಯಬೇಕಿತ್ತು. ಇದೇ ಪ್ರಶ್ನೆ ಕೇಂದ್ರದಲ್ಲೂ ಇದೆ. ಲೋಕಸಭೆಯಲ್ಲಿಯೂ ಈ ಪ್ರಶ್ನೆ ಇದೆ. ಅಲ್ಲಿ ತೀರ್ಮಾನವಾಗುವವರೆಗೂ ಇವರು ಕಾದಿದ್ದರೆ ನಾನು ಇವರಿಗೆ ಶಹಭಾಸ್‌ಗಿರಿ ಕೊಡುತ್ತಿದ್ದೆ. ನಾನು ಮಾಡಿದ್ದೆ ಸರಿ, ನಾನು ಹೇಳಿದ್ದೆ ಸರಿಯೆಂದು ಹೇಳಿಬಿಟ್ಟು ಏನು ಒಂದು ಕಾರಣಗಳನ್ನು ಕೊಟ್ಟಿದ್ದಾರೆ ಅವು ಸಕಾರಣಗಳಲ್ಲ. ಆದರೆ ತೀರ್ಪು ಕೊಟ್ಟಿದ್ದಾರೆ. ನೋಡೋಣ, ಏನು ಸರ್ಕಾರ ಮಾಡಿಕೊಂಡು ಹೋಗುತ್ತಾರೋ ಹೋಗಲಿ. ಆದರೆ ಲೋಕದಳವೇ ಇಲ್ಲವೆನ್ನುವಾಗ ಯಾರಾದರೂ ಈ ಸಭೆಯಲ್ಲಿ ಬಹುಸಂಖ್ಯಾತ ಜನ ಇದ್ದರೆ ಅವರು ಸರ್ಕಾರ ಮಾಡಬಹುದು. ಅದಕ್ಕೆ ನನ್ನ ಅಭ್ಯಂತರ ಇಲ್ಲ. ಹಿಂದೆ ಜನತಾಪಕ್ಷ ಇತ್ತು. ಆದರೆ ಇವರು ಜನತಾ ಪಕ್ಷವನ್ನು ಬಿಟ್ಟಿದ್ದಾರೆ, ಜನತಾ ದಳವೆಂದು ಮಾಡಿಕೊಂಡಿದ್ದಾರೆ. ಇದು ಒಂದು ಗುಂಪು ಎಂದು ಹೇಳಿಬಿಟ್ಟು ಇವರು ಸರ್ಕಾರ ನಡೆಸಿದ್ದರೆ ಅಭ್ಯಂತರ ಇಲ್ಲ. ಈಗ ಜನತಾದಳ ಇಲ್ಲವೇ ಇಲ್ಲ. ಆದರೂ ಜನತಾ ದಳ ಅಂತ ಮಾಡಿಕೊಂಡು ಪುನಃ ಅಲ್ಲಿ ಇಲ್ಲ, ಇಲ್ಲಿ ಇಲ್ಲ ಎನ್ನತಕ್ಕಂಥ ಒಂದು ವ್ಯವಸ್ಥೆಯಾಗಿದೆ.

ನಾಳೆ ಇವರ ವಿರುದ್ಧವಾಗಿ ಲೋಕಸಭೆಯಲ್ಲಿ ತೀರ್ಮಾನ ಬಂದರೆ, ಇವರ ವ್ಯವಸ್ಥೆ ಏನು ? ಇವರು ಯಾವ ಹೆಸರಿನಲ್ಲಿ ಸರ್ಕಾರ ನಡೆಸುತ್ತಿದ್ದಾರೆ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ ಇಲ್ಲಿ ಜನತಾ ಪಕ್ಷದವರೂ ಇದ್ದಾರೆ, ಕಾಂಗ್ರೆಸ್ ಪಕ್ಷದವರೂ ಇದ್ದಾರೆ. ಇವರು ಕೇವಲ ೧೧೧ ಜನರನ್ನು ಕಟ್ಟಿಕೊಂಡು ಸರ್ಕಾರ ನಡೆಸುವುದಕ್ಕೆ ಆಗುತ್ತದೆಯೇ ? ಮೊನ್ನೆ ಮಾನ್ಯ ಬೊಮ್ಮಾಯಿಯವರು ಕಂತು ರೂಪದಲ್ಲಿ ಮಂತ್ರಿಮಂಡಲ ಪುನರ್ ರಚನೆ ಮಾಡಿದ್ದಾರೆ, ಪುನಃ ಮಾಡುವವರೂ ಇದ್ದಾರೆ. ಇದರಿಂದ ತೃಪ್ತಿ ಆಗುತ್ತಿದೆಯೋ ಬಿಡುತ್ತದೆಯೋ, ಅದು ಬೇರೆ ವಿಚಾರ. ಆದರೆ ಸರ್ಕಾರವನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗುವುದು ಇವರ ಕೈಯಲ್ಲಿ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಮುಖ್ಯಮಂತ್ರಿಗಳಾಗಿದ್ದರು. ಇವರು ಅಧಿಕಾರಕ್ಕೆ ಬಂದಾಗಿನಿಂದ, ಹೋಗುವವರೆಗೂ ಎಷ್ಟು ವಾಗ್ದಾನಗಳನ್ನು ಮಾಡಿದರು, ಜನರಿಗೆ ಅದೆಷ್ಟು ಆಶೋತ್ತರಗಳು ಬರುವ ರೀತಿಯಲ್ಲಿ ಮಾತನಾಡಿದರು, ಏನೇನು ಕಾರ್ಯಗತ ಮಾಡಿದರು ಎನ್ನುವ ಬಗ್ಗೆ ಹೇಳುತ್ತೇನೆ. ಯಾವ ಯಾವ ವಿಚಾರದಲ್ಲಿ ಏನೇನು ಹೇಳಿದರು, ಅವೆಲ್ಲಾ ವಾಗ್ದಾನ ರೂಪದಲ್ಲಿ ಹಾಗೆಯೇ ಉಳಿದಿವೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಾಂಗ್ರೆಸ್ ಸರ್ಕಾರದವರು ಲಂಚರುಷುವತ್ತುಗಳಿಗೆ ಕೈ ಒಡ್ಡಿದರು. ನಾವು ಲಂಚರುಷುವತ್ತು ನಿರ್ಮೂಲನೆ ಮಾಡುತ್ತೇವೆ, ಒಳ್ಳೆಯ ಆರ್ಥಿಕ ವ್ಯವಸ್ಥೆಯನ್ನು ತರುತ್ತೇವೆ ಎಂದು ಹೇಳಿ, ಜನತಾಪಕ್ಷದಲ್ಲಿದ್ದು, ಈಗ ಜನತಾ ದಳ ಎಂದು ಮಾಡಿಕೊಂಡು ಸರ್ಕಾರವನ್ನು ನಡೆಸುತ್ತಿದ್ದಾರೆ. ಇವರ ಆರ್ಥಿಕ ವ್ಯವಸ್ಥೆ ಸರಿಯಾಗಿ ಆಗಿದೆಯೇ, ಇವರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಮನ್ನಣೆ ಇದೆಯೇ ? ಇವರು ಕೊಡುತ್ತಿರ ತಕ್ಕ ಚೆಕ್‌ಗಳಿಗೆ ಮನ್ನಣೆ ಇದೆಯೇ ? ಯಾವ ಬ್ಯಾಂಕಿನವರು ಇವರಿಗೆ ಗೌರವ ಕೊಡುತ್ತಿದ್ದಾರೆ ? ನಾನೂ ಕೂಡ ಬಹಳ ದಿವಸ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಮ್ಮ ಕಾಲದಲ್ಲಿ ಕೊಟ್ಟಂಥ ಒಂದು ಚೆಕ್‌ನ್ನು ಅಗೌರವದಿಂದ ಕಂಡಿರುವುದಾಗಲೀ ಅಥವಾ ತಿರಸ್ಕಾರವಾಯಿತು ಎಂದು ಹೇಳಿದ್ದನ್ನಾಗಲೀ ನಾನು ಕಿವಿಯಿಂದ ಕೇಳಲೇ ಇಲ್ಲ. ಇವರಿಗೆ ಬ್ಯಾಂಕಿನವರೂ ಕೂಡ ಇವತ್ತು ಮನ್ನಣೆ ಕೊಡುತ್ತಿಲ್ಲ. ಹೀಗಾಗಿ ಇವತ್ತಿನದಿವಸ ಮಾನ್ಯ ಬೊಮ್ಮಾಯಿಯವರ ಸರ್ಕಾರ ನಿರ್ವೀರ್ಯವಾಗಿ, ನಿರರ್ಥಕವಾಗಿ ನಡೆಯುತ್ತಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ತಾವೂ ಕೂಡ ನೋಡಿರಬಹುದು. ಎಲ್ಲಿ ಕೇಳಿದರೂ ಕೂಡ ಈ ಸರ್ಕಾರಕ್ಕೆ ಯಾರು ಗೌರವ ಕೊಡುತ್ತಾರೆ ಎನ್ನುವುದನ್ನು ಕೇಳಿಲ್ಲ. ನನ್ನ ಮಾನಸಿಕ ಹಿನ್ನೆಲೆಯಲ್ಲಿ ಈ ರೀತಿ ಮಾತನಾಡುತ್ತಿದ್ದೇನೆ, ತಾವು ಅಪಾರ್ಥ ಮಾಡಿಕೊಳ್ಳಬಾರದು. ಜನತಾ ದಳ ಸರ್ಕಾರ ಯಾವ ರೀತಿಯಾಗಿ ನಡೆಯುತ್ತಿದೆ, ಯಾವ ರೀತಿಯಾಗಿ ಮನ್ನಣೆ ಕೊಡುತ್ತಿದ್ದಾರೆ ಎಂಬುದನ್ನು ತಾವು ಕೇಳಬೇಕು. ತಾವು ಸಾರ್ವಜನಿಕರಿಂದ ಉತ್ತರ ತೆಗೆದುಕೊಳ್ಳಬೇಕು. ಅವರು ಸರಿಮಾಡಿಕೊಂಡು, ಸರಿಯಾದ ವೈವಿಧ್ಯತೆಯನ್ನು ತರದೇ ಹೋದರೆ, ಬದಲಾಯಿಸಬೇಕು. ಈ ರೀತಿಯಲ್ಲಿ ಜನಗಳನ್ನು ತಪ್ಪುದಾರಿಗೆ ಎಳೆದು, ಮೋಸಮಾಡುವುದಕ್ಕೆ ಹೋಗಬೇಡಿ ಎಂದು ಹೇಳುತ್ತೇನೆ. ಮಾನ್ಯ ಹೆಗಡೆಯವರೂ ಸರ್ಕಾರವನ್ನು ನಡೆಸಿದರು. ಅವರ ಕಾಲದಲ್ಲಿ ಸಾವಿರಾರು ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದರು. ದೇಶದ ಎಲ್ಲಾ ಜನಗಳಿಗೂ ಕಳುಹಿಸಿದರು. ಬಹಳ ಜಾಣತನದಿಂದ ರಾಜ್ಯಭಾರ ಮಾಡಿಕೊಂಡು ಹೋದರು. ಅವರು ಜಾಣರು, ಆದರೆ ಜನಗಳಿಗೆ ಅನುಕೂಲವಾಗುವ ಪ್ರಶ್ನೆ ಮಾತ್ರ ಬರಲಿಲ್ಲ. ಹೆಗಡೆಯವರು ಹೋದ ಮೇಲೆ, ಅದೇ ರಥದಲ್ಲಿ ಇವತ್ತಿನ ದಿವಸ ಮಾನ್ಯ ಬೊಮ್ಮಾಯಿಯವರು ಪ್ರಯಾಣ ಮಾಡುವುದಕ್ಕೆ ಹೊರಟಿದ್ದಾರೆ. ಅವರು ಹೇಳಿದ್ದನ್ನು ಕೇಳಿಯೇ ಇವರು ಮಾಡುತ್ತಿದ್ದಾರೆ. ಬೊಮ್ಮಾಯಿಯವರು ನಾನು ಸ್ವತಂತ್ರವಾಗಿದ್ದೇನೆ, ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದೇನೆ, ಸರ್ಕಾರ ನಡೆಸುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ, ಆದರೆ ಇವತ್ತಿನವರೆಗೂ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಆಗಲಿಲ್ಲ. ಈಗ್ಗೆ ೭-೮ ತಿಂಗಳ ಹಿಂದೆ, ೧೩ನೇ ತಾರೀಖು ಮುಖ್ಯಮಂತ್ರಿಯಾಗಿ ಬಂದಾಗಿನಿಂದ, ಇವತ್ತಿನವರೆಗೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ವೇಳೆ ಯಾವುದು ? ಇಲಾಖೆಗಳಲ್ಲಿ ಆಗತಕ್ಕ ಕೆಲಸಕಾರ್ಯಗಳನ್ನು ತಿಳಿದುಕೊಂಡು, ಅವುಗಳನ್ನು ಕಂಟ್ರೋಲ್ ಮಾಡಿಕೊಂಡು, ಅವರಿಗೆ ನಿರ್ದೇಶನ ಮಾಡಿಕೊಂಡು, ಜನಗಳಿಗೆ ಪರಿಣಾಮಕಾರಿಯಾಗಿ ಉಪಕಾರ ಆಗುವ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರ ವಿರೋಧ ಕಟ್ಟಿಕೊಂಡರೆ, ಕಿರುಕುಳ ಆಗುತ್ತದೆಯೇನೋ ಎನ್ನುವ ಆತಂಕ. ಇದರಿಂದ ಅವರನ್ನೂ ತೃಪ್ತಿಪಡಿಸಬೇಕು. ಜೊತೆಗೆ, ಜನತಾಪಕ್ಷದಲ್ಲಿದ್ದವರು ಇವತ್ತು ಅಲ್ಲಿಗೆ ಹೋಗಿ, ಮಂತ್ರಿಪದವಿಯ ಕನಸನ್ನು ಕಾಣುತ್ತಿದ್ದಾರೆ.

೩-೩೦ ಪಿ. ಎಂ.

ಇವತ್ತಿನ ದಿವಸ ಇವರು ಇದ್ದವರಿಗೆ ತೃಪ್ತಿಪಡಿಸಬೇಕು, ಅವರ ಬೆಂಬಲಿಗರಿಗೂ ತೃಪ್ತಿ ಪಡಿಸಬೇಕು. ಹೀಗಾಗಿ ಸರಿಯಾಗಿ ಸುಲಲಿತವಾಗಿ ಸರಕಾರ ನಡೆಸುವುದಕ್ಕೆ ಇವರಿಗೆ ಆಗುತ್ತಿಲ್ಲ. ಮಾನ್ಯ

ದೇವೇಗೌಡರು ಏನು ಹೇಳಿದ್ದಾರೆ ಎಂಬುದು ಇವತ್ತಿನ ಪೇಪರ್‌ನಲ್ಲಿ ಬಂದಿದೆ, ಅದನ್ನು ತಾವು ನೋಡಿ ರಬಹುದು, ಬೊಮ್ಮಾಯಿಯವರಿಂದ ಸರಕಾರ ನಡೆಸುವುದಕ್ಕೆ ಆಗುತ್ತಿಲ್ಲ, ಅವರು ವಿಧಾನಸಭೆಯನ್ನು ವಿಸರ್ಜನೆ ಮಾಡಿ ಚುನಾವಣೆಗೆ ಹೋಗಬೇಕೆಂದು ಅವರು ಕರೆಕೊಟ್ಟಿದ್ದಾರೆ. ಅವರ ಮಾತು ಒಂದು ಕಡೆಗೆ ಇರಲಿ, ಅವರು ಜನತಾ ಪಕ್ಷದಲ್ಲಿ ಮೊದಲು ಹೇಗೆ ಇದ್ದರೋ ಹಾಗೇ ಉಳಿದುಕೊಂಡಿದ್ದಾರೆ. ಅವರ ಮಾತನ್ನು ನಾನು ಹೇಳುವುದು ಬೇಕಾಗಿಲ್ಲ. ಆದರೆ ಇವರ ನಿಲುವು ಏನು? ಇವರು ನಿರ್ದಿಷ್ಟ ವಾಗಿ ನಿಂತುಕೊಂಡು ಶಕ್ತಿಯುತವಾಗಿ. ಪರಿಣಾಮಕಾರಿಯಾಗಿ ಸರಕಾರವನ್ನು ನಡೆಸುವುದಕ್ಕೆ ಆಗುತ್ತ ದೆಯೇ ಇಲ್ಲವೇ ಎಂಬ ಪ್ರಶ್ನೆಗೆ ನನ್ನ ಏಳು ತಿಂಗಳ ಅನುಭವದಲ್ಲಿ ಹೇಳುವುದಾದರೆ ಇವರ ಕೈಯಲ್ಲಿ ಸರಕಾರ ನಡೆಸುವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಂತ್ತಿದ್ದೇನೆ. ಇವರ ಪರಿಸ್ಥಿತಿ ಹೇಗೆ ಆಗಿದೆ ಎಂಬುದಕ್ಕೆ ಇಂಗ್ಲಿಷ್‌ನಲ್ಲಿ ಎರಡು ಪದಗಳು ಇದ್ದಾವೆ. Tweedle-dum and Tweedle-dee ಎಂಬ ರೀತಿ ಹಿಂದೆ ಏನೊಂದು ದಡ್ಡತನದ ಅಥವಾ ಜಾಣತನದ ಸರಕಾರ ಇತ್ತು ಅದು ಅದೇ ರೀತಿಯಾಗಿ ಹಸ್ತಾಂತರವಾಗಿದೆಯೇ ಹೊರತಾಗಿ ಬೇರೆ ವ್ಯತ್ಯಾಸವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳು ತ್ತಿದ್ದೇನೆ. ಆಗಸ್ಟ್ ೧೫ನೇ ತಾರೀಖು ಬೊಮ್ಮಾಯಿಯವರು ಸ್ವಾತಂತ್ರ್ಯೋತ್ಸವದ ಭಾಷಣ ಮಾಡಿ ದರು. ಭಾಷಣ ಮಾಡುವಾಗ ಏನು ಹೇಳಿದರು ಎಂದರೆ, ಸಮಾಜದಲ್ಲಿ ವ್ಯತ್ಯಾಸದ ಜೀವನ ಇದೆ, ಸಮಾಜದಲ್ಲಿ ಬಡತನ ಹಾಗೇ ಉಳಿದಿದೆ, ಯಾರು ಪಟ್ಟಣದಲ್ಲಿ ವಾಸವಾಗಿದ್ದಾರೆ ಅವರು ಸ್ಥಿತಿವಂತರಾಗಿ ಹಾಗೇ ಇದ್ದಾರೆ. ಅವರ ಒಂದು ಏಳಿಗೆ ಅಭಿವೃದ್ಧಿ ಆಗುತ್ತಿದೆಯೇ ಹೊರತಾಗಿ, ಹಳ್ಳಿಗಾಡಿನಲ್ಲಿರ ತಕ್ಕಂಥ ಬಡವರಿಗೆ ಏನೂ ಆಗುತ್ತಿಲ್ಲ. ನಮ್ಮಲ್ಲಿರತಕ್ಕಂಥ ಜಾತಿಮತಗಳ ಗೊಂದಲ ಹಾಗೇ ಇದೆ. ಇದು ಹೋಗುವವರೆಗೆ ಯಾರೂ ಕೂಡಾ ಸುಖಮಯವಾಗಿರತಕ್ಕಂಥ ಸಮಾಜವನ್ನು ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಭಾಷಣ ಮಾಡಿದರು. ಅವರು ಎಂ. ಎನ್. ರಾಯ್ ಹೆಸರು ಎತ್ತಿಕೊಂಡು ಹೇಳಿ ದರು. ಒಳ್ಳೆಯ ಸುಭಿಕ್ಷ ಸಮಾಜವನ್ನು ಕಟ್ಟುತ್ತೇನೆಂದು ಹೇಳಿದರು. ಆದರೆ ಅವರು ಮಾಡಿರು ವುದು ಏನು? ಅವತ್ತು ಏನು ಇತ್ತು ಇವತ್ತೂ ಹಾಗೇ ಇದೆ. ಇವರು ಎಂ. ಎನ್. ರಾಯ್‌ರವರ ಶಿಷ್ಯರು ಎಂದು ತಿಳಿದುಕೊಂಡೂ ಕೂಡಾ ಸಮಾಜದ ಅಭಿವೃದ್ಧಿಗೆ ಎಂ. ಎನ್. ರಾಯ್‌ರವರ ತತ್ವ ಗಳು ಮತ್ತು ಪ್ರಾಗ್ಮಾಟಿಕ್ ಅಪ್ರೋಚಸ್ ಏನಿವೆ ಅದನ್ನು ಅನುಸರಿಸಿ ಕಾರ್ಯಕ್ರಮಗಳನ್ನು ಹಾಕಿ ಕೊಂಡಿಲ್ಲ. ಸಣ್ಣ ಸಣ್ಣ ಕೆಲಸಗಳನ್ನು ಮಾಡಿಕೊಂಡು ಒಬ್ಬ ಸರಕಾರಿ ಅಧಿಕಾರಿ ತನ್ನ ಕೆಲಸಕಾರ್ಯ ಗಳನ್ನು ನಿರ್ವಹಣೆ ಮಾಡಿಕೊಂಡು ಸಂಬಳ ತೆಗೆದುಕೊಂಡು ಹೋಗುವುದನ್ನು ಏನು ಮಾಡುತ್ತಿದ್ದಾನೆ, ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳೂ ಸಹ ಇದ್ದಾರೆ ಎಂದು ಹೇಳಬೇಕಾಗಿದೆ. ಬೇರೆಯವರಿಗಿಂತ ಇವರು ಭಿನ್ನರಲ್ಲ. ರಾಮಕೃಷ್ಣ ಹೆಗಡೆಯವರಿಗಿಂತ ಇವರು ಭಿನ್ನರಲ್ಲ, ಮಾಡಿದ್ದೇ ಮಾಡಿಕೊಂಡು ಕಾಲ ಕಳೆದುಕೊಂಡು ಹೋಗುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ ನಂತರ ಅವರು ಬಂದ ಮೇಲೆ ಒಂದು ವಿಶೇಷ ಕಾರ್ಯಕ್ರಮ ಏನಪ್ಪ ಎಂದು ಹೇಳಿದರೆ ಈಗ ಮಧ್ಯಸ್ಥಗಾರರ ಕೈವಾಡ ಜಾಸ್ತಿಯಾಗಿದೆ. ಮಧ್ಯಸ್ಥಗಾರರು ಎಲ್ಲಾ ಕಡೆ ಇದ್ದಾರೆ ಅವರ ಕೈವಾಡ ಎಲ್ಲಾ ಕಡೆಗೆ ಇದ್ದಾವೆ. ಆದರೆ ಆಗ ಶೇಕಡಾ ವಾರು ಕಡಿಮೆ ಇತ್ತು ಈಗ ಜಾಸ್ತಿಯಾಗಿದೆ, ಜನಪ್ರಿಯವಾಗಿರತಕ್ಕಂಥ ಕಾರ್ಯಕ್ರಮಗಳನ್ನು ನಿಷ್ಠೆಯಿಂದ ಕಾರ್ಯಗತಮಾಡಿ ಅವರ ಅಭಿವೃದ್ಧಿಗೋಸ್ಕರ ಸರಕಾರ ಪ್ರಯತ್ನ ಮಾಡಿದರೆ ಆಗ ಏನಾ ದರೂ ಒಂದು ಅನುಕೂಲತೆ, ಒಂದು ಸುಭಿಕ್ಷತೆಯನ್ನು ನಾವು ಕಾಣಬಹುದು. ಆದರೆ ಇವತ್ತು ನಾವು ಅದನ್ನು ಕಾಣುತ್ತಿಲ್ಲ ಮಧ್ಯಸ್ಥಗಾರರು ಯಾರಿದ್ದಾರೆ ಎಂದರೆ, ಹೆಂಡ ತಯಾರು ಮಾಡುವವರು ಇದ್ದಾರೆ. ಹೆಂಡ ತಯಾರು ಮಾಡತಕ್ಕಂಥ ಮನುಷ್ಯ ಹೇಗಾದರೂ ಮಾಡಿ ಜಾಸ್ತಿ ಜಾಸ್ತಿ ಹಣ ಸಂಪಾ ದನೆ ಮಾಡುವುದಕ್ಕೆ ಹೋಗುತ್ತಾನೆ ಟ್ಯಾಕ್ಸ್ ಇವೇಡ್ ಮಾಡುತ್ತಾನೆ. ಇವತ್ತಿನ ದಿವಸ ಮದ್ಯ ಬ್ರಾಂದಿ, ವಿಸ್ಕಿ ತಯಾರು ಮಾಡತಕ್ಕ ಜನ ಯಾರು ಕರ್ನಾಟಕದಲ್ಲಿ ಇದ್ದಾರೆ, ಆ ಜನಗಳು ಸರಿಯಾಗಿ ಟ್ಯಾಕ್ಸ್ ಕಟ್ಟುತ್ತಿದ್ದಾರೆಯೇ ? ಎಕ್ಸೈಸ್ ಡ್ಯೂಟಿ ಕಟ್ಟುತ್ತಿದ್ದಾರೆಯೇ ? ನಾನು ಬಹಳ ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇನೆ ಯಾರೂ ಕೊಡಬೇಕಾಗಿರತಕ್ಕಂಥ ಬಾಕಿ ಕೊಡುವುದಿಲ್ಲ, ಎಕ್ಸೈಸ್ ಡಿಪಾರ್ಟ್ ಮೆಂಟ್ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಇವತ್ತು ಮಾರ್ಕೆಟ್‌ನಲ್ಲಿ ನೋಡಿ ಇದು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ವಿಪರೀತ ಆಗಿತ್ತು. ಇವರ ಕಾಲದಲ್ಲೂ ತಪ್ಪಿಲ್ಲ, ಸೆಕೆಂಡ್ಸ್ ಎಂದು ಇದಕ್ಕೆ ಹೆಸರು. ಟ್ಯಾಕ್ಸ್ ಕೊಟ್ಟಿರತಕ್ಕಂಥ ಬ್ರಾಂದಿ ಬಾಟಲ್‌ಗೆ ೭೦-೧೮೦ ಆದರೆ, ಸೆಕೆಂಡ್ಸ್ ಎನ್ನುವುದಕ್ಕೆ ೭೫-೮೦ ಆಗುತ್ತದೆ. ಅದೇ ಬಾಟಲ್, ಅದೇ ಬ್ರಾಂಡ್ ಇಷ್ಟಕ್ಕೆ ಸಿಗುತ್ತದೆ. ಅಂದರೆ ಈ ಹಣ ಎಲ್ಲಿ ಹೋಗು ತ್ತಿದೆ. ಸರಕಾರದ ಖಜಾನೆಗೆ ಬರತಕ್ಕಂಥ ಹಣವನ್ನು ಬೇರೆ ಕಡೆಗೆ ತಿರುಗಿಸಿ ಯಾರೋ ಮಧ್ಯಸ್ಥ ಗಾರರ ಮುಖಾಂತರ ಪಾರ್ಟಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಹೋದರೆ ನಾವು ಈ ದೇಶದಲ್ಲಿ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವೇ ? ಹಣ ಎಲ್ಲಿಂದ ಬರಬೇಕು?

ರಿಸೋರ್ಸ್ ಬರಬೇಕು. ಇನ್‌ಕಮ್ ಬರಬೇಕು. ಅಧಿಕ ಉತ್ಪಾದನೆ ಮಾಡಬೇಕೆಂದು ಹೇಳುತ್ತೇವೆ. ಅದು ಹೇಗೆ ಬರುತ್ತದೆ? ಇವತ್ತು ಈ ಸೆಕೆಂಡ್ಸ್ ಮೇಲೆ ಇರತಕ್ಕಂಥ ಹಿಡಿತವೆಲ್ಲಾ ಮಧ್ಯಸ್ಥಿಕೆದಾರರ ಕೈಯಲ್ಲಿ ಹೋಗಿದೆ. ಅವರು ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಎನ್‌ಕರೇಜ್ ಮಾಡುತ್ತಿದ್ದಾರೆ. ನಿಮ್ಮಲ್ಲಿ ಉನ್ನತ್ತ ಮಟ್ಟದ ಅಧಿಕಾರಿಗಳು ಇಲ್ಲವೇ ? ಸರ್ಕಾರ ಇಲ್ಲವೇ? ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳು ಸುಮ್ಮನೆ ಇರುವುದಕ್ಕೆ ಕಾರಣವೇನು? ಇದಕ್ಕೆ ಇಲಾಖಾ ಮೇಲಾಧಿಕಾರಿಗಳು, ಮತ್ತು ಮಂತ್ರಿಗಳು ಅವರಿಗೆ ಪ್ರೋತ್ಸಾಹ ನೇರವಾಗಿ ಕೊಟ್ಟಿದ್ದಾರೆ ಎನ್ನುವ ನಿರ್ಣಯಕ್ಕೆ ನಾವು ಬರಬೇಕಾಗುತ್ತದೆ. ಇಲ್ಲದಿದ್ದರೆ ಇಂತಹ ಕೆಲಸ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇ ರೀತಿಯಾಗಿ ಬಾಕಿ ಬರತಕ್ಕಂಥ ಬಾಬ್ತುಗಳು ಏನಿವೆ ಆ ಬಾಬ್ತುಗಳಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಯಾರಿದ್ದಾರೆ ಅವರು ಸರಿಯಾಗಿ ತಮ್ಮ ಕೆಲಸ ನಿರ್ವಹಣೆ ಮಾಡದಂತೆ ಮಾಡಿ ಬಾಕಿಯಲ್ಲಿ ಅವರೂ ಸಹ ಪಾಲ್ಗೊಳ್ಳುವಂತೆ ಒಂದು ಒಳಸಂಚು. ಹೊಣೆಗಾರಿಕೆ ಮತ್ತು ಮನೋವೃತ್ತಿ ಈ ಸರ್ಕಾರದಲ್ಲಿ ಬೆಳೆದಿದೆ ಅದು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಈ ರಾಜ್ಯದ ಜನರ ಕ್ಷೇಮ ಆಗುವುದಿಲ್ಲವೆನ್ನುವ ಮಾತನ್ನು ನಾನು ಸ್ಪಷ್ಟವಾಗಿ ತಮಗೆ ಹೇಳುತ್ತೇನೆ. ಈಗ ನಾನು ಒಂದು ಮಾತನ್ನು ನಾನು ತಮಗೆ ಹೇಳುತ್ತೇನೆ. ಬೆಂಗಳೂರು ನಗರದ ಸುತ್ತಮುತ್ತಲೂ ಇರತಕ್ಕಂಥ ಜಮೀನುಗಳನ್ನು ನೀವು ಅಕ್ವಿಸಿಷನ್ ಹೆಸರಿನಲ್ಲಿ ಸ್ವೇಚ್ಛಾನುಸಾರವಾಗಿ ಅಕ್ವೈರ್ ಮಾಡಿಕೊಂಡು ಮಧ್ಯಸ್ಥಿಕೆದಾರರಿಗೆ ಅದನ್ನು ಬಿಟ್ಟುಕೊಟ್ಟು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಏನಿದೆ ಅದು ಕಾನೂನು ಪ್ರಕಾರವಾಗಿ ಸ್ಥಾಪನೆಯಾಗಿರತಕ್ಕಂಥ ಒಂದು ಬೋರ್ಡ್. ಇಂತಹ ಒಂದು ಸಂಸ್ಥೆ ಆ ಕೆಲಸವನ್ನು ನಿರ್ವಹಣೆ ಮಾಡಲು ತಾವು ಬಿಡದೆ ಅದಕ್ಕೆ ಬರೀ ಎನ್. ಒ. ಸಿ. ಕೊಡುವಂತಹ ಕೆಲಸ ಮಾತ್ರ ಕೊಟ್ಟು ಇರತಕ್ಕಂಥ ೨೮೭.೮೮ ಕೋ-ಆಪರೇಟಿವ್ ಸೊಸೈಟಿಗಳಿಗೆ ಅಕ್ವಿಸಿಶನ್ ಆಕ್ಟ್ ಪ್ರಕಾರ ಅಕ್ವೈರ್ ಮಾಡಿಕೊಂಡಂತಹ ಜಮೀನು ಕೊಡಲು ಹೊರಟಿದ್ದೀರಿ. ಆದರೆ ಈ ಜಮೀನನ್ನು ಅಕ್ವೈರ್ ಮಾಡಿಕೊಂಡಂತಹ ಉದ್ದೇಶ ಏನು ? ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ತನ್ನ ಕರ್ತವ್ಯ, ತನ್ನ ಹೊಣೆಗಾರಿಕೆಯನ್ನು ನಿರ್ವಹಣೆ ಮಾಡಲು ಅನೇಕ ಅಡ್ಡಿ ಆತಂಕಗಳನ್ನು ನೀವು ಉಂಟು ಮಾಡಿ ಅವರನ್ನು ನಿಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಂಡು ಸುಮಾರು ೨೮೮ ಸೊಸೈಟಿಗಳಿಗೆ ಮಧ್ಯಸ್ಥಿಕೆ ಜನರಿಂದ ಜಮೀನು ಕೊಡಲು ಹೊರಟಿದ್ದೀರಿ, ಅನೇಕ ವರ್ಷಗಳಿಂದ ಆಸ್ತಿಗಳನ್ನು ಇಟ್ಟುಕೊಂಡು ಜೀವನ ನಡೆಸಿಕೊಂಡು ಬರತಕ್ಕಂಥ ರೈತರಿಗೆ ತಾವೇತಕ್ಕೆ ಅನ್ಯಾಯ ಮಾಡುತ್ತಿದ್ದೀರಿ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಮಧ್ಯಸ್ಥಿಕೆದಾರರಿಗೆ ತಾವು ಎನ್‌ಕರೇಜ್ ಮಾಡುತ್ತಿರುವುದರಿಂದ ನೀವು ಇದರಲ್ಲಿ ಆಸಕ್ತಿಯನ್ನು ಹೊಂದಿದ್ದೀರಿ ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ. ಆ ನಿರ್ಣಯಕ್ಕೆ ನಾವು ಬರಲೇಬೇಕಾಗುತ್ತದೆ. ಸ್ವಾಮಿ ನಾನು ತಮಗೆ ಇನ್ನು ಒಂದು ಮಾತನ್ನು ಹೇಳುತ್ತೇನೆ. ಇಲ್ಲಿ ಒಂದು ಸ್ಟೇಟ್‌ಮೆಂಟ್ ಇದೆ, ಪ್ರೈವೇಟ್ ಗೃಹನಿರ್ಮಾಣ ಸಂಘದವರು ಸುಮಾರು ೧೨೦ ಕೋಟಿ ರೂಪಾಯಿಗಳನ್ನು ಸರ್ಕಾರದ ಖಜಾನೆಯಲ್ಲಿ ಜಮಾ ಮಾಡಿದ್ದಾರೆ, ಅದಕ್ಕೆ ಅವರಿಗೆ ಜಮೀನು ಅಕ್ವೈರ್ ಮಾಡಿ ಕೊಡಬೇಕೆಂದು ಇದೆ. ತಾವು ರೈತರ ಬಗ್ಗೆ ಹಿಂದೆ ಹೋರಾಟ ಮಾಡಿದವರು ಅದು ನನ್ನ ಗಮನದಲ್ಲಿ ಇಲ್ಲವೆಂದು ಅಲ್ಲ. ರೈತರಿಗೆ ತಮ್ಮ ಜಮೀನು ಒಂದು ಪ್ರಾಧಾನ್ಯತೆ ಅದನ್ನು ಬಿಟ್ಟರೆ ಅವರಿಗೆ ಬೇರೆ ಮಾರ್ಗವೇ ಇಲ್ಲ. ಆ ಭೂಮಿಯಲ್ಲಿ ಅವರು ಫಲ ಬೆಳೆದರೆ ಉಂಟು ಇಲ್ಲದಿದ್ದರೆ ಇಲ್ಲ. ಆದರೆ ಬೆಂಗಳೂರು ನಗರದ ಸುತ್ತಮುತ್ತ ಸುಮಾರು ೧೦ ಗುಂಟೆ ೨೦ ಗುಂಟೆ ಜಮೀನು ಇಟ್ಟುಕೊಂಡು ಸುಮಾರು ೧೦-೧೫ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದವರು ಇದ್ದಾರೆ. ಆ ಜಮೀನುಗಳೆಲ್ಲಾ ಫಲವತ್ತಾದ ಜಮೀನುಗಳು. ಆ ಜಮೀನುಗಳನ್ನು ಕಾರ್ಪೊರೇಷನ್ ಆಕ್ಟ್ ಪ್ರಕಾರ ಇರಲಿ ಬಿ.ಡಿ.ಎ. ಆಕ್ಟ್ ಪ್ರಕಾರ ಇರಲಿ, ಪ್ಲಾನಿಂಗ್ ಆಕ್ಟ್ ಪ್ರಕಾರವೇ ಆಗಲಿ, ಈ ಎಲ್ಲಾ ಆಕ್ಟ್‌ಗಳ ಹೆಸರಿನಲ್ಲಿ ಅಕ್ವೈರ್ ಮಾಡಿ ಸುಮಾರು ೧೦ ಸಾವಿರ ಎಕರೆ ಜಮೀನು ಕೊಡತಕ್ಕಂಥ ಪ್ರಯತ್ನ ನಡೆದಿದೆ. ಇದರಲ್ಲಿ ನಿಮ್ಮ ಸರ್ಕಾರದ ಆಸಕ್ತಿ ಇಲ್ಲವೆಂದು ನಾವು ಹೇಗೆ ಹೇಳುವುದು. ಇದರಲ್ಲಿ ಕನ್ನಡಿಗರು ಯಾರಿದ್ದಾರೆ? ಬೆಂಗಳೂರಿನಲ್ಲಿ ವಾಸ ಮಾಡತಕ್ಕಂಥ ಜನರು ಯಾರಿದ್ದಾರೆ? ನೀವು ಈ ಜಮೀನುಗಳನ್ನು ಅಕ್ವೈರ್ ಮಾಡಿ ಈ ಸಂಘಗಳಿಗೆ ಕೊಡಲು ಹೊರಟಿದ್ದೀರಿ. ಯಾರು ಗೃಹನಿರ್ಮಾಣ ಮಾಡಲು ಮುಂದೆ ಬರುತ್ತಾರೋ ಅವರಿಗೆ ಮಧ್ಯಸ್ಥಿಕೆದಾರರಿಂದ ಕೊಡಲು ಹೊರಟಿದ್ದೀರಿ. ಇದರಿಂದ ಬೆನಫಿಷಿಯರಿಗಳಾಗುವವರು ಯಾರು? ಇದಕ್ಕೆ ಸರ್ಕಾರದ ಬೆಂಬಲ ಇಲ್ಲವೆಂದು ನಾವು ಹೇಗೆ ಹೇಳುವುದು? ಇದರಿಂದ ಇವತ್ತು ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಈಗ ನಮ್ಮ ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಮುಖ್ಯವಾಗಿರತಕ್ಕಂಥ ಜಮೀನುಗಳನ್ನು ಅಕ್ವೈರ್ ಮಾಡಿದ್ದರಿಂದ ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದಕ್ಷಿಣ ತಾಲ್ಲೂಕುಗಳೆರಡಲ್ಲಿಯೂ ಸಹ ಸುಮಾರು ೭ ಲಕ್ಷ ಜನ ನಿರುದ್ಯೋಗಿಗಳಾಗಿದ್ದಾರೆ. ಅವರ ಜಮೀನುಗಳನ್ನು ತಾವು ಕಿತ್ತುಕೊಂಡು ಯಾರಿಗೆ ಸಹಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ? ಇದರಿಂದ ಯಾವ ಬಡವರಿಗೂ ಸಹಾಯ ಸಿಕ್ಕಿಲ್ಲ ಅಕ್ವಿಸಿಷನ್ ಮಾಡಿ

ಕೊಂಡಿದ್ದರಿಂದ ಲಾಭ ಏನು ಬಂದಿದೆ ಆ ಲಾಭ ಎಲ್ಲಾ ಆ ಜನರಿಗೆ ಸಿಗುವುದಕ್ಕೆ ಸರ್ಕಾರದ ಪ್ರಾಧಾನ್ಯತೆ ಏನಿದೆ ಇದು ರೈತರಿಗೆ ವಿರೋಧ ಮಾಡತಕ್ಕಂಥಾದ್ದು.

ಇದು ರೈತರುಗಳ ಹಿತ ರಕ್ಷಣೆ ಮಾಡತಕ್ಕಂಥದ್ದಲ್ಲ. ಇನ್ನೂ ೭-೮ ಲಕ್ಷ ಜನರನ್ನು ನಿರುದ್ಯೋಗಿಗಳನ್ನಾಗಿ ಸೃಷ್ಟಿ ಮಾಡುತ್ತಿದ್ದೀರಿ. ಕೆಲವರಿಗೆ ಮಾತ್ರ ಲಾಭದಲ್ಲಿ ಆಸಕ್ತಿ ವಹಿಸುವಂಥ ಕೆಲಸಕ್ಕೆ ನೀವು ಉತ್ತೇಜನ ಕೊಡುತ್ತಿದ್ದೀರೆಂದು ನಾವು ನಿರ್ಣಯಕ್ಕೆ ಬರಬೇಕಾಗುತ್ತದೆ, ಈಗ ಶ್ರೀಮಾನ್ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾರೆ, ಹಿಂದ ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಒಂದು ಸಮಿತಿ ಮಾಡಿ ಅದಕ್ಕೆ ಬೊಮ್ಮಾಯಿಯವರನ್ನು ಅಧ್ಯಕ್ಷರನ್ನಾಗಿ ಮಾಡಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಏನು ಒಂದು ಅಣೆಕಟ್ಟು ಕಟ್ಟಿ ಅಲ್ಲಿನ ಜಮೀನು ಮುಳುಗಡೆಯಾಗಿ ಜನರು ನಿರ್ಗತಿಕರಾಗಿದ್ದಾರೋ, ಯಾರು ಅಗ್ರಿಕಲ್ಚರಲ್ ಲೇಬರರ್ಸ್‌ಗಳಿದ್ದಾರೋ ಅವರುಗಳಿಗೆ ಜಮೀನು ಕೊಡುವುದಕ್ಕೆ ಒಂದು ರಿಪೋರ್ಟ್ ಕೊಡಬೇಕೆಂದು ಹುಕುಂ ಮಾಡಿದ್ದೆ. ಆಗ ಅಲ್ಲಿ ಏನಾಗಿತ್ತು ಎಂದರೆ, ೧೦-೧೫ ಜನ ಸದಸ್ಯರಿರುವ ಕುಟುಂಬದವರು ನಾವೆಲ್ಲಾ ಬೀದಿ ಪಾಲಾಗಿದ್ದೇವೆ, ನಮಗೆ ತಲಾ ೪ ಎಕರೆ ಜಮೀನುಗಳು ಬೇಕೆಂದು ಸಾಹುಕಾರರು ಎಲ್ಲಾ ಜಮೀನುಗಳನ್ನು ತಾವೇ ಇಟ್ಟುಕೊಳ್ಳುವಂಥ ಕೆಲಸ ಮಾಡಿದರು. ಇದರಿಂದ ನಿರ್ಗತಿಕರಾದವರಿಗೆ ಜಮೀನು ಸಿಗಲಿಲ್ಲ. ಬರೀ ಸಾಹುಕಾರರುಗಳಿಗೇ ಜಮೀನು ಹಂಚತಕ್ಕ ಕೆಲಸ ಆಯಿತು. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಬೊಮ್ಮಾಯಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೆ, ಹೊಳೆನರಸೀಪುರದಲ್ಲಿ ಏನು ಜಮೀನು ಇತ್ತು ಅವುಗಳನ್ನು ವಿಲೇವಾರಿ ಮಾಡುವ ಬಗ್ಗೆ ಒಂದು ರಿಪೋರ್ಟ್‌ನ್ನು ಅವರು ಕೊಟ್ಟರು. ಆಮೇಲೆ ಅವರದೇ ಸರ್ಕಾರ ಬಂದ ಮೇಲೆ ಅವರೇ ರೆವಿನ್ಯೂ ಮಂತ್ರಿಗಳಾಗಿದ್ದರು. ಆಗಲೂ ಆ ರಿಪೋರ್ಟ್‌ನ್ನು ಅವರು ಜಾರಿ ಮಾಡಲಿಲ್ಲ. ಈಗ ಮುಖ್ಯಮಂತ್ರಿಗಳಾಗಿದ್ದಾರೆ ಈಗಲೂ ಅದನ್ನು ಜಾರಿ ಮಾಡಲಿಲ್ಲ. ನೀವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದಿದ್ದರೆ ನಿಮ್ಮ ರಿಪೋರ್ಟ್‌ನ್ನು ನೀವೇ ಏಕೆ ಜಾರಿಗೆ ಕೊಡಲಿಲ್ಲ ? ಹೊಳೆನರಸೀಪುರದ ಶ್ರೀಮಾನ್ ದೇವೇಗೌಡರು ಈಗ ಜನತಾ ಪಕ್ಷದಲ್ಲಿ ಇದ್ದಾರೆ. ಅವರ ಹೆದರಿಕೆ ನಿಮಗೆ ಏಕೆ ಬೇಕು ? ಪುನ: ಅವರನ್ನು ನಿಮ್ಮ ಜನತಾದಳಕ್ಕೆ ಸೇರಿಸಿಕೊಂಡು ಹಳೇ ರೀತಿಯಲ್ಲಿ ಸರ್ಕಾರ ನಡೆಸಬೇಕೆಂದು ಮಾಡುತ್ತಿದ್ದೀರಾ ? ಶ್ರೀಮಾನ್ ಬೊಮ್ಮಾಯಿವರು ಆ ರಿಪೋರ್ಟ್‌ನ್ನು ಜಾರಿ ಮಾಡುವುದಕ್ಕೆ ಏಕೆ ಮನಸ್ಸು ಮಾಡಲಿಲ್ಲ ? ಇನ್ನೂ ಒಂದು ಅಂಶ ಎಂದರೆ ವಿಧಾನಸಭೆಯು ಡೆಮಾಕ್ರಸಿಯಲ್ಲಿ ಬಹಳ ಗೌರವಯುತವಾದ ಒಂದು ಅಂಗ. ಈ ವಿಧಾನಸಭೆಯಲ್ಲಿ ತೀರ್ಮಾನವಾದ ಎಲ್ಲಾ ವಿಷಯಗಳು ಜಾರಿಯಲ್ಲಿ ಬರಬೇಕು. ನಾನೂ ಸಹ ಬಹಳ ದಿವಸದಿಂದ ವಿಧಾನಸಭೆಯ ಸದಸ್ಯನಾಗಿದ್ದೇನೆ. ವಿಧಾನಸಭೆಗೆ ಎಲ್ಲಾ ರೀತಿಯ ಮನ್ನಣೆ ಉಂಟು ? ಗೌರವ ಉಂಟು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ರೆವಿನ್ಯೂ ಮಂತ್ರಿಗಳಾಗಿದ್ದಾಗ ಬೊಮ್ಮಾಯಿಯವರನ್ನು ಒಂದು ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ವರದಿ ತರಿಸಿಕೊಂಡಿರಿ, ಆ ವರದಿಯಲ್ಲಿ ಇರುವ ಶಿಫಾರಸ್‌ಗಳು ಏನು ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೃಷ್ಣಪ್ಪನವರು ಇದರಲ್ಲಿ ಬಹಳ ಆಸಕ್ತಿ ವಹಿಸುತ್ತಿದ್ದಾರೆ. ಬೊಮ್ಮಾಯಿಯವರು ಈಗ ಮುಖ್ಯಮಂತ್ರಿಗಳಾಗಿದ್ದಾರೆ, ಅವರೇ ಆ ವರದಿಯನ್ನು ತಯಾರು ಮಾಡಿದ್ದವರು, ನೀವು ಅವರನ್ನೇ ಕೇಳಿಕೊಳ್ಳಿ. ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ವಿಧಾನಸಭೆಗೆ ಗೌರವ ಇಲ್ಲದ ಹಾಗಾಗಿದೆ. ವಿಧಾನಸಭೆಯು ತೀರ್ಮಾನ ತೆಗೆದುಕೊಳ್ಳತಕ್ಕಂಥ ಕ್ಷೇತ್ರ. ಈ ಕ್ಷೇತ್ರವು ಬಟ್ಟಾ ಬಯಲಾಗಿ ಹೋಗಿದೆ. ಯಾವುದೇ ಸಮಸ್ಯೆಗಳನ್ನೂ ವಿಧಾನ ಸಭೆಯಲ್ಲಿ ಕೇಳುವ ಹಾಗೆಯೇ ಇಲ್ಲ. ಗೌರ್ನಮೆಂಟ್ ನೌಕರರುಗಳಿಗೆ ಸಂಬಳ ಎಷ್ಟು ಸ್ವಾಮಿ ಹೆಚ್ಚಿಸುವುದು ? ೮ ಸಾವಿರ ೯ ಸಾವಿರ, ಇವರು ಏನು ಕೆಲಸ ಮಾಡುತ್ತಾರೆ. ೧೦ ಗಂಟೆಗೆ ಬಂದು ೧ ಗಂಟೆಯವರೆಗೆ ಕಾಫಿಗೆ ಹೋಗುತ್ತಾರೆ. ದಿನದಲ್ಲಿ ೩ ಗಂಟೆಗಳ ಕಾಲ ಸಹ ಕೆಲಸ ಮಾಡುವುದಿಲ್ಲ. ಇಂಥವರಿಗೆ ೯ ಸಾವಿರ. ೭ ಸಾವಿರ, ೮ ಸಾವಿರ ಸಂಬಳ ಕೊಡುತ್ತಿದ್ದೀರಿ, ಯಾರನ್ನು ಕೇಳಿ ಸಂಬಳವನ್ನು ಜಾಸ್ತಿ ಮಾಡುತ್ತೀರಿ ? ವಿಧಾನ ಸಭೆ ಇಲ್ಲವೆ ? ಇದರ ಬಗ್ಗೆ ದಯಮಾಡಿ ಕೇಳಬೇಕು ತಾವು. ಇದಕ್ಕೆಲ್ಲಾ ವಿಧಾನಸಭೆಯ ಮಾನ್ಯತೆ, ಒಪ್ಪಿಗೆ ಅನಿವಾರ್ಯ. ಇವತ್ತು ಏನಾಗಿದೆ ಸುಮಾರು ೧೧೩ ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ತಿಂಗಳಿಗೆ ಸಂಬಳ ಕೊಡಲಾಗುತ್ತಿದೆ. ಒಂದು ವರ್ಷಕ್ಕೆ ೧೩೫೦ ಕೋಟಿ ರೂಪಾಯಿಗಳಷ್ಟು ಹಣವನ್ನು ಅಧಿಕಾರಿ ವರ್ಗಕ್ಕೆ ಸಂಬಳ ಕೊಡಲಾಗುತ್ತಿದೆ, ಉಳಿದ ಕೆಲಸಗಳಿಗೆ ಏನು ಖರ್ಚು ಮಾಡುವುದು ? ಹಣ ಎಲ್ಲಿಂದ ಬರಬೇಕು ? ನೀವು ಆದಾಯ ಬರುವುದನ್ನು ಸರಿಯಾಗಿ ವಸೂಲಿ ಮಾಡುವ ಹಾಗೆಯೇ ಇಲ್ಲ. ಸಾಲ ಕೊಡುತ್ತಲೇ ಇದ್ದೀರಿ.

ಕೊಟ್ಟವನು ಕೋಡಂಗಿ, ತೆಗೆದುಕೊಂಡವನು ವೀರಭದ್ರ ಎನ್ನುವ ಹಾಗೆ ಆಗಿದೆ. ನಿಮ್ಮ ಸರ್ಕಾರ ಬಂದ ಮೇಲೆ ಯಾರಿಂದ ನೀವು ಸಾಲ ವಸೂಲಿ ಮಾಡಿದ್ದೀರಿ ?

ಇಂಟ್ರೆಸ್ಟ್ ಫ್ರೀ ಲೋನ್ ಮಾತ್ರ ಕೊಟ್ಟಿದ್ದಾರೆ. ಒಂದು ಕೋಟಿ. ಎರಡು ಕೋಟಿ, ಮೂರು ಕೋಟಿ. ಹೀಗೆ ಕೊಟ್ಟ ನಿದರ್ಶನಗಳು ನಮ್ಮಲ್ಲಿ ಇವೆ. ನಮ್ಮ ಆರ್ಥಿಕ ಇಲಾಖೆಯವರು ಇದ್ದಾರೆ, ಅವರು ಒಂದು ರೀತಿಯಲ್ಲಿ ಕೈಗೊಂಬೆಗಳು. ಏನು ಬೇಕಾದರೂ ಕೊಡಬಹುದು, ಏತಕ್ಕೆ ಬೇಕಾದರೂ ಕೊಡಬಹುದು. ಅವರಿಗೆ ನೀತಿ ನಿಯಮಗಳು ಬೇಕಾಗಿಲ್ಲ. ಅಕೌಂಟೆಂಟ್ ಜನರಲ್‌ರವರು ಕೊಟ್ಟ ರಿಪೋರ್ಟ್ ಪ್ರಕಾರ ನೋಡಿದರೆ ಏನೇನು ನ್ಯೂನ್ಯತೆಗಳು ಇವೆ ಎಂದು ಗೊತ್ತಾಗುತ್ತದೆ. ಆರ್ಥಿಕ ಇಲಾಖೆಯವರು ಹೀಗೆ ಧಾರಾಳವಾಗಿ ಹಣ ಕೊಡತಕ್ಕಂಥ ಪ್ರವೃತ್ತಿಯನ್ನು ಬಿಟ್ಟು ಬಿಡ ಬೇಕು. ನಿಯಮಗಳನ್ನು ಬಿಟ್ಟು ಯಾರು ಅಧಿಕಾರಕ್ಕೆ ಬರುತ್ತಾರೆ. ಅವರಿಗೆ ನಮಸ್ಕಾರ ಮಾಡಿ, ಅವರು ಹೇಳಿದ ಹಾಗೆ ಕೇಳುವುದು, ಇಂಥ ಒಂದು ಪ್ರವೃತ್ತಿ ಇರುವಾಗ ಈ ಸರಕಾರದ ಹಣದ ಸಂಪತ್ತು ಏನಿದೆ ಅದನ್ನು ರೂಢಿಸಿಕೊಳ್ಳಲಿಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂದು ತಾವುಗಳು ದಯವಿಟ್ಟು ಹೇಳಬೇಕು.

ಸನ್ಮಾನ್ಯ ಬೊಮ್ಮಾಯಿಯವರು ಅಧಿಕಾರಕ್ಕೆ ಬಂದಮೇಲೆ ಈ ಮಠಗಳವರು ಯಾರ್ಯಾರು ಇದ್ದಾರೆ ಅವರುಗಳು ಕರೆದಲ್ಲಿಗೆ ಹೋಗುವುದು ಆಗಿಬಿಟ್ಟಿದೆ. ಮಠಗಳು ನಮ್ಮಲ್ಲಿ ಇಬ್ಬರಿಗೆ ಇವೆ. ಬ್ರಾಹ್ಮಣರಿಗೆ. ಲಿಂಗಾಯಿತರಿಗೆ ಮಠಗಳು ಇವೆ. ಮಠಗಳವರು ಕರೆದಾಗ ಹೋಗಬಾರದು ಎಂದು ನಾನು ಹೇಳುವುದಿಲ್ಲ. ಮಠಗಳಿಗೆ ಹೋಗುವವರು ಹೋಗಲಿ. ಈ ಸಮಾಜದಲ್ಲಿ ನೂರಾರು ಜಾತಿಗಳು ಇವೆ. ಎಲ್ಲರಿಗೂ ಮಠಗಳು ಇವೆಯೇ ? ಎಸ್. ಸಿ, ಯವರಿಗೆ ಮಠ ಇದೆಯೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಅವರಿಗೆ ಆದಿಚುಂಚನಗಿರಿ ಮಠವೇ ಮಠ...

ಶ್ರೀ ಬಿ. ಬಸವಲಿಂಗಪ್ಪ.—ಇದು ಸಲ್ಲದ ಮಾತು. ಹಿಂದುಗಳಿಗೆ ಚತುರ್ವರ್ಣಗಳು ಇವೆ. ಸಪ್ತವರ್ಣೀಯರೋ ಅಥವಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂದು ನಾಲ್ಕು ವರ್ಣ ಗಳು ಇವೆ. ಅದರ ವಿನಹ ಬೇರೆ ವರ್ಣ ಇಲ್ಲ. ನಾವುಗಳು ಯಾವುದಕ್ಕೂ ಸೇರಿಲ್ಲ. ನಾವು ಶೂದ್ರರು ಅಲ್ಲ. ಶೂದ್ರರೆಂದು ಒಂದು ವರ್ಗ ಇತ್ತು, ಈಗ ಅದು ಕೂಡ ಹಾಳಾಗಿ ಹೋಯಿತು. ನಾವು ಪಂಚ ವರ್ಣೀಯರೋ ಅಥವಾ ಸಪ್ತವರ್ಣೀಯರೋ ಅಥವಾ ೧೧ನೇ ವರ್ಣೀಯರೋ ಏನೋ ಅಂತೂ ನಮಗೆ ಯಾವ ಮಠವೂ ಇಲ್ಲ. ಪದ್ಧತಿ ಪ್ರಕಾರ, ರೂಢಿ ಪ್ರಕಾರ ಹಿಂದೂ ಸಮಾಜದಲ್ಲಿ ಇದ್ದೇವೆ. ಎಲ್ಲಿಯ ವರೆಗೆ ಇರಬೇಕೋ ಅಲ್ಲಿಯವರೆಗೆ ಇರುತ್ತೇವೆ. ಇಲ್ಲದಿದ್ದರೆ ಹೋಗುತ್ತೇವೆ. ಒಟ್ಟಿನಲ್ಲಿ ನಮಗೆ ಮಠಗಳು ಇಲ್ಲ ಎಂದು ಮಾಡಿದ್ದೇವೆ. ನೀವುಗಳು ಅಧಿಕಾರದಲ್ಲಿದ್ದಾಗ ಫಂಕ್ಷನ್‌ಗಳಿಗೆ ಹೋದರೆ ಅಲ್ಲಿಯವರು ಅವರ ಬೇಡಿಕೆಗಳ ಹೊರೆಯನ್ನು ನಿಮ್ಮ ಮೇಲೆ ಹೊರಿಸುತ್ತಾರೆ. ಹೀಗೆ ಒಂದು ಜಾತಿ ಯವರ ಹತ್ತಿರ ನೀವು ಫಂಕ್ಷನ್‌ಗೆ ಹೋದರೆ ಬೇರೆ ನೂರಾರು ಜಾತಿಗಳವರು ಇದ್ದಾರೆ, ಅವರು ಎಲ್ಲಿಗೆ ಹೋಗಬೇಕು ? ಯಾವ ಮಠಗಳನ್ನು ಅವರು ನೋಡಿಕೊಳ್ಳಬೇಕು ? ನಿಮ್ಮ ವರ್ಗದವರಿಗೆ ಮಠಗಳು ಬೇಡವೆ ? ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಮಠ ಇದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ, ಅವರವರಿಗೆ ತಿಳಿದಹಾಗೆ ಅವರು ಅನುಸರಿಸಿಕೊಂಡು ಬರುತ್ತಾ ಇದ್ದಾರೆ. ಮಾನ್ಯ ಎಚ್. ಟಿ. ಕೃಷ್ಣಪ್ಪನವರೂ ಕೂಡ ಒಂದು ಮಠವನ್ನು ಮಾಡಿಕೊಂಡಿದ್ದಾರೆ. ಅವರು ಚೆನ್ನಾಗಿ ಮಾಡಿಕೊಂಡಿದ್ದಾರೆ. ಅವರು ಆಗ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಇದ್ದರು. ಈಗ ತಮ್ಮನ್ನು ಮುಂದುವರೆದ ಪಟ್ಟಿಯಲ್ಲಿ ಸೇರಿಸಬೇಕೆಂದು ಹೊರಟಿದ್ದಾರೆ. ಈ ಕುರಿತು ಒಂದು ಮಾತನ್ನು ನಾನು ತಮಗೆ ಹೇಳುತ್ತೇನೆ. ಈ ಮಠದ ಮಾನ್ಯತೆ ಯಾರಿಗೆ ಇರಬೇಕು ? ಮಾನ್ಯತೆ ಇಲ್ಲದೇ ಹೋದರೆ ನೀವು ಅಲ್ಲಿ ಮಠಕ್ಕೆ ಮಾನ್ಯತೆ ಕೊಟ್ಟು ಸರಕಾರದ ಜವಾಬ್ದಾರಿ ಏನು ಇದೆ, ಅಧಿಕಾರ ಇದೆ, ಅದನ್ನು ಹಂಚತಕ್ಕಂಥ ಪ್ರವೃತ್ತಿ ಬಂದರೆ ಅದು ಮಾನ್ಯ ಆಗುತ್ತದೆ ಅಥವಾ ಸಮಾಜದ ಉದ್ಧಾರ ಆಗುತ್ತದೆ ಎಂದು ಹೇಳ ಬಯಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಬಸವಲಿಂಗಪ್ಪನವರ ವೈಜ್ಞಾನಿಕತೆಯನ್ನು ಪ್ರಶ್ನೆ ಮಾಡುವುದಿಲ್ಲ. ಎಷ್ಟೋ ಮಠಗಳು ನಮ್ಮಲ್ಲಿ ಬಹಳ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿವೆ. ಎಲ್ಲವೂ ಕೆಟ್ಟವುಗಳು ಎಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೃಷ್ಣಪ್ಪನವರು ೪೦೦ ವರ್ಷಗಳ ಹಿಂದಿನ ಮಾತನ್ನೇ ಆಡುತ್ತಾ ಇದ್ದಾರೆ. ಎಕ್ಲೋಸಿಯಾಸ್ಟಿಕಲ್ ಇನ್ಸಿಟಿಟ್ಯೂಶನ್ಸ್ ಎಂದು ಹೇಳಿ ಬಿಟ್ಟು ಈ ಸರಕಾರ ಮತ್ತು ಮಠಗಳು ಒಟ್ಟಾಗಿ ರಾಜ್ಯಭಾರ ಮಾಡುತ್ತಾ ಇದ್ದರು. ಮೊದಲು ಮೊದಲು ಈ ಮಠಗಳವರೇ ರಾಜ್ಯಭಾರ ಮಾಡುತ್ತಾ ಇದ್ದರು. ಆ ಸಂದರ್ಭದಲ್ಲಿ ಅಲ್ಲಲ್ಲಿ ಹೋರಾಟಗಳು ನಡೆದು

ಅವುಗಳನ್ನು ಮೂಲೆಗೆ ಒತ್ತಿ, ನಂತರ ಪ್ರಜಾಪ್ರಭುತ್ವ ಬಂತು. ಇಂತಹವರ ಸಹವಾಸವೇ ಬೇಡ ಎಂದು ಇವೊತ್ತಿನ ದಿವಸ ಪ್ರಜಾಪ್ರಭುತ್ವದ ಹೆಸರಿನಲಿ ರಾಜ್ಯಭಾರ ಮಾಡುತ್ತಾ ಇದ್ದೇವೆ.

ಸ್ವಾಮಿ, ಜನರು ಗೌರ್ನಮೆಂಟ್ ಬಂತಲ್ಲ, ಆಗ ಟಾಪ್ ಪ್ರಯಾರಿಟೀಸ್ ಟು ದಿ. ಫಾರ್ಮರ್ಸ್ ಎಂದು ಮಾಡಿದರು. ಹೆಗಡೆಯವರು ಇದಕ್ಕೆ ಆಜ್ಞೆ ಮಾಡಿದ್ದು. ಹಿಂದೆಯೆಲ್ಲ ವಿರೋಧ ಪಕ್ಷದ ನಾಯಕರಾಗಿದ್ದ ಬೊಮ್ಮಾಯಿಯವರೇ ಆ ಸಮಿತಿ ಅಧ್ಯಕ್ಷರಾಗಿದ್ದರು. ಅವರು ಹಲವಾರು ಶಿಫಾರಸು ಕೊಟ್ಟಿದ್ದಾರೆ. ಅವುಗಳಲ್ಲಿ ಒಂದಾದರೂ ಇವರ ಸರ್ಕಾರ ಬಂದ ಮೇಲೆ ಕಾರ್ಯಗತವಾಗಿದೆಯೇ ? ಶಿಫಾರಸ್ ಪಟ್ಟಿ ನನ್ನ ಹತ್ತಿರ ಇದೆ, ಕೇಳುತ್ತಿದ್ದೇನೆ, ಒಂದಾದರೂ ಕಾರ್ಯಗತ ಮಾಡಿದ್ದಾರೆಯೇ ? ಕಾರ್ಯಗತ ಮಾಡದೆಯೇ ವ್ಯವಹಾರ ಮಾಡಿಕೊಂಡು ಹೋಗುತ್ತೇವೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಕೆ. ಜೆ. ಜಾರ್ಜ್.—ಬೊಮ್ಮಾಯಿಯವರಾಗಲಿ, ಹೆಗಡೆಯವರಾಗಲಿ, ಮುಖ್ಯ ಮಂತ್ರಿಗಳಾಗುತ್ತೇವೆ ಎಂದು ಕನಸಲ್ಲೂ ಕಂಡಿರಲಿಲ್ಲ ಅದಕ್ಕೆ ಅವರು ಆ ರೀತಿ ಮಾಡಿದ್ದು ಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ಬೊಮ್ಮಾಯಿಯವರು ಹೆಗಡೆಯವರ ಕಾಲದಲ್ಲಿ ಆರ್ಥಿಕ ನಿರ್ವಹಣೆ ಸರಿಯಾಗಿ ಮಾಡಲಿಲ್ಲ ಎಂದು ಹೇಳಿದ್ದಾರೆ. ಇವತ್ತಾದರೂ ಆರ್ಥಿಕ ವ್ಯವಸ್ಥೆ ಸರಿಯಾಗಿಲ್ಲ ಎಂದು ಹೇಳಬೇಕಾಗುತ್ತದೆ. ನಾವು ಆಡಳಿತ ನಡೆಸುತ್ತಿದ್ದಾಗ ಇವರ ಪ್ರಕಾರ ಆರ್ಥಿಕ ಸ್ಥಿತಿ ದುಸ್ಥಿತಿಯಲ್ಲಿತ್ತು, ಅದನ್ನು ಸುಸ್ಥಿತಿಯಲ್ಲಿ ತರುವುದಕ್ಕೆ ಏನು ಮಾಡಿದ್ದಾರೆ ? ಇವರು ಏನು ಮಾಡಿದ್ದಾರೆ ಎಂದು ಮಾರುಕಟ್ಟೆಗೆ ಹೋದರೆ ಗೊತ್ತಾಗುತ್ತದೆ. ಕನ್‌ಸ್ಯೂಮರ್ಸ್ ಆರ್ಟಿಕಲ್ಸ್ ಬೆಲೆ ಕಡಿಮೆ ಮಾಡುತ್ತೇವೆಂದು ಹೇಳಿದರು. ಅದಕ್ಕೊಂದು ಸಮಿತಿ, ಅದಕ್ಕೆ ಲಕ್ಷ್ಮೀಸಾಗರ್ ಅಧ್ಯಕ್ಷರು, ಅವರು ಹೇಳಿದರು ಮೂರೇ ದಿವಸದಲ್ಲಿ ಎಲ್ಲಾ ಬೆಲೆಗಳನ್ನು ನಿಯಂತ್ರಣ ಮಾಡಿ ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ೩ ದಿವಸ ಆಯಿತು, ೫ ವರ್ಷ ಆಯಿತು, ಈಗ ೬ನೇ ವರ್ಷ ನಡೆಯುತ್ತಿದೆ ಆಗ ಒಂದು ಕೆಜಿ ಸಕ್ಕರೆ ಎರಡೂವರೆ ರೂಪಾಯಿ ಇತ್ತು, ಇವತ್ತು ೬ ರೂಪಾಯಿ ಆಗಿದೆ, ಕಾಂಗ್ರೆಸ್ ಸರ್ಕಾರ ಬೆಲೆ ಜಾಸ್ತಿ ಮಾಡಿತು ಎಂದು ಎಲ್ಲಾ ಹೇಳಿಕೊಂಡಿದ್ದರು. ಅಕ್ಕಿ ಬೆಲೆ ಆಗ ೨–೫೦ ಇದ್ದದ್ದು ೭ ರೂಪಾಯಿಗೆ ಏರಿದೆ. ಜನರು ಬಳಸುವ ಯಾವ ವಸ್ತು ಇವತ್ತು ಇವರ ನಿಯಂತ್ರಣದಲ್ಲಿದೆ ? ಹೀಗೆ ದಿನದಿನಾ ಬೆಳೆಯುವ ಬೆಲೆಗಳ ಬಗ್ಗೆ ಸರ್ಕಾರ ಗಮನ ಕೊಡಬೇಕು. ಏನೋ ಮಂತ್ರಿ ಮಂಡಲ ಪುನರಚನೆ ಮಾಡೋಣ, ಯಾರೋ ಬರುವರು ಯಾರೋ ಹೋಗುವರು ಹೇಗೋ ಸರ್ಕಾರ ನಡೆಸೋಣ ಎನ್ನುವಂತೆ ನೀವು ನಡೆಸಿದರೆ ಜವಾಬ್ದಾರಿ ಇಲ್ಲದ ಜನ ಎಂದು ನಿಮ್ಮನ್ನು ಹೇಳಬೇಕಾಗುತ್ತದೆ.

ಆಮೇಲೆ "Janata Experiment in Karnataka Five eventful years" ಎಂದು ಒಂದು ಪುಸ್ತಕ ಅಚ್ಚು ಹಾಕಿ ನಮ್ಮ ಕೈಯಲ್ಲಿ ಕೊಟ್ಟಿದ್ದೀರಿ. ಅದರಲ್ಲಿನ ಒಂದೆರಡು ಸೆಂಟೆನ್ಸನ್ನು ಓದುತ್ತೇನೆ.

> " The country had achieved a degree of self-sufficiency and rightly could have expected a large measure of satisfaction among them with respect to their standards of living. This did not happen. Increasingly, larger number of people found themselves without the necessary purchasing power to afford too square meals. Employment facilities were limited. Sporadic attempts of providing rural employment had failed to generate necessary enthusiasm in the able bodied population of the villages. While Government tried to suppress agitataions, the number of cases of police firing only increased. Ryots in Nargund and Navalgund marked the day when people had decided that their limits of tolerance had been crossed. Thereafter police firing be came a periodic occurance in various parts of the State. It was impossible for the people to uphold the value system and the means of access to the administration. Lip service was paid to the grievances of the People. The success of a citizen in redressal of his grievance depended

upon who advocated his case and whether he had access to the repositors of power. Now it was at this stage that the Janata Government came to power with its manifesto offering to eradicate corruption in administration, decentralisation of power and employment to the people, uplift of villages, welfare of labour, fair prices to the agriculturists Navodaya, universalisation of education, health coverage and a number of other goals which the Party cherishes as its ideals for bringing in the Welfare State. With a clear mandate given by the people of Karnataka, the first ever Janata Government in the State assumed office on 10th January, 1983. Much has been said during the last five years and with rising aspirations of the people, much more remains to be done."

ಈ ರೀತಿಯಾಗಿ ತಾವು ಅಚ್ಚು ಹಾಕಿದ್ದೀರಿ. ಇದರ ಪ್ರಕಾರ ಏನೇನು ಮಾಡಿದ್ದೀರಿ ? ಏನೇನು ಸಾಧನೆ ಮಾಡಿದ್ದೀರಿ ? ೧೯೮೩ ರಿಂದ ಏನೇನು ಮಾಡಿದ್ದೀರಿ ? ಕಾಂಗ್ರೆಸ್ ಸರಕಾರ ಮಾಡಿರತಕ್ಕಂತಹ ನ್ಯೂನತೆಗಳನ್ನು ಸರಿಪಡಿಸಿಕೊಂಡು ದೇಶಕ್ಕೆ ಮಾದರಿಯಾಗಿ ಯಾವ ಕೆಲಸವನ್ನು ಮಾಡಿದ್ದೀರಿ ? ಯಾವ ಮಾದರಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇವತ್ತಿನವರೆಗೂ ಹಳ್ಳಿಗಾಡಿನಲ್ಲಿರತಕ್ಕಂತಹ ಜನರ ಬಗ್ಗೆ ಕನಿಕರ ಇಟ್ಟು, ಅವರ ಕಷ್ಟ ಕಾರ್ಪಣ್ಯಗಳನ್ನು ಅರ್ಥ ಮಾಡಿಕೊಂಡು ಅದನ್ನು ನಿವಾರಣೆ ಮಾಡಲಿಕ್ಕೆ ಪ್ರಯತ್ನವನ್ನೇನಾದರೂ ಮಾಡಿದ್ದೀರಾ ? ಇಷ್ಟು ಅಚ್ಚುಕಟ್ಟಾಗಿ ಎಲ್ಲಾ ಮಾಡಿ ಇದನ್ನು ನಮ್ಮ ಮುಂದಿಟ್ಟಿದ್ದೀರಿ ಬಹಳ ಸಂತೋಷ. ನುಡಿದಂತೆ ನಡೆಯಬೇಕು. ಅದನ್ನು ಬಿಟ್ಟು ನುಡಿಯುವುದನ್ನು ಜಾಸ್ತಿ ಮಾಡಿ ನಡೆಯುವುದನ್ನು ಕಡಿಮೆ ಮಾಡಿದರೆ ಅದು ನಿಮಗೆ ಸರಿಯಾದಂತಹ ಮರ್ಯಾದೆಯನ್ನು ತರುವುದಿಲ್ಲ. ೧೯೮೮-೮೯ರ ಬಡ್ಜೆಟ್ ಎಸ್ಟಿಮೇಟ್‌ನಲ್ಲಿ ೨೫೫.೩೬ ಕೋಟಿ ರೂಪಾಯಿ ಬ್ಯಾಲೆನ್ಸ್ ಡೆಫಿಸಿಟ್ ಇರತಕ್ಕಂಥಾದ್ದರ ಬಗ್ಗೆ ತೋರಿಸಿದ್ದೀರಿ. ಇದನ್ನು ನೀವು ಅಧಿಕಾರಕ್ಕೆ ಬಂದಾಗಿನಿಂದ ಮಾಡುತ್ತಿದ್ದೀರಿ. ಈ ಸಾರಿ ಹತ್ತು ದಿವಸ ಅಧಿವೇಶನ ಕರೆದು ಬಡ್ಜೆಟ್ ಅನ್ನು ಮಂಡನೆ ಮಾಡಿದ್ದೀರಿ. ಇಷ್ಟು ಡೆಫಿಸಿಟ್ ಫೈನಾನ್ಸಿಂಗ್ ಅನ್ನು ಇಟ್ಟುಕೊಂಡು ಸರಕಾರ ನಡೆಸುತ್ತೇವೆಂದು ಹೇಳುವುದಾದರೆ ಎಲ್ಲಿಯವರೆಗೆ ನಡೆಸುತ್ತೀರಿ. ೨೫೫. ೩೬ ಕೋಟಿ ರೂಪಾಯಿ ಹಣವನ್ನು ಮೊಬಿಲೈಸ್ ಮಾಡದೇ ಹೋದರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಇದನ್ನು ಮಾಡದೇ ಹೋದರೆ ಒಟ್ಟಿನಲ್ಲಿ ಹೇಗೋ ಸರಕಾರ ನಡೆಸಬೇಕು, ಸರಕಾರೀ ನೌಕರರಿಗೆ ಸಂಬಳ ಕೊಟ್ಟುಕೊಂಡು ಸರಕಾರವನ್ನು ನಡೆಸಬೇಕೆಂಬ ಯೋಚನೆ ಬರುತ್ತದೆಯೋ ಹೊರತು ಬೇರೆ ಯೋಚನೆ ಬರುವುದಿಲ್ಲ. ಡೆಫಿಸಿಟ್ ಫೈನಾನ್ಸಿಂಗ್‌ನಿಂದಾಗಿ ಸರಿಯಾಗಿರತಕ್ಕಂತಹ ಸರಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಕೇಂದ್ರದಲ್ಲಿ ಡೆಫಿಸಿಟ್ ಫೈನಾನ್ಸಿಂಗ್ ಮಾಡುತ್ತಿದ್ದಾರೆ ನಾವು ಏಕೆ ಮಾಡಬಾರದು ಎಂದು ತಾವು ಪ್ರಶ್ನೆ ಕೇಳಬಹುದು. ಕೇಂದ್ರ ಸರಕಾರದಲ್ಲಿ ಖೋತಾ ಬಡ್ಜೆಟ್ ಅನ್ನು ಮಾಡುತ್ತಾರೆಂದು ಇಟ್ಟುಕೊಳ್ಳೋಣ ಅವರು ನಿಮಗೆ ಮಾದರಿಯೋ ? ನಿಮಗೆ ಸ್ವಂತಬುದ್ಧಿ ಇಲ್ಲವೆ ? ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳತಕ್ಕಂತಹ ಶಕ್ತಿ ನಿಮಗೆ ಇಲ್ಲವೆ ? ಖೋತಾವನ್ನು ಸರಿಪಡಿಸತಕ್ಕಂತಹ ಕೆಲಸವನ್ನು ಮಾಡಬೇಕು. To balance the deficit if you don't chalk out plans and programmes to mobilise resources, to collect the taxes due to the Government and to recover whatever monies are due to the Government, if you don't resort to these methods, I don't think you can run the Government purposefully with the deficit. ಈಗ ಬಡ್ಜೆಟ್‌ನಲ್ಲಿ ೩೪೨೯.೨೪ ಕೋಟಿ ರೂಪಾಯಿಗಳು ಆದಾಯವೆಂದು ತೋರಿಸಿದ್ದೀರಿ. ಈ ಹಣವನ್ನು ಖರ್ಚು ಮಾಡಲಿಕ್ಕೆ ನಿಮ್ಮ ಹತ್ತಿರ ಹಣ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. You have given a memorandum to the 9th Finance Commission. Consolidated borrowings of the Government of Karnataka as on 31st March, as per Table No. 10.

೪-೦೦ ಪಿ. ಎಂ.

ಇದರ ಪ್ರಕಾರ ಇವತ್ತು ನಿಮಗೆ ಸಾಲ ಇರತಕ್ಕಂಥದ್ದು ಎಷ್ಟು ಎಂದರೆ ೩,೨೨೮ ಕೋಟಿ ರೂಪಾಯಿ ೭೮ ಲಕ್ಷ ರೂಪಾಯಿಗಳು. ನಾವು ಇದ್ದಾಗ ಎಷ್ಟಿತ್ತು? ನಮ್ಮ ಸರ್ಕಾರ ಅಧಿಕಾರ ಮಾಡುತ್ತಿದ್ದಾಗ ಇದ್ದಂಥ ಸಾಲ ಎಷ್ಟು ಎಂದರೆ ೪೯೨ ಕೋಟಿ ರೂಪಾಯಿ ಮಾತ್ರ. ನಂತರ ಈಗ ಏನಾಗಿದೆ ? ೩,೨೨೮ ಕೋಟಿ ರೂಪಾಯಿಗಳನ್ನು ಸ್ವೇಚ್ಛೆಯಾಗಿ ಸಾಲವನ್ನು ತೆಗೆದುಕೊಳ್ಳುವುದು. ಅದಕ್ಕೆ ಬಡ್ಡಿ ಬಾಕಿಯನ್ನೂ ಸಹಾ ಕೊಡುವ ಹಾಗೆ ಇಲ್ಲ. ಈ ರೀತಿಯಾಗಿ ನೀವು ಸಾಲದ ಹೊರೆಯನ್ನು ಹೊತ್ತುಕೊಂಡು ಈ ದೇಶದ ಜನರಿಗೆ ವರ್ಷಂಪ್ರತಿ ವಾಗ್ದಾನ ಮಾಡಿಕೊಂಡು ನೀವು ಜನಗಳಿಗೆ ಏನು ಕೊಡುತ್ತಿದ್ದೀರಿ ? ೩,೨೨೮ ಕೋಟಿ ರೂಪಾಯಿಗಳಿಗೆ ಎಷ್ಟು ಬಡ್ಡಿ ಬರುತ್ತದೆ ಎನ್ನತಕ್ಕಂಥದ್ದು ಒಂದು ಪ್ರಶ್ನೆ. ಇದಕ್ಕೆ ಎಷ್ಟು ಬಡ್ಡಿಯನ್ನು ಕೊಡಬೇಕಾಗುತ್ತದೆ ? ಸುಮಾರು ೪೨೫ ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಇದಕ್ಕೆ ನೀವು ಕೊಡಬೇಕಾಗುತ್ತದೆ. ಇದನ್ನು ಕೊಡದೇ ಹೋದರೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣದಲ್ಲಿ ಅದನ್ನು ಮುರಿದುಕೊಂಡು ಕೊಡುತ್ತಾರೆ; ಆದ್ದರಿಂದ ಇಷ್ಟು ಸಾಲದ ಹೊರೆ ನಿಮ್ಮ ತಲೆಯಮೇಲೆ ಇಟ್ಟುಕೊಂಡು ಏನು ಮಾಡುತ್ತೀರಿ ? ನಿಮ್ಮ ಆದಾಯ ೩,೪೮೯ ಕೋಟಿ ರೂಪಾಯಿಗಳು, ಇದು ಒಂದು ಕಡೆಗೆ ಹೋಯಿತು ? ಆಮೇಲೆ ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡಬೇಕು. ಇದರ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು ೧೩೦೦ ಕೋಟಿ ರೂಪಾಯಿಗಳನ್ನು ಸರ್ಕಾರಿ ನೌಕರರಿಗೆ ಸಂಬಳ ರೂಪದಲ್ಲಿ ಕೊಟ್ಟುಬಿಟ್ಟರೂ ಅವರ ಕಾಟ ತಪ್ಪಿಲ್ಲ, ಸರ್ಕಾರಕ್ಕೂ ಕೂಡಾ ಅವರ ಕಾಟ ತಪ್ಪಿಲ್ಲ. ಜನಗಳಿಗೂ ಅವರ ಕಾಟ ತಪ್ಪಿಲ್ಲ. ನಮ್ಮಲ್ಲಿ ಸರ್ಕಾರಿ ನೌಕರರು ಎಷ್ಟು ಜನ ಇದ್ದಾರೆ ? ಸುಮಾರು ನಾಲ್ಕುವರೆ ಲಕ್ಷ ಜನ ಸರ್ಕಾರಿ ನೌಕರರು ಇದ್ದಾರೆ. ನಾಲ್ಕೂವರೆ ಲಕ್ಷ ಜನ ಸರ್ಕಾರಿ ನೌಕರರಿಗೆ ಒಂದು ವರ್ಷಕ್ಕೆ ೧೩೦೦ ಕೋಟಿ ರೂಪಾಯಿಗಳ ಬರೀ ಸಂಬಳಕ್ಕೇ ಹೋಗುತ್ತಿದೆ, ಅವರಿಗೆ ಜನಗಳ ಬಗ್ಗೆ ಆಸಕ್ತಿಯಾಗಲೀ ಅವರ ಅಭಾರಿ ತನವಾಗಲೀ, ಋಣಿಯಾಗಲೀ ಅವರಿಗೆ ಇಲ್ಲ ಎಂದು ಹೇಳಿಬಿಟ್ಟು ನಾನು ನೂರಕ್ಕೆ ನೂರು ಹೇಳದಿದ್ದರೂ ಕೂಡಾ ೫೦ ಆದರೂ ಇದೆ ಎಂದು ಹೇಳುತ್ತೇನೆ. ನಮ್ಮಲ್ಲಿ ಒಟ್ಟು ಜನಸಂಖ್ಯೆ ನಾಲ್ಕು ಕೋಟಿ ಇದೆ. ಕೇವಲ ನಾಲ್ಕೂವರೆ ಲಕ್ಷ ಸರ್ಕಾರಿ ನೌಕರರಿಗೆ ಈ ವಿಧಾನಸೌಧ ಇರಬೇಕೆ ? ನಮ್ಮಲ್ಲಿ ಎಷ್ಟು ಜನ ಬಡವರು ಇದ್ದಾರೆ ? ಎಷ್ಟು ಜನ ರೈತರು ಇದ್ದಾರೆ ? ಎಷ್ಟು ಜನ ದಿಕ್ಕಿಲ್ಲದೇ ಇರುವವರು ಇದ್ದಾರೆ ? ಎಷ್ಟು ಜನ ಕೂಲಿಕಾರರು ಇದ್ದಾರೆ ? ಅವರ ಬಗ್ಗೆ ಗಮನವನ್ನು ಕೊಡುವ ಹಾಗೆ ಇಲ್ಲ. ಎಲ್ಲಾ ಖರ್ಚನ್ನೂ ಕಳೆದು ಎಷ್ಟು ಹಣ ಉಳಿಯುತ್ತದೆ ? ಎಲ್ಲಾ ಬಡ್ಡಿಯನ್ನು ಕೊಟ್ಟು, ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಟ್ಟುಬಿಟ್ಟು ಮತ್ತೆ ಉಳಿಯತಕ್ಕಂಥ ಹಣ ಎಷ್ಟು ಎಂದು ಹೇಳಿದರೆ ಒಂದು ಸಾವಿರ ಚಿಲ್ಲರೆ ಕೋಟಿ ರೂಪಾಯಿ ಮಾತ್ರ ಉಳಿಯುತ್ತದೆ. ಇದೆಲ್ಲಾ ಹೋಗಲೇ ಬೇಕು ಇದೆಲ್ಲಾ ಹೋಗಿ ಒಂದು ಸಾವಿರ ಚಿಲ್ಲರೆ ಕೋಟಿ ರೂಪಾಯಿ ಮಾತ್ರ ಉಳಿದರೆ ನೀವು ಇರಿಗೇಷನ್‌ಗೆ ಏನು ಖರ್ಚು ಮಾಡುತ್ತೀರಿ ? ಇನ್ನು ಅಭಿವೃದ್ಧಿ ಕೆಲಸಕಾರ್ಯಗಳಿಗೆ ಏನು ಖರ್ಚು ಮಾಡುತ್ತೀರಿ ? ನಿಮಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತದೆ ? ನಿಮಗೆ ಕೇಂದ್ರದಿಂದ ೪೨೫ ಕೋಟಿ ರೂಪಾಯಿಗಳು ಬರುತ್ತದೆ. ನೀವೆಲ್ಲಾ ಮಂತ್ರಿಗಳಾಗಿದ್ದೀರಿ ನಿಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ ನೀವು ಬಹಳ ಅರ್ಥಗರ್ಭಿತವಾಗಿ ಜವಾಬ್ದಾರಿಯಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೂರು ಕೋಟಿ ತೊಂಭತ್ತಾರು ಲಕ್ಷ ಜನರು ಏನು ಇದ್ದಾರೆ. ಇವರ ಬಗ್ಗೆ ನೀವು ಚಿಂತನೆಯನ್ನು ಮಾಡಿ. ನಾಲ್ಕೂವರೆ ಲಕ್ಷ ಸರ್ಕಾರಿ ನೌಕರರ ಬಗ್ಗೆ ಚಿಂತನೆಯನ್ನು ಮಾಡತಕ್ಕಂಥದ್ದಲ್ಲ. ಇಷ್ಟೆಲ್ಲಾ ಸಂಬಳಗಳನ್ನು ಕೊಟ್ಟರೂ ಕೂಡಾ ದಿನಂಪ್ರತಿ ಸ್ಟ್ರೈಕ್ ಮಾಡುತ್ತಿದ್ದಾರೆ. ಅವರ ಮುಖಗಳನ್ನು ನೋಡಬೇಕು. ಮೊನ್ನೆ ದಿನ ಸ್ಟ್ರೈಕ್ ಮಾಡಿದಾಗ ಇಪ್ಪತ್ತು ಸಾವಿರ ಜನರ ಮುಖಗಳನ್ನು ಅವರ ರೂಪರೇಖೆಗಳನ್ನು ನೋಡಬೇಕು. ನಾನು ಎತ್ತರವಾದ ಸ್ಥಳದಿಂದ ನೋಡಿದ್ದೇನೆ. ಎಷ್ಟೆಷ್ಟು ದಪ್ಪ ಇದ್ದಾರೆ, ಅವರು ಎಂಥೆಂಥ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ ಏನೇನು ತಿನ್ನುತ್ತಾರೋ ಗೊತ್ತಿಲ್ಲ. ಹಳ್ಳಿಗಾಡುಗಳಲ್ಲಿ ಹೆಣ್ಣುಮಕ್ಕಳುಗಳು ಇವೆ ಅವರು ಮಗುವನ್ನು ಹಡೆದರೆ ಅವರ ಮುಖ ನೋಡುವುದಕ್ಕಾಗುವುದಿಲ್ಲ ಅವರ ಎಲುಬು, ತೊಗಲೆಲ್ಲಾ ಕಾಣುತ್ತದೆ. ರೈತರ ಮುಖಗಳನ್ನು ನೋಡಿದರೆ ಅವರ ಕೈಕಾಲಿನ ಮೇಲೆ ಮಾಂಸ ಖಂಡಗಳೇ ಇರುವುದಿಲ್ಲ, ಇಂಥವರು ಕೂಡಾ ಇದ್ದಾರೆ.

ಇಂತಹವರು ನಮಗೋಸ್ಕರ ದುಡಿಯುತ್ತಿದ್ದಾರೆ. ಈ ಜನ ಎಷ್ಟು ದಪ್ಪವಾಗಿ, ಬಲಿಷ್ಟವಾಗಿ ಬಲಿತುಕೊಂಡು ಆಸ್ತಿಪಾಸ್ತಿಗಳನ್ನು ಮಾಡಿಕೊಂಡು ಇಲ್ಲಿ ಮನೆ ಮಠಗಳನ್ನು ಸರ್ಕಾರದ ಹಣದಲ್ಲಿ ಉಪಯೋಗಿಸಿಕೊಂಡಿದ್ದಾರೆ ಇವರಿಗೆ ಎಲ್ಲಿಯವರೆಗೆ ದುಡ್ಡನ್ನು ಕೊಡತಕ್ಕಂಥಾದ್ದು ಜನಗಳಿಗೆ ವಿರುದ್ಧವಾದ ಇವರನ್ನು ಹದ್ದುಬಸ್ತಿನಲ್ಲಿಡದೇ ಹೋದರೆ ನೀವು ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ಬರೀ ಸರ್ಕಾರಕ್ಕೆ ಆದಾಯದ ರೂಪದಲ್ಲಿ ಹಣ ಏನು ಬರುತ್ತದೆ ಅದನ್ನೆಲ್ಲಾ ಇವರಿಗೋಸ್ಕರವಾಗಿಯೇ

ಖರ್ಚು ಮಾಡಿ ಬಡವರನ್ನು ತಾವು ಹಾಳು ಮಾಡಬೇಕಾಗುತ್ತದೆ. ನಿಮ್ಮ ವರ್ಗ, ಹಿಂದುಳಿದ ವರ್ಗದವರೂ ಇದ್ದಾರೆ. ಆ ಹಿಂದುಳಿದ ವರ್ಗದವರಲ್ಲಿ ಅವರವರಲ್ಲಿಯೇ ಕಾಂಪಿಟೇಷನ್ ನಾನು ಹಿಂದುಳಿದಿದ್ದೇನೆ, ನಾನು ಹಿಂದೆ ಇದ್ದೇನೆ. ನಾನು ಹಿಂದುಳಿದಿದ್ದೇನೆ ನಾನು ಹಿಂದೆ ಇದ್ದೇನೆ ಎಂದು ಅವರವರಲ್ಲೇ ಕಾಂಪಿಟೇಷನ್ ಇದೆ. ಶೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿಯೂ ಬಡವರು ಇದ್ದಾರೆ. ನಮ್ಮಂಥ ಕೆಲವು ಬುದ್ಧಿವಂತರನ್ನು ಬಿಟ್ಟರೆ, ನೌಕರಿಗೆ ಸೇರಿದಂತಹವರನ್ನು ಬಿಟ್ಟರೆ, ಉಳಿದವರು ಯಥಾಸ್ಥಿತಿ ಹಾಗೇ ಇದ್ದಾರೆ. ಇವರ ಕಡೆಗೆ ಏಕೆ ಗಮನ ಕೊಡಬಾರದು ? ಇವರ ಪರಿಸ್ಥಿತಿ ಬಗ್ಗೆ ವಿಚಾರಣೆ ಏಕೆ ಮಾಡಬಾರದು ? ಬಡವರಿಗೋಸ್ಕರ ಏನು ಕಾರ್ಯಕ್ರಮ ಇದೆ, ಇವರಿಗಾಗಿ ಏನು ಹಣ ಖರ್ಚು ಮಾಡುತ್ತಿದ್ದೀರಿ ಇದರಲ್ಲಿ ನೌಕರರು ಲಪಟಾಯಿಸತಕ್ಕಂಥಾದ್ದು ಊರ ಸಗಣಿ ತಿನ್ನತಕ್ಕ ಪ್ರವೃತ್ತಿ ಎಲ್ಲಿಯವರೆಗೆ ಸಂಬಳ ಪಡೆದುಕೊಳ್ಳುತ್ತಿರುವ ಗವರ್ನಮೆಂಟ್ ನೌಕರರಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ನಮ್ಮ ದೇಶದ ಪ್ರಗತಿ ಆಗುವುದಿಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇವೊತ್ತಿನವರೆಗೆ ನೋಡಿದ್ದೇನೆ. ಹಳ್ಳಿಗಾಡಿನ ಹೆಣ್ಣು ಮಕ್ಕಳು ಹಾಗೆಯೇ ಇದ್ದಾರೆ. ಅಲ್ಲಿರತಕ್ಕಂಥ ಜನಗಳು, ಬಡವರು ಹಾಗೆಯೇ ಇದ್ದಾರೆ ರೈತರೂ ಹಾಗೇ ಇದ್ದಾರೆ. ೫೦ ಎಕರೆ ಅಥವಾ ೧೦೦ ಎಕರೆ ಮನೆ ಮಠ ಇವರಿಗೆ ಇದೆ, ಆದರೂ ಮನೆಯವರು ಕೆಲಸ ಮಾಡದೇ ಹೋದರೆ ಅವನಿಗೆ ಗತ್ಯಂತರ ಇಲ್ಲ. ಆದ್ದರಿಂದ ನಾನು ಏನು ಹೇಳುತ್ತಿದ್ದೇನೆ ಅಂದರೆ ಎಲ್ಲಾ ಸದಸ್ಯರಿಗೂ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಗವರ್ನಮೆಂಟ್ ನೌಕರರಿಗೋಸ್ಕರವಾಗಿ ನಾವು ದಾಸರಾಗಬೇಕಾಗಿಲ್ಲ. ಅವರ ಸೇವೆಗೋಸ್ಕರ, ಅವರ ಒಳ್ಳೆಯತನವನ್ನು ಸಂಪಾದನೆ ಮಾಡುವುದಕ್ಕೋಸ್ಕರ, ಅವರ ಒಂದೆರಡು ಕೆಲಸಗಳಿಗೋಸ್ಕರ ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಕಲ್ಪಿಸಿಕೊಡತಕ್ಕದ್ದು ಸರಿಯಲ್ಲವೆಂದು ಹೇಳುತ್ತೇನೆ. ವಿಧಾನಸಭೆಯ ಸದಸ್ಯರು ಮತ್ತು ಹೊರಗಡೆ ಇರತಕ್ಕ ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥವರು ಪ್ರತಿಯೊಬ್ಬರೂ ಸರ್ಕಾರಿ ನೌಕರರುಗಳು ತೆಗೆದುಕೊಳ್ಳತಕ್ಕ ಹಣ ಅವರು ಪಡೆತಕ್ಕ ಸುಖ ಸವಲತ್ತುಗಳ ಕಡೆ ತೀವ್ರವಾದ ಗಮನ ಕೊಟ್ಟು ಅವರನ್ನು ತಹಬಂದಿಯಲ್ಲಿ ಇಟ್ಟುಕೊಳ್ಳದೆ ಹೋದರೆ ಪ್ರಜಾಪ್ರಭುತ್ವವನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಇನ್ನು ಪ್ಲಾನಿಂಗ್ ಬಗ್ಗೆ ಒಂದೆರಡು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಹೋದ ಸಲ ೯೦೭ ಕೋಟಿ ರೂಪಾಯಿ ಪ್ಲಾನಿಂಗ್ ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ಲಾನಿಂಗ್ ಬಗ್ಗೆ ಆಕಾಶದಿಂದ ಭೂಮಿಯವರೆಗೆ ಸಿಗತಕ್ಕ ವಸ್ತುವಿನ ಮೇಲೆ ಭಾಷಣ ಮಾಡತಕ್ಕ ಜಾಣರು. ಅವರು ೯೧೭ ಕೋಟಿ ರೂಪಾಯಿಗಳ ನಿವ್ವಳದ ಒಂದು ಟಾರ್ಗೆಟ್ ಇಟ್ಟುಕೊಂಡಿದ್ದಾರೆ ತಮ್ಮ ಇಯರ್ಲಿ ಪ್ರೋಗ್ರಾಮ್‌ನಲ್ಲಿ ಇಲ್ಲಿ ಏನು ಮಾಡಿದರು ಅಂದರೆ ಹೋದವರ್ಷದಲ್ಲಿ ಇದ್ದ ಯೋಜನೆಯಲ್ಲಿ ಈ ವರ್ಷ ೬೦೦ ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಸೆಂಟ್ರಲ್ ಪ್ಲಾನ್ ಮತ್ತು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್‌ಗಳು ೯೧೭ ಕೋಟಿ ರೂಪಾಯಿಗಳು. ೨೧೭.೧೮ ಕೋಟಿ ರೂಪಾಯಿನಲ್ಲಿ ಏನು ಆಗುತ್ತದೆ. ೯೧೭ ಕೋಟಿ ರೂಪಾಯಿನಲ್ಲಿ ೨೩೭.೧೮ ಕೋಟಿ ರೂಪಾಯಿ ಹೋದರೆ ೬೭೯.೮೨ ಕೋಟಿ ರೂಪಾಯಿ ಮಾತ್ರ ಉಳಿಯಿತು. ಈಗ ನೀವು ೬೭೯ ಕೋಟಿ ರೂಪಾಯಿಗೆ ಇಳಿಸಿದ್ದೀರಿ. ಅಂದರೆ ನೀವು ಖರ್ಚು ಮಾಡತಕ್ಕದ್ದು ಎಷ್ಟು ? ನೀವು ೬೦೦ ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಬೇಕು. ಸೆಂಟ್ರಲ್ ದುಡ್ಡು ೨೧೭.೩೮ ಕೋಟಿ ರೂಪಾಯಿ. ಸೆಂಟ್ರಲ್‌ನವರು ಕೊಟ್ಟಿರತಕ್ಕಂಥ ದುಡ್ಡು ಇಷ್ಟು, ಉಳಿದಿದ್ದನ್ನು ಯಾವ ರೀತಿ ನಿರ್ವಹಣೆ ಮಾಡಿದ್ದೀರಿ ಎಂದು ಹೇಳುತ್ತಿದ್ದೇನೆ. ಸರ್ಕಾರ ಇದರಲ್ಲಿ ಫೇಲ್ ಆಗಿದೆ. ಈ ವರ್ಷ ೧ ಸಾವಿರ ೧೪ ಕೋಟಿ ರೂಪಾಯಿ ಮಾಡಿದ್ದೀರಿ. ನೀವು ಇದಕ್ಕೆ ನಿರ್ವಹಿಸಿಕೊಂಡು ಬಂದ ಪ್ಲಾನ್ ಸ್ಕೀಮ್ ಜಾರಿಗೆ ಕೊಡಬೇಕಾದರೆ ಇಂಟರ್ನಲ್ ರಿಸೋರ್ಸಸ್ ಎಲ್ಲಿಂದ ಬರುತ್ತದೆ. ಇದು ಇಲ್ಲದೇ ಹೋದರೆ ಇದನ್ನು ಯಾವ ರೀತಿ ನಿರ್ವಹಣೆ ಮಾಡುತ್ತೀರಿ. ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ. ಇವರು ಬರೀ ರಾಜಕೀಯ ದೊಂಬರಾಟ ಆಡುವುದನ್ನು ಬಿಟ್ಟು ಸರ್ಕಾರವನ್ನು ನಡೆಸತಕ್ಕ ಒಂದು ವಿಷನ್ ಏನು ಇದೆ, ಅದರ ಕಡೆಗೆ ಗಮನ ಕೊಟ್ಟು ಎಷ್ಟು ಜಾಸ್ತಿ ಜಾಸ್ತಿ ಜನಗಳಿಗೆ ಅನುಕೂಲವಾಗತಕ್ಕ, ಸುಖವಾಗತಕ್ಕ ಸ್ಕೀಮ್‌ಗಳನ್ನು ಮಾಡಿ. ಇಂತಹ ಸ್ಕೀಮ್‌ಗಳನ್ನು ಜಾರಿ ಕೊಡುವಂತಹ ಕೆಲಸಗಳನ್ನು ಮಾಡಿದರೆ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಾವು ಇದಕ್ಕೆ ಗಮನಕೊಟ್ಟಿಲ್ಲ. ಜನತಾ ದಳ ದೊಡ್ಡದೋ ಅಥವಾ ಜನತಾ ಪಕ್ಷ ಸಣ್ಣದೋ ಎಂಬ ವಿಚಾರದಲ್ಲಿ ಇದ್ದೀರಿ. ಜನತಾ ದಳ ದೊಡ್ಡದು ಜನತಾ ಪಕ್ಷ ಸಣ್ಣದು, ಈ ವಿಚಾರ ಬಹಳ ಸಣ್ಣದು. ಹೇಗೋ ಅಧಿಕಾರಕ್ಕೆ ಬಂದಿದ್ದೀರಿ. ರಾಜಕೀಯ ಮಾಡಿದ್ದೀರಿ. ನೀವು ಸರಿಯಾಗಿ ಅಧಿಕಾರವನ್ನು ನಿರ್ವಹಣೆ ಮಾಡಬೇಕೆಂದು ತಮಗೆ ಹೇಳುತ್ತಿದ್ದೇನೆ.

ಹಳ್ಳಿಗಾಡುಗಳಲ್ಲಿ ಆರ್ ಎಲ್ ಇ ಜ ಪಿ ಎನ್ನತಕ್ಕಂಥ ಪ್ರೋಗ್ರಾಂ ಇದೆ. ಅದಕ್ಕೆ ಪಿಡಬ್ಲ್ಯುಡಿ ಫಂಡ್ಸ್ ಆಗಿದೆ. ಆದರೆ ಅದರಲ್ಲಿ ಮ್ಯಾನ್‌ಡೇಸನ್ನು ಉತ್ಪತ್ತಿ ಮಾಡತಕ್ಕಂಥಾದ್ದು ಇಲ್ಲವೇ ಇಲ್ಲ.

ಕೆರೆ ಕಟ್ಟಬೇಕು, ರಸ್ತೆ ಮಾಡಬೇಕು, ಸೇತುವೆ ಕಟ್ಟಬೇಕು, ಮನೆ ಕಟ್ಟಬೇಕು, ಇದೆಲ್ಲಾ ಮಾಡಬೇಕು. ಆದರೆ ಹಳ್ಳಿಗಾಡಿನಲ್ಲಿ ಕೆಲಸವಿಲ್ಲದೇ ಇರುವವರು ಏನಿದ್ದಾರೆ ಆ ಕೆಲಸಗಾರರನ್ನು ಅಲ್ಲಿ ನೇಮಿಸುವುದಿಲ್ಲ. ಕಂಟ್ರಾಕ್ಟುದಾರನೇ ಒಂದು ಪುಸ್ತಕ ಇಟ್ಟು ಜನರನ್ನು ನಾವು ನೇಮಕ ಮಾಡಿದ್ದೇವೆ ಎಂದು ಸಾಕ್ಷಿಗೆ ಸೃಷ್ಟಿ ಮಾಡಿಕೊಂಡಿದ್ದಾರೆ. ಹೀಗೆ ಇವತ್ತಿನ ದಿವಸ ಕೇಂದ್ರ ಸರ್ಕಾರ ಈ ಕಾರ್ಯಕ್ರಮಗಳಿಗೆ ಕೊಡತಕ್ಕಂಥ ಹಣವನ್ನು ತಾವು ದುರುಪಯೋಗ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಈ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ಅನ್ನು ನಿಮ್ಮ ವರ್ಗದವರ ಉಪಯೋಗಕ್ಕೋಸ್ಕರ ಕೊಟ್ಟಿದ್ದಾರೆ. ಸ್ವಾಮಿ, ನಾನು ತಮಗೆ ಹೇಳುತ್ತೇನೆ, ತಾವು ನಂಬಬೇಕು ಈಗ ಜಿಲ್ಲಾಪರಿಷತ್ತಿಗೆ ಹಣ ಕೊಟ್ಟಿದ್ದೀರಿ. ನಮ್ಮ ಅರ್ಬನ್ ಡಿಸ್ಟ್ರಿಕ್ಟ್‌ಗೆ ಹಣ ಕೊಟ್ಟಿದ್ದೀರಿ. ಇವತ್ತು ೨೧ನೇ ತಾರೀಖು. ಇವತ್ತಿನವರೆಗೆ ಕೂಡ ಅದನ್ನು ಖರ್ಚು ಮಾಡಲಿಕ್ಕೆ ಹೋಗಿಲ್ಲ. ಇದರಲ್ಲಿ ಮೂರನೇ ಒಂದು ಭಾಗ, ಮೂರನೇ ಎರಡು ಭಾಗದಷ್ಟು ಖರ್ಚು ಮಾಡಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಬೇರೆ ಡಿಸ್ಟ್ರಿಕ್ಟ್‌ಗಳಲ್ಲಿ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಕೇಂದ್ರಸರ್ಕಾರ ಕೊಡತಕ್ಕಂಥ ಮತ್ತು ರಾಜ್ಯ ಸರ್ಕಾರ ಕೊಡತಕ್ಕಂಥ ಹಣವನ್ನು ಮಾರ್ಚಿ ತಿಂಗಳಾದರೂ ಬಿಡುಗಡೆ ಮಾಡದೆ ದಿನಚರಿ ಖರ್ಚಿಗೋಸ್ಕರ ಉಪಯೋಗಿಸಿಕೊಂಡು ಬರುತ್ತಿದ್ದಾರೆ. ಈ ರೀತಿ ನೀವು ಸರ್ಕಾರವನ್ನು ನಡೆಸಿಕೊಂಡು ಬರುತ್ತಾ ಇದ್ದೀರಿ. ಹೀಗಾದರೆ ಬಡವರ ಉದ್ಧಾರ ಆಗುತ್ತದೆ ಎಂದು ಹೇಗೆ ಹೇಳುತ್ತೀನೆ. ಹಿಂದುಳಿದ ವರ್ಗಗಳ ಕಮೀಷನ್ ಮಾಡಿದ್ದೀರಿ, ವೆಂಕಟಸ್ವಾಮಿ ಕಮೀಷನ್ ಆಯಿತು, ಹಿಂದೆ ಹಾವನೂರ್ ಕಮೀಷನ್ ಆಯಿತು, ಹಾವನೂರ್ ಕಮೀಷನ್ ವರದಿಯನ್ನು ಶಿಫಾರಸ್ಸನ್ನು ಜಾರಿಗೆ ಕೊಟ್ಟಿದ್ದೇವೆ. ವೆಂಕಟಸ್ವಾಮಿ ಕಮೀಷನ್‌ರವರು ರಿಪೋರ್ಟ್ ಕೊಟ್ಟರು. ಆ ರಿಪೋರ್ಟನ್ನು ಕ್ಯಾಬಿನೆಟ್‌ನಲ್ಲಿ ತಿರಸ್ಕಾರ ಮಾಡುವುದಕ್ಕೆ ಬದಲಾಗಿ, ನಿಮ್ಮ ಪ್ರಕಾರ ಅದರಲ್ಲಿ ನ್ಯೂನ್ಯತೆಗಳು ಏನಿತ್ತು, ಆ ನ್ಯೂನ್ಯತೆಗಳನ್ನು ತೆಗೆದುಹಾಕಿ ಅದನ್ನು ಜಾರಿಗೆ ಕೊಡಬಹುದಾಗಿತ್ತು. ಪುನಃ ಶ್ರೀಮಾನ್ ಚಿನ್ನಪ್ಪ ರೆಡ್ಡಿಯವರ ಕಮೀಷನ್ ನೇಮಿಸಿಬಿಟ್ಟು ಅವರ ರಿಪೋರ್ಟ್‌ಗೋಸ್ಕರ ಕಾಯುತ್ತಾ ಇದ್ದೀರಿ. ಆದರೆ ಅವರು ಹೈದರಾಬಾದ್‌ನಲ್ಲಿರುತ್ತಾರೆ, ಬೆಂಗಳೂರಿಗೆ ವಾರಕ್ಕೊಂದುಸಾರಿ ಬರುತ್ತಾರೆ ಹೀಗಾದರೆ ಅವರು ಯಾವಾಗ ರಿಪೋರ್ಟ್ ಕೊಡತಕ್ಕಂಥಾದ್ದು ? ಈಗ ಜನತಾದಳದವರು ಅಧಿಕಾರದಲ್ಲಿದ್ದಾರೆ. ಇವರು ಇನ್ನೂ ೧೦ ವರ್ಷ ಇರುತ್ತಾರೆಯೇ. ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಅನುಕೂಲ ಮಾಡುತ್ತೇವೆ ಎಂದು ಹೇಳಿಬಿಟ್ಟು ಬರೀ ಕಮೀಷನ್‌ಗಳನ್ನು ನೇಮಿಸಿಬಿಟ್ಟು ಮುಂದೆ ಹಾಕಿಕೊಂಡು ಹೋಗುತ್ತಿದ್ದರೆ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ ? ಇಂತಹ ಒಂದು ಪರಿಸ್ಥಿತಿಯಲ್ಲಿ ನೀವು ಆಡಳಿತ ನಡೆಸುತ್ತಾ ಇದ್ದೀರಿ. ಎಲ್ಲಿಯವರೆಗೆ ಮೋಸ ಮಾಡುತ್ತೀರಿ ? ಜನರು ಒಂದು ಸಾರಿ ನಂಬಬಹುದು, ಎರಡನೇ ಸಾರಿ ನಂಬಬಹುದು ೩ನೇ ಸಾರಿ ಸುಳ್ಳು ಹೇಳುತ್ತಾ ಇದ್ದೀರಿ ಎಂದು ಅವರಿಗೆ ಗೊತ್ತಾಗುತ್ತದೆ. ಅದು ನಿಜ ಹೇಗೆ ಆಗುತ್ತದೆ. ಅದು ನಿಜ ಆಗುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ನೀವು ನಲವತ್ತು ವರ್ಷಗಳು ಸುಳ್ಳು ಹೇಳಿದಿರಿ, ನಾವು ೩ ವರ್ಷ ಹೇಳಿದರೆ ಏನು ? ನೀವು ಹಿಂದೆ ಸುಳ್ಳು ಹೇಳಿದ್ದನ್ನು ಈಗ ಹೇಳುತ್ತಲೇ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಮಾತನಾಡಿದ್ದುದು ಬಹಳ ಸಂತೋಷ. ಏನೋ ಬಹಳ ಪರಿಣಾಮಕಾರಿಯಾದ ಪ್ರಶ್ನೆಯನ್ನು ಕೇಳುತ್ತಾರೆ ಎಂದು ತಿಳಿದುಕೊಂಡಿದ್ದೆ, ಸುಮ್ಮನೆ ಎದ್ದು ನಿಂತುಕೊಂಡು ಏನೋ ಮಾತನಾಡಿದರೆ ಏನು ಪ್ರಯೋಜನ ? ಡೆವಲಪ್‌ಮೆಂಟ್ ಆಫ್ ವಿಮೆನ್ ಅಂಡ್ ಚಿಲ್ಡ್ರನ್ ಇನ್ ರೂರಲ್ ಏರಿಯಾಸ್. ಈ ಒಂದು ಕಾರ್ಯಕ್ರಮ ಬಹಳ ದಿವಸಗಳಿಂದ ಬಂದಿದೆ. ಚೈಲ್ಡ್ ಡೆವಲಪ್‌ಮೆಂಟ್ ಪ್ರೋಗ್ರಾಂ ಎನ್ನತಕ್ಕಂಥ ಕಾರ್ಯಕ್ರಮ ಬಂದಿದೆ. ನನ್ನ ತಾಲ್ಲೂಕಿನಲ್ಲಿ ಈ ಸಾರಿ ಮಂಜೂರು ಮಾಡಿದ್ದಾರೆ, ಅಷ್ಟೇ ಸ್ವಾಮಿ, ಇವತ್ತು ೨೧ನೇ ತಾರೀಖು. ಈ ವರ್ಷದಲ್ಲಿ ಅದನ್ನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ ನಾವು ಅವರಿಗೆ ಎಷ್ಟು ಒತ್ತಾಯ ಮಾಡಿದರೂ ಕೂಡ ಪ್ರಾರಂಭವನ್ನೇ ಮಾಡಿಲ್ಲ. ಇಂಟಿಗ್ರೇಟೆಡ್ ಚೈಲ್ಡ್ ಡೆವಲಪ್‌ಮೆಂಟ್ ಪ್ರೋಗ್ರಾಂ ಅನ್ನು ಇವತ್ತಿನವರೆಗೂ ಮಾಡಿಲ್ಲ, ಶ್ರೀಮಾನ್ ಸಿಂಧ್ಯರವರು ಒಂದು ಕಡೆ ಫಂಕ್ಷನ್‌ನಲ್ಲಿ ಸಿಕ್ಕಿದ್ದರು, ಆಗ ಅವರಿಗೆ ಹೇಳಿದೆ. ನೀವು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದೀರಿ. ಈಗ ಮಕ್ಕಳ ಯೋಜನೆಗಳು ಬಂದಿವೆ, ಅವು ಹಾಳಾಗಬಾರದು, ಹೇಗಾದರೂ ಮಾಡಿ ಪ್ರಾರಂಭಮಾಡಿ ಎಂದು ಹೇಳಿದೆ. ಅವರು, ನೀವು ಮಾಡಿಕೊಂಡು ಬಿಡಿ, ನಾವು ಮಂಜೂರು ಮಾಡಿಬಿಟ್ಟಿದ್ದೇವೆ ಎಂದು ಹೇಳಿದರು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ನಿಮಗೆ ಮಾಡಿಕೊಳ್ಳಿ ಎಂದು ಹೇಳಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾಡಬಾರದೇ ?

ಶ್ರೀ ಪಿ. ಜಿ. ಆರ್ ಸಿಂಧ .—ನಿಮಗೆ ಹೇಗೆ ಮಾಡಿಕೊಳ್ಳಿ ಎಂದು ಹೇಳುವುದಕ್ಕಾಗುತ್ತದೆ ? ವಿಮೆನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ನೀವು ಮಾಡಿಕೊಳ್ಳಿ ಎಂದು ನಾನು ಹೇಳುತ್ತೇನೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಸಂತೋಷ. ಮಾಡಿಕೊಳ್ಳಿ ಎಂದು ಹೇಳಲಿಲ್ಲವೆಂದು ತಾವು ಹೇಳಿದಿರಿ, ಆದರೆ ಈ ವರ್ಷದಲ್ಲಿ ಅದನ್ನು ಪ್ರಾರಂಭ ಮಾಡುವುದು ಅವಶ್ಯಕತೆ ಇದೆಯಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಈ ವರ್ಷ ಕೇಂದ್ರ ಸರ್ಕಾರದವರು ೧೪ ಬ್ಲಾಕುಗಳಿಗೆ ನಮ್ಮ ರಾಜ್ಯದಲ್ಲಿ ಸ್ಯಾಂಕ್ಷನ್ ಮಾಡಿದ್ದಾರೆ. ಅದರಲ್ಲಿ ಇವರ ಕ್ಷೇತ್ರ ಬರುತ್ತದೆ. I am not trying to take the credit for that. In fact we have to thank the Government of India. We have thanked them for it. They have sanctioned 14 blocks. Of course there may be some differences about the selection of the blocks.

ಶ್ರೀಮತಿ ಮನೋರಮಾ ಮಧ್ವರಾಜ್.—ಏನು ಸ್ಯಾಂಕ್ಷನ್ ಮಾಡಿದ್ದಾರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಐಸಿಡಿಎಸ್ ಬ್ಲಾಕ್ಸ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೆಂಗಳೂರು ಸುತ್ತಮುತ್ತ ಹಂಚಿಕೊಂಡಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಿಮ್ಮ ಜಿಲ್ಲೆಯಲ್ಲೂ ಎರಡು ತಾಲ್ಲೂಕುಗಳಲ್ಲಿ ಇದೆ. ಒಂದು ಆಳಂದ ಮತ್ತು ಎರಡನೆಯದು ಶಹಪುರ್.

ಶ್ರೀ ಬಿ. ಬಸವಲಿಂಗಪ್ಪ.—ಸಮಾಜ ಕಲ್ಯಾಣ ಮಂತ್ರಿಗಳು ನೀವು ಪ್ರಾರಂಭ ಮಾಡಿಕೊಳ್ಳ ಬೇಡಿ ಎಂದು ಹೇಳಿದ್ದೇವೆಯೇ ಎಂದು ಹೇಳುತ್ತಾರೆ. ಈ ವರ್ಷದೊಳಗೆ ಅಧಿಕಾರಿಗಳ ಮುಖಾಂತರ ಪ್ರಾರಂಭ ಮಾಡಬೇಕಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದನ್ನು ನಾವು ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈ ತಿಂಗಳ ಕೊನೆಯೊಳಗೆ ಮಾಡಿಬಿಡಿ. ನೀವೇ ಬಂದು ಪ್ರಾರಂಭೋತ್ಸವ ಮಾಡಿ. ಈ ಕರ್ನಾಟಕದ ೧೬ ಬ್ಲಾಕ್‌ಗಳಲ್ಲಿ ಮಕ್ಕಳ ಪೋಷಣೆ ಕಾರ್ಯಕ್ರಮ ಏನಿದೆ ಅದನ್ನು ಪ್ರಾರಂಭ ಮಾಡಿಲ್ಲವೇ ಇದುವರೆಗೂ ಮಾಡಿಲ್ಲ ಕಾರಣ ಏನು ಎಂದು ಕೇಳಿದೆ. ಕೇಳಿದ್ದಕ್ಕೆ ಸರ್ಕಾರದಲ್ಲಿ ದುಡ್ಡು ಇಲ್ಲ ಸ್ವಾಮಿ, ಅಂಗನವಾಡಿಯಲ್ಲಿ ಕೆಲಸ ಮಾಡತಕ್ಕವರಿಗೆ ಸಂಬಳ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಮಾಡಿಲ್ಲ. ಅಂದರೆ ಅರ್ಥ ಏನು ಸ್ವಾಮಿ ? ನಾನು ಹೇಳುತ್ತೇನೆ ಇಂತಹ ಒಂದು ದುಸ್ಥಿತಿಯು ಪ್ರವೃತ್ತಿ ಸರಿಯಲ್ಲ ಎಂದು ನನಗೆ ಮನವರಿಕೆಯಾಗಿದೆ. ನಿಮ್ಮ ಮನವರಿಕೆ ಹೇಗೆ ಆಗಿದೆಯೋ ನನಗೆ ಗೊತ್ತಿಲ್ಲ. ನಿಮ್ಮ ಪರಿಸ್ಥಿತಿ ಹೀಗೆ ಇದೆ. ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ ಎಂದು ಅಸ್ತಿತ್ವಕ್ಕೆ ಬಂತೋ ಅವೊತ್ತಿನಿಂದ ಇವೊತ್ತಿನವರೆಗೂ ಹಿಂದುಳಿದ ವರ್ಗದವರು, ನಿಮ್ಮ ವರ್ಗದವರು ಏನಿದ್ದಾರೆ ಅವರ ಯೋಗಕ್ಷೇಮ ಸಾಕಷ್ಟು ಆಗುತ್ತಿಲ್ಲ. ಈಗ ಸ್ಕಾಲರ್‌ಷಿಪ್ ಕೊಡುವುದರಲ್ಲಿ ೧೫೦ ರೂಪಾಯಿಗಳಿಂದ೨೦೦ ರೂಪಾಯಿಗೆ ಏರಿಸಿದ್ದಾರೆ. ನಾನು ೨೫೦ ರೂಪಾಯಿಗೆ ಏರಿಸಿ ಎಂದು ಹೇಳಿದ್ದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—೨೦೦ ರೂಪಾಯಿಗೆ ಏರಿಸಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಧನ್ಯವಾದಗಳು. ಅದನ್ನು ಬಿಟ್ಟರೆ ಬೇರೆ ಯಾವ ಒಂದು ಆರ್ಥಿಕ ಕಾರ್ಯಕ್ರಮ ಮಾಡಿದ್ದೀರಿ ನೀವು. ನೀವು ಮಾಡದೇ ಇದ್ದರೆ ಹೋಗಲಿ, ನಮಗೆ ಏನೂ ಪ್ರೋಗ್ರಾಮ್ ಬೇಡ ಅಂದರೂ ಕೂಡ ಮರ್ಯಾದೆಯಿಂದ ಸಮಾಜದಲ್ಲಿ ಜೀವನ ಮಾಡಿಕೊಳ್ಳಲಿಕ್ಕೆ ಸರ್ಕಾರದವರು ಏತಕ್ಕೆ ಬಿಡುತ್ತಿಲ್ಲ ? ಅಲ್ಲಿ ಪಾಯಖಾನೆ ತಿನ್ನಿಸುವುದರಿಂದ ಪ್ರಾರಂಭವಾಗಿ ಬೆತ್ತಲೆ ಸೇವೆ ಮುಖಾಂತರ ಆ ಮೇಲೆ ಗುಲ್ಬರ್ಗ ಡಿಸ್ಟ್ರಿಕ್ಟ್‌ಗೆ ಹೋಗಿ ಚಿಂಚೋಳಿಗೆ ಕೊನೆಯಾಯಿತು. ಕೊನೆ ಅಂದರೆ ಅದು ಮೊನ್ನೆ ಆಗಿದೆ. ಅವರು ಮೊದಲೇ ಕೂಲಿ ಮಾಡೋ ಜನ. ನೀವು ಅವರಿಗೆ ಅವಮಾನ ಮಾಡುವುದು ಅವರ ಹೆಣ್ಣುಮಕ್ಕಳನ್ನು ಉಪಯೋಗಿಸಿಕೊಳ್ಳುವುದು. ಸವದತ್ತಿಯಲ್ಲಿ ಹೋಗಿ ನೋಡಿ ಮೂರು ಸಾವಿರ ಹೆಣ್ಣುಮಕ್ಕಳನ್ನು ಸೂಳೆಯರಾಗಿ ಬಿಟ್ಟಿದ್ದಾರೆ. ಅದನ್ನು ಪ್ರತಿಬಂಧಕ ಮಾಡಲಿಕ್ಕೆ ನಿಮ್ಮ ಸರ್ಕಾರಕ್ಕೆ ತಾಕತ್ತು ಇಲ್ಲ. ಆ ಹೆಣ್ಣುಮಕ್ಕಳು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಇದ್ದಾರೆ ಮತ್ತೆ ಬೇಡರು, ಕೆಲವರು ಇದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ತಮ್ಮ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ ಸೂಳೆಯರನ್ನಾಗಿ ಬಿಡತಕ್ಕದ್ದು ನಾವು ಕಣ್ಣಿಂದ ನೋಡಬೇಕು. ನಾವು ಇದ್ದಾಗ ಇದಕ್ಕೆ

ಪ್ರತಿಬಂಧಕ ಮಾಡಿದ್ದೆವು. ಇದನ್ನು ಕಣ್ಣಿಂದ ನೋಡತಕ್ಕ ರೀತಿಯಲ್ಲಿ ಈ ಸರ್ಕಾರ ಮಾಡಿರತಕ್ಕದ್ದು ಇದು ಖಂಡನೀಯವಾಗಿರತಕ್ಕದ್ದು. ಇದು ಹೆಣ್ಣುಮಕ್ಕಳ ಸಂತತಿಗೆ ಅಗೌರವ ತರತಕ್ಕ ಮಾತಾಗಿದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಹೀಗೆ ಹೆಣ್ಣುಮಕ್ಕಳ ವಿಚಾರದಲ್ಲಿ ಆ ಮೇಲೆ ಮಕ್ಕಳ ವಿಚಾರದಲ್ಲಿ ಸರ್ಕಾರ ಸರಿಯಾದಂಥ ಧೋರಣೆಯನ್ನು ತಾಳಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಹೆಣ್ಣುಮಕ್ಕಳ ಬಗ್ಗೆ ಇವರು ಸರಿಯಾದ ಧೋರಣೆಯನ್ನು ತಾಳಿಲ್ಲ. ಈಗ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಯಾರು ಎನ್ನುವ ಬಗ್ಗೆ ಬಹಳ ಜಿಜ್ಞಾಸೆ ಬಂದಿದೆ. ಅಗಸರು, ಮತ್ತೆ ಎಲ್ಲ ಜಾತಿಯವರನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ಗೇ ಸೇರಿಸಬೇಕೆಂದು ಹೇಳುವಂಥಾದ್ದು ಪತ್ರಿಕೆಯಲ್ಲಿ ಓದಿದ್ದೇನೆ. ಇನ್ನು ೧೯೩೧ನೇ ಇಸವಿಯಲ್ಲಿ ಆದಂಥಾದ್ದು ಒಂದು ಕಾಗದ ತಂದಿದ್ದೇನೆ. ಈ ಸೆನ್ಸಸ್ ರಿಪೋರ್ಟ್ ಯಾವಾಗ ಪ್ರಾರಂಭವಾಯಿತು ಆ ರಿಪೋರ್ಟ್ ಕಾಪಿ ಮಾಡಿಕೊಂಡು ಬಂದಿದ್ದೇನೆ.

"Depressed.—Now regarding the Scheduled Caste meaning only whether a caste or class.

What are the criteria fixed, for fixing up, for identifying the Scheduled Caste people (i) whether the caste or class in question can be served by the clean Brahmin or not ?

2, Whether caste or class in question is served by Barbers, water carriers, tailors etc., who serve caste Hindus.

3- Whether the caste or class in question pollutes a high caste Hindu by contract or by proxidity.

4. Whether the caste or class in question is one from whose hands the caste Hindu cannot take water.

5. Whether the caste or class in question debarred from using public convenience such as roads, ferries, wells.

6. Whether the caste or class in question which debarred from use of Hindu Temples.

7. Where in ordinary social intercousre a well educated member of the caste or class in question will be treated as an equal by high caste men of the same educational qualification.

8, Whether the caste or class in question is merely depressed on account of its own ignorance illiteracy or proverty and but for that would be subject to social disability.

9. Whether it is depressed on account of the occupation followed and we but for that occupation it would be subject to no social disability.

According to head of 7 and 8 of the Census Definition, 1911 the depressed class now called as Scheduled Caste should not include premitive or aboriginal tribes.

ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದೇನೆ, ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಯಾರು ಎಂಬುದು ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ ಅದು ನಿರ್ವಿವಾದ, ಯಾರು ಈ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದಾರೆ, ಯಾರು ಸಾಮಾಜಿಕ ಸೌಲಭ್ಯಗಳಿಂದ ವಂಚಿತ ಆಗಿದ್ದಾರೆ, ಅವರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಪರಿಗಣಿಸಿದ್ದಾರೆ. ಈ ವರ್ಗದ ವ್ಯಕ್ತಿಗಳನ್ನು ಗುರ್ತಿಸಿ ಸರ್ಕಾರದವರು ಎಲ್ಲಾ ರೀತಿಯ

ಅನುಕೂಲಗಳನ್ನೂ ರಾಜ್ಯಾಂಗಬದ್ಧವಾಗಿ ಒದಗಿಸಿ ಅವರನ್ನು ಸಮಾಜದಲ್ಲಿ ಮೇಲಕ್ಕೆತ್ತಬೇಕೆಂದು ಹೊರಟರೆ ಸಮಾಜದಲ್ಲಿರುವ ಬೇರೆ ವರ್ಗದವರೆಲ್ಲರೂ ಕೂಡ ನಮಗೂ ಈ ಅನುಕೂಲಗಳನ್ನು ಕೊಡಿ. ನಮ್ಮನ್ನೂ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿಸಿ ಎಂದು ಹೊರಟ್ಟಿದ್ದಾರೆ. ಉತ್ತರ ಕರ್ನಾಟಕದಲ್ಲಿ ಮಾಲೇರು ಎಂದು ಒಂದು ಜನಾಂಗ ಇದೆ. ಅವರು ಬ್ರಾಹ್ಮಣರಂತೆ. ಅವರೂ ಕೂಡ ನಮ್ಮನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿಸಿ ಎಂದು ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಅಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸಿಕ್ಕತಕ್ಕ ಎಲ್ಲಾ ಸೌಲಭ್ಯಗಳನ್ನೂ ತಾವು ಕಿತ್ತುಕೊಂಡು ತಿನ್ನಬೇಕೆಂದು ಹೊರಟಿದ್ದಾರೆ. ಇದು ಖಂಡನೀಯವಾದುದು. ಇದಕ್ಕೆ ಸರ್ಕಾರದವರು ಅವಕಾಶವನ್ನು ಕೊಡಬಾರದೆಂದು ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇನ್ನೊಂದು ವಿಚಾರ ಎಂದರೆ, ಮಾನ್ಯ ಸದಸ್ಯರಾದ ಚಂದ್ರಕಾಂತ ಬೆಲ್ಲದ್‌ರವರು ಕೇಳಿದ್ದ ಒಂದು ಪ್ರಶ್ನೆಗೆ ಸರ್ಕಾರದವರು ಏನು ಉತ್ತರ ಕೊಟ್ಟಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ: ಮಾನ್ಯ ಬೆಲ್ಲದ್‌ರವರ ಪ್ರಶ್ನೆ ಈರೀತಿ ಇದೆ :

ಅ) ವಿಶ್ವವಿದ್ಯಾನಿಲಯದಲ್ಲಿ ಪದವಿ ಪರೀಕ್ಷೆಯಲ್ಲಿ ಹೆಚ್ಚಿನ ಗುಣ (ಅಂಕ)ಗಳನ್ನು ಪಡೆದು ಪಾಸಾದಂಥ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದವರ ಮಕ್ಕಳನ್ನು ಸರ್ಕಾರೀ ಸೇವೆಯ ವಿವಿಧ ಹುದ್ದೆಗಳಿಗೆ ಇಲ್ಲಿಯವರೆಗೆ ನೇರವಾಗಿ ನೇಮಿಸಿಕೊಂಡಿದ್ದು ಆ ಬಗ್ಗೆ ವಿವರಗಳನ್ನೊದಗಿಸದಲಾಗುವುದೆ ?

ಆ) ಈ ರೀತಿ ಇಲ್ಲಿಯವರೆಗೆ ಪ್ರತಿವರ್ಷ ಪ್ರತಿಯೊಂದು ವಿಶ್ವವಿದ್ಯಾನಿಲಯದಿಂದ ಎಷ್ಟು ಮಕ್ಕಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆ ಮಾಡುವಲ್ಲಿ ಅನುಸರಿಸಲಾದ ವಿಧಾನಗಳೇನು ಹಾಗೂ ಅವರಿಗೆ ಯಾವ ಯಾವ ಹುದ್ದೆಗಳನ್ನು ನೀಡಲಾಗಿದೆ ?

ಎಂದು ಕೇಳಿರುವುದಕ್ಕೆ ಈರೀತಿ ಉತ್ತರ ಕೊಟ್ಟಿದ್ದಾರೆ.

"ಉಚ್ಚ ನ್ಯಾಯಾಲಯವು ಈ ವಿಶೇಷ ನೇಮಕಾತಿ ನಿಯಮಾವಳಿ ಕಾರ್ಯಾಚರಣೆಗೆ ತಡೆಯಾಜ್ಞೆಯನ್ನು ನೀಡಿರುವುದರಿಂದ ಇದುವರೆಗೆ ಯಾರನ್ನೂ ನೇರ ಹುದ್ದೆಗೆ ನೇಮಕ ಮಾಡಿಕೊಂಡಿಲ್ಲ''.

೧೯೮೨–೮೩ ಮತ್ತು ೧೯೮೩–೮೪ರ ಸಾಲಿನಲ್ಲಿ ಸುಮಾರು ೩೫ ಹುಡುಗರು ಹೆಚ್ಚಿನ ಅಂಕಗಳನ್ನು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಯಲ್ಲಿ ತೆಗೆದುಕೊಂಡು ಪಾಸ್ ಆಗಿದ್ದಾರೆ. ಆದರೆ ಇದುವರೆಗೂ ಅವರಿಗೆ ಕೆಲಸವನ್ನು ಕೊಟ್ಟಿಲ್ಲ. ಇದಕ್ಕೆ ಕಾರಣ ಹೈ-ಕೋರ್ಟ್‌ನಿಂದ ತಡೆಯಾಜ್ಞೆ ಬಂದಿರುವುದರಿಂದ ಎಂದು ಮಾನ್ಯ ಹೆಗಡೆಯವರು ಕಾರಣವನ್ನು ಹೇಳಿದ್ದಾರೆ ಮತ್ತು ಈ ತಡೆಯಾಜ್ಞೆಯನ್ನು ವಜಾ ಮಾಡಿಸಿ ಇವರಿಗೆ ನೇರವಾಗಿ ಸರ್ಕಾರೀ ಹುದ್ದೆಯನ್ನು ಕೊಡುತ್ತೇವೆಂದು ಹೇಳಿದ್ದುದು ಇದುವರೆಗೂ ಆಗಿಲ್ಲ, ಇದು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್‌ನ ಮುಂದಿದೆ.

ಮಾನ್ಯ ಅಧ್ಯಕ್ಷರೆ, ಎಲ್ಲಿಯವರೆಗೆ ಜಾತಿಗಳು ನಮ್ಮಲ್ಲಿ ಇರುತ್ತವೆಯೋ ಅಲ್ಲಿಯವರೆಗೂ ಈ ಜನಾಂಗದವರಿಗೆ ಆಗತಕ್ಕ ಅನ್ಯಾಯವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಬೊಮ್ಮಾಯಿಯವರು ಸೊಂಟಕ್ಕೆ ಬಟ್ಟೆಯನ್ನು ಕಟ್ಟಿಕೊಂಡು ನಾನು ಈ ಜಾತೀಯತೆಯನ್ನು ನಿರ್ಮೂಲನ ಮಾಡುತ್ತೇನೆಂದು ಹೊರಟ್ಟಿದ್ದಾರೆ. ಆದರೆ ಇದು ಸಾಧ್ಯವೇ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳಾದ ಬೊಮ್ಮಾಯಿಯವರಿಗೆ ಕೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ ಈ ಆಯವ್ಯಯ ಪಟ್ಟಿಯನ್ನು ಮಾನ್ಯ ಮುಖ್ಯಮಂತ್ರಿಗಳು ಮೊದಲನೆಯ ಬಾರಿಗೆ ಮಂಡಿಸಿದ್ದಾರೆ. ಇದು ಚುನಾವಣೆಯ ಕಾಲಕ್ಕೆ ಬಂದಿರತಕ್ಕಂಥ ಬಜೆಟ್ ಆಗಿರುವುದರಿಂದ ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಏನೇನು ಮಾಡಬೇಕೋ ಅದೆಲ್ಲವನ್ನೂ ಸಹ ಮಾಡಲಿಕ್ಕೆ ಪ್ರಯತ್ನಪಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅವರು ಇವತ್ತಿನ ದಿವಸ ಮುಖ್ಯವಾಗಿ ಹೇಳಿರುವುದೇನೆಂದರೆ ಅವರ ಬಜೆಟ್ ಭಾಷಣದಲ್ಲಿ ಅತಿಮುಖ್ಯವಾಗಿ ನಮಗೆ ಹೇಳಿರುವಂಥ ಅಂಶ ಪೇಜ್ ನಂಬರ್ ೩೧, ಪ್ಯಾರ ನಂಬರ್ ೬೮ರಲ್ಲಿ ನಮೂದಿಸಿರುವುದೇನೆಂದರೆ.—

"Let me now sum up my basic approach to the budget of 1989-90. The new thrust is in the direction of speedier rural development with accent on employment and poverty

alleviation through a good mix of agro-industrial growth. Irrigation and power will provide the required impetus for higher growth of the State's economy which combined with employment as major objective and the welfare of larger number of people, will reduce regional imbalances. The keyword is a drive for higher productivity, effective implementation of Plan programmes and intensive monitoring of the implementation process. The major elements in the new thrust are schemes like combining employment under Land Army with the TRYSEM for a new orientation of education through manual work, provision of over Rs. 309 crores for irrigation with a similar emphasis on power, a new approach to land use, stepping up the housing programme, introduction of rural sanitation programme reservation of jobs for women in specific sectors, providing statutory support for fulfilment of the reservation policy for weaker sections......''

ಗುರಿಯ ಆಧಾರದ ಮೇಲೆ ಬಜೆಟ್‌ನ್ನು ರೂಪಿಸಿದ್ದಾರೆಂದು ಹೇಳಿ ಇದನ್ನು ಓದಿದ ಮೇಲೆ ಖಂಡಿತವಾಗಿಯೂ ಒಂದು ಒಳ್ಳೆಯ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಒಳ್ಳೆಯ ಗುರಿ ಇಟ್ಟುಕೊಂಡಿರುವ ಒಂದು ಒಳ್ಳೆಯ ಬಜೆಟ್ ಎಂದು ಹೇಳುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ಇದ್ದರೆ ಇದನ್ನು ಸ್ವಾಗತಿಸಬೇಕಾಗುತ್ತದೆ, ಸ್ವಾಗತಿಸದೆ ಇರುವುದಕ್ಕಾಗುವುದಿಲ್ಲ. ಮುಖ್ಯವಾಗಿ ಇನ್ನು ಮುಂದೆ ಏನು ಮಾಡುತ್ತೇವೆ ಎನ್ನುವ ದೃಷ್ಟಿಕೋನವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆಯೇ ವಿನಹ ಹಿಂದೆ ಏನು ಮಾಡಿದ್ದೇವೆನ್ನುವುದನ್ನು ಹೇಳಲಿಲ್ಲ. ಹಿಂದೆ ಮಾಡಿದ್ದನ್ನು ಹೇಳಿ ಮುಂದೆ ಈ ರೀತಿ ಮಾಡುತ್ತೇವೆಂದು ಹೇಳಿದ್ದರೆ ಹಿಂದೆ ಮಾಡಿದ್ದನ್ನು ವಿಮರ್ಶಿಸಿ ಮುಂದೆ ಮಾಡುತ್ತಾರೆಂಬ ಭರವಸೆಯಿಂದ ಸತ್ಯ ಹೇಳಿದ್ದಾರೆ, ಅಂಥ ಒಂದು ಬಜೆಟ್‌ನ್ನು ರೂಪಿಸಿದ್ದಾರೆಂದು ಹೇಳುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಇದನ್ನು ಒಂದು ಚುನಾವಣೆಯ ದೃಷ್ಟಿಯಿಂದ ಮಾಡಿರುವುದರಿಂದ ಇವತ್ತಿನ ದಿವಸ ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಈ ಬಜೆಟ್‌ನ್ನು ಸ್ವಲ್ಪಮಟ್ಟಿಗಾದರೂ ವಿಮರ್ಶೆ ಮಾಡಬೇಕಾಗುತ್ತದೆಂದು ನನ್ನ ಅಭಿಪ್ರಾಯ. ಈ ಬಜೆಟ್ ಭಾಷಣದ ೪೪ ಪುಟಗಳಲ್ಲಿ ೧೧ ಪುಟಗಳು ಶೇಕಡಾ ೨೫ರಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಹಾಗೆ ಇರುವ ವಿವಾದಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳು, ಫೈನಾನ್ಸ್ ಕಮಿಷನ್‌ಗೆ ಸಂಬಂಧಪಟ್ಟ ವಿಷಯಗಳು ಎಲ್ಲರಿಗೂ ಸಂಬಂಧಪಟ್ಟ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ೨೫ ಪರ್ಸೆಂಟ್ ಅದಕ್ಕಾಗಿಯೇ ಮೀಸಲಾಗಿಟ್ಟಿದ್ದಾರೆ. ಹಿಂದೆ ಯಾವ ಬಜೆಟ್‌ನಲ್ಲೂ ನಾನು ನೋಡಿದಹಾಗೆ ಕೇಂದ್ರ ರಾಜ್ಯ ಸಂಬಂಧಪಟ್ಟಂತಾಗಲಿ, ಫೈನಾನ್ಸ್ ಕಮಿಷನ್‌ನಿಂದಾಗಲಿ ನಮಗಾಗಿರುವ ಅನ್ಯಾಯದ ಬಗ್ಗೆ ಹೇಳಿದಂತಿಲ್ಲ. ಆ ಒಂದು ದೃಷ್ಟಿಯಿಂದ ಕೆಲವು ಸಮಸ್ಯೆಗಳು ಉದ್ಭವವಾಗುತ್ತದೆ. ಮೊದಲನೆಯ ಪ್ರಶ್ನೆ ಏನೆಂದರೆ ಅದು ಹೇಳಿದಾಕ್ಷಣ ಒಂದು ರೀತಿಯಾದ ರೀಯಾಕ್ಷನ್ ಆಗುತ್ತದೆ. ಅದು ಹೇಗೆಂದರೆ ಕೇಂದ್ರ ಸರ್ಕಾರವನ್ನು ಅಲ್ಲಗಳೆಯುವ ಸಲುವಾಗಿ ಬೈಟಿಂಗ್ ಮಾಡುವ ಸಲುವಾಗಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು ಎಂದು ಕಾಣುತ್ತದೆ. ಅದೇ ಒಂದು ಕೆಲಸವನು ಮಾಡುತ್ತಿದ್ದಾರೆನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಅದನ್ನು ಮಾಡುವುದು ಸರಿಯಲ್ಲವೆಂದು ನಮ್ಮ ವಿರೋಧ ಪಕ್ಷದ ಸ್ನೇಹಿತರು ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಸ್ನೇಹಿತರು ಹೇಳುತ್ತಾರೆ. ಆದರೆ ನಾನಾದರೂ ಆ ಅಭಿಪ್ರಾಯವನ್ನು ಹೇಳುವುದಿಲ್ಲ. ಅಂದರೆ ಕಾಂಗ್ರೆಸ್‌ನ್ನಾಗಲಿ ಕೇಂದ್ರ ಸರ್ಕಾರವನ್ನಾಗಲಿ ಬೈಟಿಂಗ್ ಮಾಡುತ್ತಿಲ್ಲ. ಯಾರನ್ನೂ ಮಾಡಬೇಕಾದ ಪ್ರಮೇಯವೂ ಇಲ್ಲ. 'ಈಗ ಪ್ರಶ್ನೆ ಏನೆಂದರೆ ಕೇಂದ್ರ ಸರ್ಕಾರಕ್ಕೂ ರಾಜ್ಯ ಸರ್ಕಾರಕ್ಕೂ ಇರುವ ಸಂಬಂಧ ಒಂದು ಮಿತಿ ಇರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಆ ರೀತಿ ಇದೆ. ಹಿಂದೆ ಒಂದು ಕಾಲದಲ್ಲಿ ಎಲ್ಲವೂ ಕಾಂಗ್ರೆಸ್‌ಮಯವಾಗಿತ್ತು. ಕೇಂದ್ರ ಸರ್ಕಾರ ಅವರದೇ ಆಗಿತ್ತು. ಇವತ್ತು ಏನಾಗಿದೆ ಎಂದರೆ ಇಡೀ ದೇಶದಲ್ಲಿ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ರಾಜ್ಯ ಸರ್ಕಾರಗಳು ಬಂದಿದೆ.

೪-೩೦ ಪಿ ಎಂ.

ಮಿಕ್ಕ ಕಡೆ ಕಾಂಗ್ರೆಸ್ ಸರ್ಕಾರಗಳಿವೆ. ಕಾಂಗ್ರೇತರ ಸರ್ಕಾರ ಇರುವ ಕಡೆ ಜನರು ಕಾಂಗ್ರೆಸ್ಸ್ ಮೇಲೆ ವಿಶ್ವಾಸ ಇಟ್ಟಿಲ್ಲ ಎಂದು ಅರ್ಥ. ಏತಕ್ಕೆ ವಿಶ್ವಾಸ ಇಟ್ಟಿಲ್ಲ ಅಂದರೆ ಕಾಂಗ್ರೆಸ್ಸಿನವರು ನಡೆದ್ಕೊಂಡ ರೀತಿನೀತಿ ಮತ್ತು ಕೇಂದ್ರ ಸರ್ಕಾರದ ನೀತಿಯ ಕಾರಣದಿಂದ ಇಟ್ಟಿಲ್ಲ. ಈ ಅಭಿಪ್ರಾಯ ಬರುತ್ತದೆ. ಇದರಿಂದ ರಾಜ್ಯಗಳಿಗೆ ಹಕ್ಕುಗಳು ಬೇಕು, ರಾಜ್ಯದ ಜನತೆಗೆ ಮತ್ತು ಸರ್ಕಾರಕ್ಕೆ ಹಕ್ಕುಗಳು ಬೇಕು, ಎಲ್ಲಾ ಹಕ್ಕೂ ಕೇಂದ್ರಕ್ಕೆ ಇರುವುದು ಸರಿಯಾದುದಲ್ಲ ಎಂಬ ಅಭಿಪ್ರಾಯ ಬರುವುದು ಸಹಜವಾದುದು. ತಮಿಳುನಾಡು ಇರಬಹುದು, ಆಂಧ್ರ ಇರಬಹುದು, ಅಸ್ಸಾಂ ಇರಬಹುದು, ಹರಿಯಾಣ ಇರಬಹುದು, ಯಾವುದೇ ರಾಜ್ಯಗಳಲ್ಲಿ ಈ ಅಭಿಪ್ರಾಯ ಜನರಲ್ಲಿ ಉಂಟಾಗಿದೆ. ಎಲ್ಲವೂ ಒಂದೇ ಕಡೆ ಕೇಂದ್ರೀಕೃತವಾಗಿ ಸರ್ವಾಧಿಕಾರಿ ಮನೋಭಾವ ಕೇಂದ್ರದಲ್ಲಿ ಬೆಳೆದರೆ ಸರಿಯಾದುದಲ್ಲ. ರಾಜ್ಯಕ್ಕೆ ಹಣ ಕೊಡುವ ವಿಷಯ ಕೂಡ ಮುಖ್ಯವಾದುದು. ೯ನೇ ಹಣಕಾಸಿನ ಆಯೋಗಕ್ಕೆ ೮ನೇ ಹಣಕಾಸಿನ ಆಯೋಗಕ್ಕೆ ಮತ್ತು ೭ನೇ ಹಣಕಾಸಿನ ಆಯೋಗಕ್ಕೆ ಮನವಿ ಕೊಟ್ಟಿದ್ದಾರೆ. ನಮಗೆ ಎಷ್ಟು ಬರಬೇಕೋ ಬಂದಿಲ್ಲ ಎಂದು ಹೇಳಿ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಕೊಟ್ಟಿದ್ದಾರೆ. ಹಿಂದೆ ಶ್ರೀಮಾನ್ ದೇವರಾಜಅರಸ್ ಅವರು ಕೊಟ್ಟಿದ್ದಾರೆ. ಆದರೆ ಆ ಯಾವ ಸೂಚನೆಗಳನ್ನೂ ಒಪ್ಪಿಕೊಂಡಿಲ್ಲ. ಇದರಿಂದಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ಕಾಂಗ್ರೆಸ್ಸೇತರ ರಾಜ್ಯಗಳಿಗೆ ಅನ್ಯಾಯವಾಗಿದೆ. ಕೆಲವು ಕಾಂಗ್ರೆಸ್ ರಾಜ್ಯಗಳಿಗೂ ಕೂಡ ಅನ್ಯಾಯವಾಗಿದೆಯೆಂಬುದು ಸರ್ವವಿಧಿತ, ಇದೊಂದೇ ಕಾರಣದಿಂದ ಈ ಸಂಬಂಧಗಳು ಬದಲಾವಣೆಯಾಗಬೇಕೆಂದು ಹೇಳುವುದಿಲ್ಲ. ಆದರೆ ಇದೂ ಒಂದು ಕಾರಣ ಅಷ್ಟೆ. ಇದಕ್ಕಿಂತ ಮುಖ್ಯವಾದ ಕಾರಣಗಳಿವೆ ಎಂದು ನನಗನ್ನಿಸುತ್ತದೆ. ತಮಗೆ ಗೊತ್ತಿರುವ ಹಾಗೆ ಬರೀ ಫೈನಾನ್ಸ್ ಕಮಿಷನ್ ಫಂಡ್ಸ್ ಸಮಸ್ಯೆಯಾಗಲೀ ಅಥವಾ ರಾಜ್ಯಸರ್ಕಾರಗಳ ಬಗೆ ತಾರತಮ್ಯ ಮಾಡಿ ಭಿನ್ನಾಭಿಪ್ರಾಯ ಬರುವ ರೀತಿಯಲ್ಲಿ ವರ್ತಿಸುವುದಾಗಲೀ ಅಲ್ಲದೆ ನಮಗೆ ತಿಳಿದ ಹಾಗೆ ಗೌರ್ನರ್‌ಗಳ ಬದಲಾವಣೆ ಆಗುತ್ತದೆ. ರಾಜ್ಯ ಸರ್ಕಾರಗಳ ಡಿಸ್‌ಮಿಸ್ ಆಗುತ್ತದೆ. ಅದೆಲ್ಲಾ ಚರಿತ್ರೆ ಗೊತ್ತಿದೆ. ಅದರ ಬಗ್ಗೆ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಏಕೆಂದರೆ ಟೈಮಿಲ್ಲ. ಆದಾಗುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೈಮಿಲ್ಲ ಎಂದು ಅದೇ ವಿಚಾರಕ್ಕೆ ಹೋಗುತ್ತಿದ್ದೀರಿ. ಅವರು ಮಾಡಿದ್ದು ಹೇಳಿ.

ಶ್ರೀ ಎಂ. ಎಸ್, ಕೃಷ್ಣನ್.—ಅದಕ್ಕೂ ಬರುತ್ತೇನೆ. ಸರ್ಕಾರಿಯಾ ಕಮಿಷನ್ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳುತ್ತಾರೆ ಅಂದುಕೊಂಡಿದ್ದೆ. ಪ್ರೈವೇಟಾಗಿ ಮಾತನಾಡಿದಾಗ ಅದನ್ನು ಜಾರಿಗೆ ತರಬೇಕು ಎಂದು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಪಬ್ಲಿಕ್ಕಾಗಿ ಹೇಳಿ ಎಂದು ಹೇಳಿ. ಪಬ್ಲಿಕ್ಕಾಗಿ ಹೇಳಿದರೆ ಪಾರ್ಟಿಯಿಂದ ತೆಗೆದುಬಿಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಬೇರೆ ರಾಜ್ಯದ್ದು ಬಿಟ್ಟು ನಮ್ಮ ರಾಜ್ಯದ್ದು ನೋಡಿ ಸ್ವಾಮಿ.

ಶ್ರೀ ಎಂ. ಎಸ್. ಕೃಷ್ಣನ್.—ನಮಗೆ ತಾರತಮ್ಯವಾಗಿದೆ, ಬರಬೇಕಾದ ಹಣ ಬಂದಿಲ್ಲ. ಬರ ಪರಿಹಾರಕ್ಕೆ ಕೊಡಬೇಕಾದ ಹಣ ಕೊಟ್ಟಿಲ್ಲ. ಅಡ್ವಾನ್ಸ್ ಎಂದು ಕೊಡುತ್ತಾರೆಯೋ ವಿನಃ ಅಸಿಸ್ಟೆನ್ಸ್ ಎಂದು ಕೊಡುತ್ತಿಲ್ಲ, ಇದು ಎಲ್ಲರಿಗೂ ಗೊತ್ತಿರುವ ವಿಷಯ ಎಲ್ಲಾ ರಾಜ್ಯಗಳಿಗೂ ಇದು ಅನ್ವಯಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇಳಿದಷ್ಟು ಕೊಡದೇ ಇರುವುದು ಒಂದು ವಿಚಾರ. ಆದರೆ ಕೊಟ್ಟಿದ್ದನ್ನು ಸರಿಯಾಗಿ ಉಪಯೋಗ ಮಾಡಿದ್ದಾರಾ ಕೇಳಿ. ಇಂಡಿಯಾ ಪಾಪುಲೇಷನ್ ಪ್ರಾಜೆಕ್ಟ್‌ಗೆ ಕೋಟ್ಯಾಂತರ ರೂಪಾಯಿ ಕೊಟ್ಟಿದ್ದಾರೆ. ಅದನ್ನು ಏತಕ್ಕೆ ಸರಿಯಾಗಿ ಖರ್ಚು ಮಾಡಿಲ್ಲ

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೇಳಿದ ಅಂಶ ನನ್ನ ತಲೆಯಲ್ಲಿದೆ. ಆ ವಿಷಯಕ್ಕೆ ಬರುವಷ್ಟರೊಳಗೆ ನೀವು ಹೇಳಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ನೀವು ದಿಢೀರನೆ ಪಕ್ಕದಲ್ಲಿರುವವರ ಮೇಲೆ ಬೀಳುತ್ತೀರಿ ಎದುರುಗಡೆ ನೋಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮಿಬ್ಬರ ಜಗಳ ಇದ್ದೇ ಇದೆ. ಇವರು ಮಾಡಿದ್ದೆಲ್ಲಾ ತಪ್ಪು ಎಂದು ಅವರು ಹೇಳುವುದು ಅವರು ಮಾಡಿದ್ದೆಲ್ಲಾ ತಪ್ಪು ಎಂದು ಇವರು ಹೇಳುವುದು ಇದ್ದದ್ದೇ ನಾವು ಸರಿಯಾಗಿದ್ದೇವೆ ಎಂದು ಹೇಳುವ ಉದ್ಧಟತನ ನಮಗಿಲ್ಲ, ನಿಮ್ಮಷ್ಟು ಉದ್ಧಟತನ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಸಖ್ಯ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಬಂಗಾಳ ದಲ್ಲಿ ಸ್ಟೆನ್ ಗನ್ ತೆಗೆದುಕೊಂಡುಹೋಗಿ ಎಂದು ಹೇಳುತ್ತಿದ್ದಾರೆ. ಅದು ನಡೆದಿರತಕ್ಕದ್ದು ಇಲ್ಲಿ ಇವರು ಬೆಣ್ಣೆ ಹಾಕಿ ತಿಕ್ಕುವ ಕೆಲಸ ಮಾಡುತ್ತಿದ್ದಾರೆ,

ಶ್ರೀ ಬಿ. ಬಸವಲಿಂಗಪ್ಪ.—ಕುಣಿಯುವವರು ನೀವು ನೆಲ ಸೊಟ್ಟಗಿದೆ ಎಂದು ಏತಕ್ಕೆ ಹೇಳುತ್ತೀರಿ ಸುಮ್ಮನೆ ಕುಣಿಯಿರಿ.

ಶ್ರೀ ಆರ್. ವೆಂಕಟರಾಮಯ್ಯ.—ಘನಿಖಾನ್ ಚೌಧುರಿ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೀಗೇ ಇದ್ದರೆ ಆಗುವುದಿಲ್ಲ ಗನ್ ತೆಗೆದುಕೊಳ್ಳಿ ಎಂದು ಘನಿಖಾನ್ ಚೌದರಿಯವರು ಹೇಳಿದರು. ನಾವು ಇಬ್ಬರೂ ಇದ್ದೇವೆ. ಅವರು ಎಡ ಪಕ್ಷದವರು ಅವರ ಸರ್ಕಾರವನ್ನು ಡಿಫೆಂಡ್ ಮಾಡತಕ್ಕ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಪ್ಪು ಮಾಡಿದ್ದನ್ನೂ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಕೀಯ ವಿಚಾರ ಧಾರೆ ತಿಳಿಯಾಗಬೇಕಾದರೆ ರಾಜ್ಯ ಮತ್ತು ಕೇಂದ್ರದ ಸಂಬಂಧಗಳು ಸರಿಯಾಗಿರಬೇಕು. ಅದರ ಬಗ್ಗೆ ಇನ್ನೂ ಹೆ... ವಿವರಗಳಿಗೆ ಹೋಗು ವುದಿಲ್ಲ. ಆದರೆ ಅತಿ ಮಹತ್ವವಾದ ವಿಚಾರವೇನೆಂದರೆ, ಕಾಂಗ್ರೆಸ್ಸೇತರ ಮು... ಮಂತ್ರಿಗಳು ೧೯೮೩ನೇ ಅಕ್ಟೋಬರ್ ೫-೭ ರಂದು ಸಭೆ ಸೇರಿ ಕೆಲವು ಅಂಶಗಳನ್ನು ಚರ್ಚೆಗೆ ತೆಗೆದುಕೊಂಡು ಅವುಗಳನ್ನು ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ. ಬರೀ ಹಣಕಾಸಿನ ಪ್ರಶ್ನೆ ಮಾತ್ರವಲ್ಲ, ಅವರು ಹೇಳಿರುವುದು ಇನ್ನೂ ಬೇರೆ ವಿಚಾರಗಳು ಇವೆ ಅದನ್ನೆಲ್ಲಾ ನಾನು ಓದುವುದಕ್ಕೆ ಹೋಗು ವುದಿಲ್ಲ. ಅದರಲ್ಲಿ ಒಂದಂಶ ಏನು ಹೇಳಿದ್ದಾರೆಂದರೆ This meeting demand that the following changes be effected in financial aspect between Central and State... ಈ ರೀತಿಯ ೭ ಪಾಯಿಂಟ್‌ಗಳನ್ನು ಕೊಟ್ಟಿದ್ದಾರೆ. ಅದರಲ್ಲಿರತಕ್ಕ ಕೆಲವು ಅಂಶಗಳ ಬಗ್ಗೆ ಶ್ರೀಮಾನ್ ಬೊಮ್ಮಾಯಿಯವರ ನೇತೃತ್ವದ ಸರ್ಕಾರವೂ ಹೇಳಿದೆ, ಅದಕ್ಕೆ ಹಿಂದೆ ಇದ್ದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರವೂ ಹೇಳಿದೆ. ಇದರಲ್ಲಿ ಸಂಬಂಧಗಳು ಸರಿಯಾಗಿ ಇರ ಬೇಕೇದರೆ, ಇವತ್ತಿನ ದಿವಸ ಆ ರೀತಿಯ ಸಂಬಂಧಗಳು ಸರಿಯಾಗಿಲ್ಲದಿದ್ದು ಇನ್ನೂ ಹೆಚ್ಚು ಅಲಿಗೇಷನ್ ಆಗುತ್ತಿದೆ. ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರದ ನಡುವೆ ತಿಕ್ಕಾಟ ಉಂಟಾಗಿ ಮುಂದೆ ವಿರೋಧಭಾಸ ಉಂಟಾಗಿ ಇನ್ನೂ ತೊಂದರೆಯಾಗುತ್ತದೆ. ನಮ್ಮ ದೇಶದ ಪರಿಸ್ಥಿತಿ ಇವತ್ತು ಏನಾಗಿದೆ ಎಂದರೆ ಬಹಳ ಗಂಭೀರವಾಗಿದೆ. ನಮ್ಮ ದೇಶದಲ್ಲಿ ಛಿದ್ರಕಾರಕ ಶಕ್ತಿಗಳು ಬಹಳ ಬೆಳೆದಿವೆ, ಬೆಳೆಯುತ್ತಲ್ಲೂ ಇವೆ. ಅದನ್ನು ನೋಡುತ್ತಿದ್ದೇವೆ, ಪಂಜಾಬಿನಲ್ಲಿ ಏನಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಖಲಿಸ್ತಾನ್ ಬರಬೇಕು, ಅವರದ್ದೇ ಆದ ಸರ್ಕಾರವನ್ನು ಮಾಡಬೇಕೆಂದು ಹೊರಟಿದ್ದಾರೆ, ಈ ದೇಶದಲ್ಲಿ ಅನೇಕ ಕೋಮುಗಲಭೆಗಳು ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ ವಿಶ್ವ ಹಿಂದೂ ಪರಿಷತ್ ಅಂತ ಹೇಳಿಕೊಂಡು ಅವರೆಲ್ಲರೂ ಭಾರಿ ದೊಡ್ಡ ಪ್ರಮಾಣದಲ್ಲಿ ಹೊರಟಿ ದ್ದಾರೆ. ನೀವೂ ಕೂಡ ಜೇಠ್‌ಮಲಾನಿಯವರನ್ನು ಕರೆದುಕೊಂಡು ಬಂದು ರಾಜ್ಯ ಸಭಾ ಸದಸ್ಯರ ನ್ನಾಗಿ ನಮ್ಮ ರಾಜ್ಯದಿಂದ ಚುನಾಯಿಸಿ ಕಳುಹಿಸಿದ್ದು ಸರಿಯಾದುದಲ್ಲ. ಭಾರಿ ಅಪಾಯಕಾರಿ ಪರಿಸ್ಥಿತಿ ನಮ್ಮ ದೇಶದಲ್ಲಿದೆ. ವಿದೇಶೀ ಶಕ್ತಿಗಳೂ ಕೂಡ ನಮ್ಮ ದೇಶಗಳನ್ನು ಕಬಳಿಸಬೇಕೆಂದು ಪ್ರಯತ್ನ ಮಾಡುತ್ತಿವೆ. ನೇಷನ್ ಯೂನಿಟಿ, ನ್ಯಾಷನಲ್ ಇಂಟೆಗ್ರಿಟಿಯನ್ನು ಮುರಿಯುವುದಕ್ಕೆ ಅಮೇರಿಕ ಹಾಗೂ ಪಾಕಿಸ್ತಾನ ರಾಷ್ಟ್ರಗಳು ಪ್ರಯತ್ನ ಮಾಡುತ್ತಿವೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ, ಇದರಿಂದಾಗಿ ರಾಜ್ಯ ಮತ್ತು ಕೇಂದ್ರದ ಸಂಬಂಧದ ಹಿನ್ನಲೆಯಲ್ಲಿ ಇದು ಅತಿ ಮಹತ್ವದಾಗಿದೆ. ಇರತಕ್ಕ ಭಿನ್ನಾಭಿಪ್ರಾಯವನ್ನು ದೂರಮಾಡತಕ್ಕ ಕಾಲ ಬಂದಿದೆ. ಆ ಒಂದು ಒತ್ತಾಯದಿಂದ ಕೇಂದ್ರ ಸರ್ಕಾರ ದವರು ಸರ್ಕಾರಿಯಾ ಆಯೋಗವನ್ನು ನೇಮಕ ಮಾಡಿದರು. ಅದರ ವರದಿಯನ್ನು ಜಾರಿಗೆ ತರ ಬೇಕಲ್ಲ, ಅದನ್ನು ಏಕೆ ಜಾರಿಗೆ ತರಬಾರದು ? ಅದನ್ನು ಜಾರಿಗೆ ತರುವುದು ಅತಿ ಅವಶ್ಯಕವಾಗಿದ್ದು ಅದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದು ಒಂದು ಎರಡನೆಯ ವಿಷಯಕ್ಕೆ ಬರುವು ದಾದರೆ ಅದರ ಇನ್ನೊಂದು ಮುಖಕ್ಕೆ ಬರುವುದಾದರೆ. ಎಲ್ಲಾ ಕೇಂದ್ರ ಸರ್ಕಾರದಿಂದ ಇಂತಹ ಪರಿಸ್ಥಿತಿ ಬಂದಿದೆ ಎಂಬುದರ ಉತ್ತರ ಬರಬೇಕಾಗಿದೆ. ಮತ್ತು ಕೇಂದ್ರ ಸರ್ಕಾರಕ್ಕೂ ರಾಜ್ಯ ಸರ್ಕಾರಗಳಿಗೂ ಮಧ್ಯೆ ಸರಿಯಾದ ಸಂಬಂಧವಿಲ್ಲದೇ ಇರುವುದರಿಂದ ಈ ರೀತಿಯಾಗಿದೆ ಎಂಬುದು ಒಂದೇ

ಸರಿಯಾದುದಲ್ಲ ಅದರ ಇನ್ನೊಂದು ಮುಖವಾದ ರಾಜ್ಯ ಸರ್ಕಾರದವರಾದ ನೀವು ಏನು ಮಾಡಿದ್ದೀರಿ ? ನಿಮ್ಮ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಿಮ್ಮ ಹಣಕಾಸಿನ ಫರ್‌ಫಾರ್ಮೆನ್ಸ್ ನಿಮ್ಮ ಫೈನಾನ್ಸ್ ಮ್ಯಾನೇಜ್‌ಮೆಂಟ್ ಬಗ್ಗೆ ಆರ್ಥಿಕವಾಗಿ ಯಾವ ರೀತಿಯ ಹತೋಟಿಯನ್ನು ಇಟ್ಟುಕೊಂಡಿದ್ದೀರಿ ? ಏನು ಮಾಡಿದ್ದೀರಿ ಎಂಬುದರ ಪ್ರಶ್ನೆ ಬರುತ್ತದೆ. ನಿಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ಮ್ಯಾನೇಜ್ ಮಾಡಿದ್ದೀರಾ ಎಂಬುದು ಮೊದಲನೆ ಪ್ರಶ್ನೆ. ಎರಡನೆಯ ಪ್ರಶ್ನೆ ಏನೆಂದರೆ, ನಿಮ್ಮ ಅಧಿಕಾರ ವರ್ಗದವರ ಬಗ್ಗೆ ಹೇಳುವುದಾದರೆ ೧೯೮೩ ರಲ್ಲಿ ಈ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಈಗಲೂ ಜನತಾ ಪಕ್ಷ ಇದೆ. ಅದರಲ್ಲೇ ಜನತಾದಳವಾಗಿದೆ ನಿಮ್ಮ ಅಡ್ಮಿನಿಸ್ಟ್ರೇಷನ್ ಏನು ಇದೆ. ಅದನ್ನು ಟೋನಪ್ ಮಾಡುವ ರೀತಿಯಲ್ಲಿ ಹಾಗೂ ಭ್ರಷ್ಟಾಚಾರ ಇಲ್ಲದ ಹಾಗೆ ಸರಿಯಾಗಿ ಅಡ್ಮಿನಿಸ್ಟ್ರೇಟಿವ್ ರೂಲ್ಸ್‌ನ್ನು ಜಾರಿಗೆ ಕೊಡುವ ರೀತಿಯಲ್ಲಿ ಮಾಡುತ್ತೇವೆಂದು ನೀವೆಲ್ಲಾ ಹೇಳಿದ್ದೀರಿ, ಅದರ ಬಗ್ಗೆ ಅನೇಕ ಭರವಸೆಗಳನ್ನೂ ಕೂಡ ಕೊಟ್ಟಿದ್ದೀರಿ.

ಅದನ್ನೆಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಆದುದರಿಂದ ಎಷ್ಟು ದೂರ ತಾವು ಜಾರಿಗೆ ತಂದಿದ್ದೀರಿ ? ಆ ಆಧಾರದ ಮೇಲೆ ಈ ಬಡ್ಜೆಟನ್ನು ನೋಡಬೇಕೆಂದು ಹೇಳುತ್ತೇನೆ. ಇವತ್ತು ಅನೇಕ ಸಮಸ್ಯೆಗಳು ಏನಿವೆ. ಆರ್ಥಿಕ ಸಮಸ್ಯೆ ಇರಲಿ, ಸಾಮಾಜಿಕ ಸಮಸ್ಯೆಯಿರಲಿ ಅಥವಾ ರಾಜಕೀಯ ಸಮಸ್ಯೆ ಇರಲಿ ಅದರ ಬಗ್ಗೆ ನಿಮ್ಮ ಕ್ಯಾಬಿನೆಟ್ ಏನಿದೆ ಅದು ನೋಡಬೇಕಾಗುತ್ತದೆ. ಈ ಬಗ್ಗೆ ನಿಮ್ಮ ಪಕ್ಷದ ಎಲ್ಲಾ ೧೨೦ ಜನರ ಜೊತೆ ಈ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಈ ಬಗ್ಗೆ ತಮ್ಮ ಧೋರಣೆ ಏನು, ತಮ್ಮ ವಿಚಾರಧಾರೆ ಏನು ಎಂದು ಹೇಳುವುದಕ್ಕಾಗಿದೆಯೇ? ಹೌಸಿಂಗ್ ಪಾಲಿಸಿ, ಎಜುಕೇಷನ್ ಪಾಲಿಸಿ, ಇಂಡಸ್ಟ್ರಿಯಲ್ ಪಾಲಿಸಿ ವರ್ಕರ್ಸ್ ಕ್ಲಾಸ್ ಪಾಲಿಸಿಹೀಗೆ ಬೇಕಾದಷ್ಟು ಇವೆ. ಈ ಬಗ್ಗೆ ಈ ವಿಷಯಗಳ ಬಗ್ಗೆ ನಿಮ್ಮ ಧೋರಣೆ, ನಿಲುವು ಏನು ಎಂದುಹೇಳಿದ್ದೀರಾ? ಇದರ ಬಗ್ಗೆ ತಾವು ಹೇಳಿಲ್ಲ. ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ನಾನು ಆಮೇಲೆ ಬರುತ್ತೇನೆ. ಇದರಲ್ಲಿ ಹೊಸದಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಆಮೇಲೆ ಮಾತ ನಾಡುತ್ತೇನೆ. ಇವತ್ತು ರಿಸೋರ್ಸಸ್ ಕ್ರಂಚ್ ಇದೆ ಎಂದು ಹೇಳಿದ್ದೀರಿ, ಎಂದರೆ ಆರ್ಥಿಕ ಮುಗ್ಗಟ್ಟು ಇದೆಯೆಂದು ಹೇಳುತ್ತೀರಿ. ಇದರ ಅರ್ಥ ಏನು ಇದರ ನಿಜಾಂಶ ಏನೆಂದರೆ ಇವತ್ತಿನದಿವಸ ಅಭಿವೃದ್ಧಿ ಕೆಲಸ ಗಳು ನಿಂತುಹೋಗಿವೆ. ಇವತ್ತು ಹೊಸ ಹೊಸ ಅಭಿವೃದ್ಧಿಕೆಲಸಗಳನ್ನು ಈ ಸರ್ಕಾರ ತೆಗೆದುಕೊಳ್ಳುತ್ತಾ ಇಲ್ಲ, ಇರುವ ಅಭಿವೃದ್ಧಿ ಕೆಲಸಗಳು ಕೂಡಾ ಹಣ ಇಲ್ಲದೆ ನಿಂತು ಹೋಗಿವೆ, ಇನ್ನು ಬಡ್ಜೆಟ್ ಬೇರೆ ಪಾಸ್ ಮಾಡುತ್ತೇವೆ. ಇದನ್ನು ಏಕೆ ಪಾಸ್ ಮಾಡುವುದು, ಹೇಗೆ ಖರ್ಚುಮಾಡುತ್ತೇವೆ. ನೀವು ಖರ್ಚುಮಾಡಿರುವ ಪಟ್ಟಿಯನ್ನು ಸ್ಪೀಕರ್ ಸಾಹೇಬರು ನಮಗೆ ಕೊಡುತ್ತಾರೆ. ಅದನ್ನೆಲ್ಲಾ ಇಲ್ಲಿ ತಂದಿದ್ದೇನೆ. ಇದರಲ್ಲಿ ಒಂದೊಂದು ಅಂಶವನ್ನು ನೋಡಿದರೂ ನಮಗೆ ಬಹಳ ಆಶ್ಚರ್ಯ, ಶೋಚನೀಯ ಅಷ್ಟೇ ಅಲ್ಲದೆ ಸಂಕಟ ಕೂಡಾ ಆಗುತ್ತದೆ. ಕೊಟ್ಟ ಹಣ ಸರಿಯಾಗಿ ಉಪಯೋಗ ಆಗಿಲ್ಲ. ಮತ್ತೆ ಕೊಟ್ಟ ಹಣವನ್ನು ಯಾವುದಕ್ಕೆ ಉಪಯೋಗಿಸಬೇಕೋ ಅದಕ್ಕೆ ಉಪಯೋಗ ಮಾಡಿಲ್ಲ. ಇವತ್ತು ಅಭಿವೃದ್ಧಿ ಕೆಲಸ ನಿಂತಿದೆ. ಇವತ್ತು ಚೆಕ್‌ಗಳು ಬೌನ್ಸ್ ಆಗುತ್ತಿವೆ, ಶಾಲಾ ಶಿಕ್ಷಕರಿಗೆ ಸಂಬಳ ಇಲ್ಲ. ಈ ಪರಿಸ್ಥಿತಿಯಲ್ಲಿ ಈ ರಾಜ್ಯದ ಫೈನಾನ್ಸಿಯಲ್ ಕ್ರೈಸಿಸ್ ಬಹಳ ಸೀರಿಯಸ್ಸಾಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ, ೧೦೦ ಕೋಟಿ ರೂಪಾಯಿ ಕಂಟ್ರ್ಯಾಕ್ಟರುಗಳ ಬಿಲ್ ಬಾಕಿ ಇದೆಯಂತೆ ಇದು ಇನ್ನೂ ಜಾಸ್ತಿ ಇರಬಹುದು. ಆದ್ದರಿಂದ, ಈ ಪರಿಸ್ಥಿತಿ ಇರಬೇಕಾದರೆ ನಿಮ್ಮ ಆರ್ಥಿಕ ಸ್ಥಿತಿ ಬಹಳ ಕೆಟ್ಟಿದೆ ಎಂದು ನಾನು ಹೇಳಬೇಕಾಗುತ್ತದೆ. ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಸರ್ಕಾರ ಇನ್ನೂ ೪೫ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಮೊನ್ನೆ ಬಂದ ಭಾರಿ ಮಳೆಯಿಂದ ಫ್ಲಡ್ಸ್ ಬಂದು ಮನೆ ಮಠ ಕಳೆದುಕೊಂಡವರಿಗೆ ಹಣವನ್ನು ಇನ್ನೂ ಕೊಟ್ಟಿಲ್ಲ. ಮತ್ತೆ ಆಕ್ಸಿಡೆಂಟ್ ಕಾಂಪನ್‌ಸೇಷನ್ ೩೭ ಕೋಟಿ ರೂಪಾಯಿಗಳನ್ನು ಕೊಡಬೇಕು. ಮತ್ತೆ ಮೋಟರ್ ವೆಹಿಕಲ್ ಆಕ್ಟ್ ಪ್ರಕಾರ ಇನ್ನೂ ಹಣ ಕೊಟ್ಟಿಲ್ಲ. ಯಾವುದಕ್ಕೂ ಹಣ ಇಲ್ಲವೆಂದು ಕ್ರೈಸಿಸ್ ಎಂದು ತೋರಿಸುತ್ತಿದ್ದೀರಿ. ಮತ್ತು, ಮಂಡಲಪಂಚಾಯಿತಿ, ಜಿಲ್ಲಾಪರಿಷತ್ ಮತ್ತು ಮುನಿಸಿಪಾಲಿಟಿಗಳಿಗೆ ಇನ್ನೂ ಹಣ ಕೊಟ್ಟಿಲ್ಲ ನೀವು ಹಣ ಕೊಡದೆ ಅವರು ಕೆಲಸ ಮಾಡುವ ಹಾಗೆ ಇಲ್ಲ ನಿಮ್ಮ ಆರ್ಥಿಕ ಪರಿಸ್ಥಿತಿ ತೀರಾಹದಗೆಟ್ಟಿದೆಯೆಂದು ನಿಮ್ಮ ಎಕಾನಾಮಿಕ್ಸ್ ಸರ್ವೆ ೧೯೮೮-೮೯ರಲ್ಲೇ ಹೇಳಲಾಗಿದೆ. ನಿಮ್ಮ ಪುಸ್ತಕದಲ್ಲಿ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ವಿಷಯ ಹೀಗಿರಬೇಕಾದರೆ ಇದಕ್ಕೆ ಕಾರಣ ಏನು ಎಂಬುದನ್ನು ಹುಡುಕ ಬೇಕಾಗುತ್ತದೆ. ಇದಕ್ಕೆ ಕಾರಣ, ಇವತ್ತಿನ ದಿವಸ ಮೊದಲನೆಯದಾಗಿ ಕೇಂದ್ರ ಸರ್ಕಾರದವರು ಸಾಕದಷ್ಟು ಹಣ ಕೊಟ್ಟಿಲ್ಲ ಎಂಬುದು ಒಂದೇ ಅಲ್ಲ. ಇದಕ್ಕೆ ಬೇರೆ ಕಾರಣ ಕೂಡಾ ಇದೆ ಎಂದು ಹೇಳಬೇಕಾಗುತ್ತದೆ. ಇವತ್ತು ಕೊಟ್ಟ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಿದ್ದೀರಾ? ಇವತ್ತು ಕೊಟ್ಟಹಣವನ್ನು ಅಭಿವೃದ್ಧಿ

ಕೆಲಸಗಳಿಗೆ ಖರ್ಚು ಮಾಡುತ್ತಿದ್ದೀರೋ ಅಥವಾ ಅಭಿವೃದ್ಧಿಯೇತರ ಕೆಲಸಗಳಿಗೆ ಉಪಯೋಗ ಮಾಡುತ್ತಿದ್ದೀರೋ ಎಂದು ವಿಚಾರ ವಿಮರ್ಶೆ ಮಾಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವತ್ತು ಅಭಿವೃದ್ಧಿಯೇತರ ಕೆಲಸಗಳಿಗೆ ಹೆಚ್ಚು ಹಣ ಹೋಗುತ್ತಿದೆ. ಆರ್ಥಿಕ ಸಮೀಕ್ಷೆ ಮಾಡಬೇಕಾದರೆ ಎಲ್ಲರೂ ಹೇಳುತ್ತಾರೆ ಅಭಿವೃದ್ಧಿಗೆ ಹೆಚ್ಚು ಹಣ ಖರ್ಚುಮಾಡಬೇಕು, ಅಭಿವೃದ್ಧಿಯೇತರ ಕೆಲಸಗಳಿಗೆ ಹಣ ಕಡಿಮೆ ಆಗಬೇಕೆಂದು ಎಲ್ಲರೂ ಹೇಳುತ್ತಾರೆ. ಅಭಿವೃದ್ಧಿಯೇತರ ಕಾರ್ಯಗಳಿಗೆ ವರ್ಷೇ ವರ್ಷೇ ಜಾಸ್ತಿ ಖರ್ಚಾಗುತ್ತಿದೆ. ೧೯೭೩–೭೪ರಲ್ಲಿ ೬೧೨.೭೬ ಕೋಟಿ ಖರ್ಚಾಗಿ ಒಟ್ಟು ಶೇಕಡ ೩೧ ಆಗಿದೆ. ೧೯೭೪–೭೫ರಲ್ಲಿ ೯೩೦.೮೨ ಕೋಟಿ ರೂಪಾಯಿ ಖರ್ಚಾಗಿ ಒಟ್ಟು ೩೬ ಪರ್ಸೆಂಟ್ ಆಯಿತು. ಕಳೆದ ವರ್ಷ ೩೧ ಇದ್ದದು ೩೬ ಆಯಿತು ೧೯೭೫–೭೬ರಲ್ಲಿ ೯೨೩.೨೮ಕೋಟಿ ರೂಪಾಯಿ ಖರ್ಚಾಗಿ ಒಟ್ಟು ೩೩.೦೮ ಪರ್ಸೆಂಟ್ ಆಯಿತು, ಅದೇರೀತಿ ೧೯೭೬–೭೭ರಲ್ಲಿ ೯೭೬ ಕೋಟಿ ರೂಪಾಯಿ ಖರ್ಚಾಗಿ ಒಟ್ಟು ೩೦.೬ ಪರ್ಸೆಂಟ್ ಆಯಿತು. ೧೯೭೭–೭೮ರಲ್ಲಿ ೧೧೫೦ ಕೋಟಿ ರೂಪಾಯಿ ಖರ್ಚಾಗಿ ಒಟ್ಟು ೩೦ ಪರ್ಸೆಂಟ್ ಆಯಿತು ಈ ವರ್ಷ ೧೯೭೮–೭೯ರಲ್ಲಿ ೩೨ ಪರ್ಸೆಂಟ್ ಆಗುತ್ತದೆ. ಅಭಿವೃದ್ಧಿಯೇತರ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಾ ಇದ್ದರೆ ಬೇರೆ ರೀತಿಯಲ್ಲಿ ಹೇಳಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಗಿಮಿಕ್ಸ್ ಮಾಡುತ್ತಾರೆ. ಪಾಪ್ಯುಲಿಸ್ಟ್ ಪ್ರೋಗ್ರಾಮ್‌ಗಳನ್ನು ಜನಗಳಿಗೆ ತೋರಿಸುವುದು, ಅದಕ್ಕಾಗಿ ಹಣವನ್ನು ವೆಚ್ಚ ಮಾಡುವುದು. ಅಭಿವೃದ್ಧಿಯೇತರ ಕೆಲಸಗಳಿಗೆ ಹೆಚ್ಚು ಹಣ ಖರ್ಚಾಗಿದೆ ಎಂಬುದರ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ ಎಕನಾಮಿಕ್ ಸರ್ವೆಯ ಪುಟ–೪೨ರಲ್ಲಿ ಅವರೇ ಕೊಟ್ಟಿದ್ದಾರೆ. ನಾನು ಹೆಚ್ಚು ಅದರ ಬಗ್ಗೆ ಓದುವುದಕ್ಕೆ ಹೋಗುವುದಿಲ್ಲ ಕೆಲವು ಅಂಕಿ ಅಂಶಗಳನ್ನು ಹೇಳಿದ್ದೇನೆ. ಎರಡನೇ ಕಾರಣ ಸರ್ಕಾರದ ವರದಿ ಪ್ರಕಾರ ಶೇಕಡ ೩೦ ರಷ್ಟು ಹಣವನ್ನು ನಾವು ಪಡೆಯುತ್ತೇವೆ. ತನ್ನಿಂದಲೇ ಪಡೆಯತಕ್ಕದ್ದು ಮತ್ತು ಕೇಂದ್ರಸರ್ಕಾರದಿಂದ ಪಡೆಯತಕ್ಕದ್ದು ಶೇಕಡ ೩೦ರಷ್ಟು ಹಣ ಪೋಲಾಗುತ್ತಿದೆ ಅದನ್ನು ಬೇಕಾದರೆ ಡಿಪಾರ್ಟ್‌ಮೆಂಟ್‌ವೈಸ್ ಲೆಕ್ಕಹಾಕಿದರೆ ಗೊತ್ತಾಗುತ್ತದೆ. ಯಾರಿಗೆ ಪೋಲಾಗುತ್ತಿದೆ ಎನ್ನುವ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಆ ಹಣವನ್ನು ಸರ್ಕಾರಿ ನೌಕರರಿಗೆ ಕೊಡತಕ್ಕದ್ದು ಎನ್ನುವ ಧಾಟಿಯಲ್ಲಿ ಅವರು ಮಾತನಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಏತಕ್ಕೆ ಒಪ್ಪುವುದಿಲ್ಲ ಎನ್ನುವುದಕ್ಕೆ ಸರಿಯಾದ ಕಾರಣ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಿ ನೌಕರರಿಗೆ ಏತಕ್ಕೆ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತೀರಿ, ಬಡವರು ಹಳ್ಳಿಗಾಡಿನಲ್ಲಿ ಜಾಸ್ತಿಯಿದ್ದಾರೆ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಅಭಿಪ್ರಾಯ ಇಷ್ಟು, ಸರ್ಕಾರಿ ನೌಕರರು ಏನಿದ್ದಾರೆ ಅವರಿಗೆ ೮ ಸಾವಿರ ೧೦ ಸಾವಿರ ಮತ್ತು ೧೨ ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದೇವೆ ಅವರು ನಿಷ್ಠೆಯಿಂದ ಸೇವೆ ಮಾಡಬೇಕೆಂದು ನಾನು ಹೇಳಿದ್ದೇನೆ. ಅಷ್ಟು ಕೊಡುವುದಲ್ಲದೆ ಅವರು ಪುನಃ ಸ್ಟ್ರೈಕ್ ಮಾಡುತ್ತೇವೆಂದು ನೋಟೀಸ್ ಕೊಡತಕ್ಕದ್ದು ಸರಿಯಲ್ಲ. ಒಟ್ಟು ನಮ್ಮ ಬಜೆಟ್ ಹಣ ೧೨೮೦–೧೩೦೦ ಕೋಟಿ ರೂಪಾಯಿಗಳಲ್ಲಿ ಸರ್ಕಾರಿ ನೌಕರರಿಗೆ ಕೇಳಿದಹಾಗೆ ಕೊಡುತ್ತಾ ಹೋದರೆ ಜನಗಳಿಗೆ ಏನೂ ಉಳಿಯುವುದಿಲ್ಲ, ನಾವೆಲ್ಲರೂ ಕೂಡ ಬಡವರಿಗೋಸ್ಕರ ದುಡಿಯಬೇಕಾಗುತ್ತದೆಂದು ಆವೊಂದು ಅಭಿಪ್ರಾಯದಲ್ಲಿ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—೧೨೦೦ಕೋಟಿ ರೂಪಾಯಿ ಕೊಡುವುದರಿಂದ ಎಷ್ಟು ಪ್ರಯೋಜನವಾಗುತ್ತದೆನ್ನುವುದು ಮುಖ್ಯವಲ್ಲ. ಅವರು ಕೆಲಸ ಮಾಡಬೇಕು ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ ಎಲ್ಲರೂ ಕೆಲಸ ಮಾಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ರಾಜ್ಯ ಸರ್ಕಾರದ ನೌಕರರು ಯಾರೂ ಕೆಲಸ ಮಾಡುವುದೇ ಇಲ್ಲವೆನ್ನುವ ವಾದ ಸರಿಯಲ್ಲ. ನಾನು ತಿಳಿದುಕೊಂಡಿದ್ದೇನೆ ಕೆಲಸ ಮಾಡದೇ ಇರುವವರೂ ಇದ್ದಾರೆ, ಕೆಲಸ ಮಾಡುವವರು ಇದ್ದಾರೆ. ನೌಕರರನ್ನು ಕೆಲಸ ಮಾಡಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ಯಾರು ಸರ್ಕಾರ ನಡೆಸುತ್ತಾರೆ ಅವರ ಮೇಲಿದೆ ಬೆಲೆಗಳು ಜಾಸ್ತಿಯಾಗಿವೆ, ನಮಗೆ ತುಟ್ಟಿಭತ್ಯ ಕೊಡಿಯೆಂದರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ? ನೀವು ಕೆಲಸ ಮಾಡುವುದಿಲ್ಲ, ನಿಮಗೆ ಕೊಡುವುದರಿಂದ ಖಜಾನೆ ಬರಿದಾಗುತ್ತದೆನ್ನುವ ವಾದ ಸರಿಯಲ್ಲ. ಬೆಲೆಗಳನ್ನು ಕಡಿಮೆ ಮಾಡುವ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಬೆಲೆಗಳನ್ನು ಹತೋಟಿಯಲ್ಲಿಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗಿಲ್ಲ, ಜನತಾ ಸರ್ಕಾರಕ್ಕೆ ಸಾಧ್ಯವೇ ಇಲ್ಲ. ಎಕಾನಮಿಕ್ ಸರ್ವೆ ಪುಸ್ತಕದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಬೆಲೆಗಳು ಸಿಕ್ಕಾಪಟ್ಟೆ

ಜಾಸ್ತಿಯಾಗಿದೆ. ಎಂಬುದನ್ನು ಇವತ್ತಿನ ದಿವಸ ಇದರಲ್ಲಿ ಹೇಳಿದ್ದಾರೆ. ಅದನ್ನು ನಾನು ಹೇಳುತ್ತೇನೆ.

"Consumer price indices–Karnataka's towns. Most of the cities/towns have recorded double digit inflation, as reflected in their consumer price indices, during the first nine months of the year (March–December 1988). Mysore recorded the highest increase of 18.86% during the period, followed by Gulbarga (17.73%) Bhadravathi (17.70% and Hassan (16·79%) In fact, Bangalore registered, surprisingly, the smallest increase (7.39%), barring Harihar (6.19%) over the same period.

Wholesale prices–Bangalore City ;

During the period under review. March–December 1988, the trend in wholesale prices of Bangalore City is similar to that in the State and the country..."

ಕವರೇಜ್ ಆಫ್ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಬಗ್ಗೆ ನಿಮ್ಮ ಎಕಾನಾಮಿಕ್ ಸರ್ವೆ ಪುಸ್ತಕದ ಪೇಜ್ ೨೫ರಲ್ಲಿ ಸ್ಪಷ್ಟವಾಗಿದೆ. ನಾನು ಹೇಳುವುದೇನೆಂದರೆ ಎಲ್ಲವನ್ನೂ ಹತೋಟಿಗೆ ತೆಗೆದುಕೊಂಡು ಬನ್ನಿ ಬೇಡವೆಂದು ಹೇಳುವುದಿಲ್ಲ. ಬೇಕಾದಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ ಹಿಂದೆಯೂ ಹೇಳಿಕೊಂಡು ಬಂದಿದ್ದೀರಿ. ಆದರೆ ನೀವು ಮಾಡಿರುವ ಸಾಧನೆಗಳನ್ನು ನೋಡಿದರೆ ಈ ಎಲ್ಲಾ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆನ್ನುವ ಮನೋಭಾವ ತೋರಿಸಿಲ್ಲವೆಂದು ಗೊತ್ತಾಗುತ್ತದೆ It is not a question of just tinkering. It requires political will. ಇದಕ್ಕೆ ಪೊಲಿಟಿಕಲ್ ವಿಲ್ ಇರಬೇಕು ಆದರೆ ಇವತ್ತು ಅದು ಇಲ್ಲವೆಂಬ ಅಭಿಪ್ರಾಯಕ್ಕೆ ಬರಬೇಕಾಗಿದೆ. ಇವತ್ತು ಬೆಲೆಗಳು ಕಡಿಮೆಯಾಗಿಲ್ಲ. ಎಲ್ಲಾ ಗಗನಕ್ಕೆ ಏರಿವೆ. ಸಾಮಾನ್ಯ ಬಳಕೆದಾರರು ಉಪಯೋಗಿಸತಕ್ಕ ವಸ್ತುಗಳೆಲ್ಲ ಜಾಸ್ತಿಯಾಗಿದೆ. ಇದಕ್ಕೆ ಕಾರಣ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಇದನ್ನು ಹತೋಟಿಗೆ ತರಲು ಬೇರೆ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ?

ಇನ್ನು ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕಾದರೆ ಇದಕ್ಕೆ ಅದೂ ಒಂದು ಕಾರಣವಾಗಿರಬಹುದು ಭ್ರಷ್ಟಾಚಾರವಿಲ್ಲವೆಂದು ಈ ಜನತಾ ದಳದ ಸರ್ಕಾರ ಹೇಳಿಲ್ಲ. ಆ ರೀತಿ ಹೇಳಿದರೆ ನಾನು ನಂಬಲಿಕ್ಕೆ ಸಾಧ್ಯವಿಲ್ಲ. ಎಲ್ಲರೂ ಭ್ರಷ್ಟಾಚಾರಿಗಳೆಂದು ಹೇಳಲು ಹೋಗುವುದಿಲ್ಲ. ಭ್ರಷ್ಟಾಚಾರದ ಬಗ್ಗೆ ದೊಡ್ಡ ಕೂಗು ಎದ್ದಿದೆ. ಇದರ ಬಗ್ಗೆ ಬೇಕಾದಷ್ಟು ಪತ್ರಿಕೆಗಳಲ್ಲಿ ಬಂದಿದೆ. ಶ್ರೀ ರಾಮಕೃಷ್ಣ ಹೆಗಡೆಯವರ ಮೇಲೆ ಬಂದಿದೆ. ಅದು ಸುಳ್ಳೋ, ನಿಜವೋ ಎಂಬುದರ ಬಗ್ಗೆ ಅವರು ಎರಡು ಕೋಟಿ ರೂಪಾಯಿಗಳ ಡ್ಯಾಮೇಜನ್ನು ಹಾಕಿ, ಸುಬ್ರಮಣ್ಯ ಸ್ವಾಮಿಯವರ ಮೇಲೆ ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ. ಅದು ನಡೆದುಕೊಂಡು ಹೋಗಲಿ, ಅದರ ಬಗ್ಗೆ ನಾನು ಏನೂ ಹೇಳಲು ಹೋಗುವುದಿಲ್ಲ. ಆದರೆ ಹೊಗೆ ಆಡಬೇಕಾದರೆ ಬೆಂಕಿ ಇರಲೇಬೇಕು ಅಲ್ಲವೇ ? ಭ್ರಷ್ಟಾಚಾರ ಇದೆ ಎಂಬುದನ್ನು ನನ್ನ ಭಾಷೆಯಲ್ಲಿ ಹೇಳಬೇಕಾದರೆ ಕೆಲವು ಡಿಪಾರ್ಟ್‌ಮೆಂಟ್‌ಗಳ ಭ್ರಷ್ಟಾಚಾರಗಳ ಆಗರಗಳಾಗಿವೆ.

ಇನ್ನು ಬಿ.ಡಿ.ಎ. ಬಗ್ಗೆ ಬೇಕಾದಷ್ಟು ಹೇಳಿದ್ದಾರೆ. ಈಗ ಇಲ್ಲಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿದ್ದಾರೆ. ಬಿ.ಡಿ.ಎ. ಯಲ್ಲಿರತಕ್ಕ ಭ್ರಷ್ಟಾಚಾರ ಇನ್ನು ಎಲ್ಲೂ ಇಲ್ಲ. ಅದನ್ನು ಭ್ರಷ್ಟಾಚಾರ ಡೆವಲಪ್‌ಮೆಂಟ್ ಅಥಾರಿಟಿಯೆಂದು ಕರೆಯಬಹುದು. ಅಲ್ಲಿ ಒಂದು ಸಣ್ಣ ಪೇಪರ್ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೂ ದುಡ್ಡು ಕೊಡಬೇಕು. ಇವತ್ತು ಒಬ್ಬ ಹೆಣ್ಣು ಮಗಳು ನನ್ನ ಮನೆಗೆ ಬಂದಿದ್ದಳು. ಅವಳು ವಿಧವೆ, ಸೈಟನ್ನು ರಿಜಿಸ್ಟರ್ ಮಾಡಿಸಲು ಪತ್ರವನ್ನು ಕೊಟ್ಟು ೩ ತಿಂಗಳುಗಳಾದ್ದರೂ ಕೂಡ ಇದುವರೆಗೂ ಏನು ಮಾಡಿಲ್ಲ. ಈಗ ಆ ಪತ್ರವಿಲ್ಲವೆಂದು ಹೇಳಿದರಂತೆ. ಈ ತರಹ ನೂರೆಂಟು ಕೇಸುಗಳಿವೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಲ್ಯಾಂಡ್ ಡೀಲ್ ಬಗ್ಗೆ ಎಲ್ಲಾ ಬಹಿರಂಗವಾಗಿ ಬಂದುಬಿಟ್ಟಿದೆ. ಕೋ ಅಪರೇಟಿವ್ ಸೊಸೈಟೀಸ್ ಡೀಲಿಂಗ್ಸ್ ಬಗ್ಗೆ ಪೇಪರಿನಲ್ಲಿ ಒಂದಾದಮೇಲೊಂದರಂತೆ ಬರುತ್ತಿದೆ. ಇದು ಹೇಗಾಗಿದೆ ಎಂದರೆ ಬೇಲಿಯೇ ಎದ್ದು ಹೊಲ ಮೇಯುವ

ರೀತಿಯಲ್ಲಿ ಬಿ.ಡಿ.ಎ. ನಡೆದುಕೊಂಡು ಹೋಗುತ್ತಿದೆ. ಇದಕ್ಕೆ ಒಂದು ಕಡಿವಾಣ ಹಾಕತಕ್ಕ ಶಕ್ತಿ ಹಾಗೂ ತಾಕ್ಕತ್ತನ್ನು ಇದುವರೆಗೂ ತೋರಿಸಿಲ್ಲ. ಈಗಲಾದರೂ ಮಾನ್ಯ ಮಂತ್ರಿಗಳು ತೋರಿಸುತ್ತಾರೆಂದು ನಂಬಿದ್ದೇವೆ. ಇವರು ಸ್ವಲ್ಪ ಉತ್ಸಾಹ ಶೀಲರು ಇವರಿಗೆ ಸ್ವಲ್ಪ ಗಮ್ಮತ್ತು ಗತ್ತು ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅದು ನಿಮ್ಮ ಭ್ರಮೆ.

ಶ್ರೀ ಎಂ.ಎಸ್. ಕೃಷ್ಣನ್.—ನೋಡೋಣ, ಅದು ಆಗದಿದ್ದರೆ ಫೇಲ್ಯೂರ್ ಎಂದು ಹೇಳೋಣ. ಈ ಪ್ಲಾನ್ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಆದರೆ ಪ್ಲಾನ್ ಇಂಪ್ಲಿಮೆಂಟ್ ಆಗಿದೆಯೋ ಆಗುತ್ತದೆಯೋ ಎಂಬುದು ಪ್ರಶ್ನೆ. ಪ್ಲಾನ್ ಟಾರ್ಗೆಟ್ಟನ್ನು ಫೀಕ್ಸ್ ಮಾಡುತ್ತಾರೆ. ಫಂಡ್ಸ್ ಅಲೊಕೇಷನ್ ಮಾಡುತ್ತಾರೆ. ಆದರೆ ಫಿಜಿಕಲ್ ಆಗಿ ಏನೇನು ಅಚೀವ್‌ಮೆಂಟ್ ಆಗಿದೆ ಎಂಬುದನ್ನು ಪ್ರತಿಯೊಂದು ವಿಷಯದಲ್ಲೂ ಕೊಟ್ಟಿಲ್ಲ. ನೀರಾವರಿ ತೆಗೆದುಕೊಳ್ಳಿ, ರೋಡ್ ತೆಗೆದುಕೊಳ್ಳಿ, ಬೇರೆ ವಿಷಯವನ್ನು ತೆಗೆದುಕೊಳ್ಳಿ, ಅವುಗಳ ಬಗ್ಗೆ ನಿಮ್ಮ ಫಿಜಿಕಲ್ ಟಾರ್ಗೆಟ್ ಎಷ್ಟು, ನೀವು ಎಷ್ಟು ಪರ್ಸೆಂಟ್ ರೀಚ್ ಮಾಡಿದ್ದೀರಿ ಎಂಬುದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಆದರೆ ಶೇಕಡಾ ೫೦ ರಷ್ಟು ಕೂಡ ಆಗಿಲ್ಲವೆಂದು ನಾನು ಹೇಳಬೇಕಾಗಿದೆ. ಪ್ಲಾನ್‌ಟಾರ್ಗೆಟ್‌ಗೆ ಒಟ್ಟಾರೆ ತೆಗೆದುಕೊಂಡರೆ ಶೇಕಡ ೫೦ ರಷ್ಟು ಬರಬಹುದು. ಕೆಲವು ಕಡೆ ೬೦–೭೦ ಬರಬಹುದು. ಅದು ಬಹಳ ಪೂರ್ ಪರ್‌ಫಾರ್ಮೆನ್ಸ್. ಟಾರ್ಗೆಟ್ ಅಚೀವ ಆಗಿಲ್ಲ. ಸುಮ್ಮನೆ ಹಣವನ್ನು ತೆಗೆದುಕೊಳ್ಳುತ್ತಾರೆ. ಅಚೀವ್ ಆಗದೆ ಹೋದರೆ ಏನು ಪ್ರಯೋಜನ ? ಇದರಲ್ಲಿ ಅಚೀವ್ ಆಗದೆ ಇರತಕ್ಕ ಕಾರ್ಯಕ್ರಮಗಳು ಹೆಚ್ಚಿದೆ. ತಮಗೆ ಗೊತ್ತಿರುವ ಹಾಗೆ ರಾಜ್ಯ ಸರ್ಕಾರ ಹಲವಾರು ರೀತಿಯಲ್ಲಿ ಲೋನ್‌ಗಳನ್ನು ಪಡೆಯುತ್ತಾರೆ. ಲೋನ್ಸ್, ಟರ್ಮ್ ಲೆಂಡಿಂಗ್ ಲೋನ್ಸ್ ಅಂತ ಹೇಳುತ್ತಾರೆ. ಹಾಗೆಯೇ ಸೆಂಟ್ರಲ್ ಲೋನ್ಸ್ ಇದೆ. ಇದರ ಬಗ್ಗೆ ಇವರ ಪರ್‌ಫಾರ್ಮೆನ್ಸ್ ಏನಾಗಿದೆ ಎಂದು ನೋಡಬೇಕಾಗಿದೆ. ಇದರ ಬಗ್ಗೆ ಫೈನಾನಿಷಯಲ್ ರಿವ್ಯೂನಲ್ಲಿ ಹೇಳಿರುವುದನ್ನು ನೋಡಿದರೆ ಇದು ಒಂದು ಭಗವದ್ಗೀತೆ ತರಹ ಆಗಿದೆ. ಇದನ್ನು ನೋಡಿದರೆ ಕೆ.ಎಸ್.ಎಫ್.ಸಿ.ಯಿಂದ ಲೋನ್ಸ್ ಸ್ಯಾಂಕ್ಷನ್ ಆಗಿರುವುದು ೧೯೮೬–೮೭ರಲ್ಲಿ ೧೧೧.೭೯ ಕೋಟಿ ರೂಪಾಯಿಗಳು ಡಿಸ್‌ಬರ್ಸ್ ಆಗಿರುವುದು ೮೯.೬೭ ಕೋಟಿ ರೂಪಾಯಿಗಳು. ವಸೂಲಿ ಆಗಿಯೇ ಇಲ್ಲ. ಡಿಸ್‌ಬರ್ಸ್ಡ್ ಹಣ ಕೊಟ್ಟಿಲ್ಲವೆಂದು ಬೇರೆ ಕಾರಣ ಹೇಳಬೇಕಾಗಿಲ್ಲ. ೮೭–೮೮ರಲ್ಲಿ ಸ್ಯಾಂಕ್ಷನ್ ಆಗಿರುವುದು ೧೨೫.೫೯ ಕೋಟಿ ರೂಪಾಯಿಗಳು ಮತ್ತು ಡಿಸ್‌ಬರ್ಸ್ ಆಗಿರುವುದು ೧೧೪.೭೯ ಕೋಟಿ ರೂಪಾಯಿಗಳು. ಇದು ಕೆ.ಎಸ್.ಎಫ್.ಸಿ. ಯದ್ದು ಆಯಿತು. From KSIIDC, loans sanctioned during 1986–87 was Rs. 34.68 Crores and disbursed was Rs. 27.48 Crores. During 1987–88 sanctioned and disbursed are, Rs. 35.68 Crores and Rs. 32.92 Crores respectively. ಇದು ಸ್ವಲ್ಪ ಪರವಾಗಿಲ್ಲ. ೮೮–೮೯ರದ್ದೂ ಕೂಡ ಅಷ್ಟೇ ಆಗುತ್ತದೆ. ಅವರು ಆ್ಯಂಟಿಸಿಪೇಟೆಡ್ ಅಂತ ಹಾಕಿದ್ದಾರೆ. ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಮುಂದಿನ ವರ್ಷ ನೋಡಬೇಕಾಗುತ್ತದೆ. ಇದನ್ನು ನೋಡಿದರೆ ಮುಖ್ಯವಾದ ಅಂಶ ಕಂಡುಬರುವುದೇನೆಂದರೆ ಟರ್ಮ್ ಲೆಂಡಿಂಗ್, ಸ್ಯಾಂಕ್ಷನ್ ಮತ್ತು ಡಿಸ್‌ಬರ್ಸ್ ಪರ್‌ಫಾರ್ಮೆನ್ಸ್ ಕೂಡ ಬಹಳ ಕಡಿಮೆಯಾಗಿದೆ

ರಿಕವರೀಸ್ ಎಷ್ಟು ಆಗಿದೆ ಎಂದು ನಮಗೆ ಕೊಟ್ಟಿಲ್ಲ. ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಸಧ್ಯಕ್ಕೆ ಇಲ್ಲ. ಮುಂದೆ ಇನ್ಸ್ಟಿಟ್ಯೂಶನಲ್ ರಿಪೋರ್ಟ್ಸ್ ಬರುತ್ತದೆ. ಆಗ ಅದರ ಬಗ್ಗೆ ಮಾತನಾಡೋಣ. ಇದರ ಬಗ್ಗೆ ಪರ್‌ಫಾರ್ಮೆನ್ಸ್ ಮಾತ್ರ ಬಹಳ ಕಡಿಮೆಯಾಗಿದೆ. ಇನ್ನೊಂದು ವಿಷಯವನು ಇದರೊಳಗೆ ಪ್ರಸ್ತಾಪ ಮಾಡಿದ್ದಾರೆ, ಅದು ಎಲೆಕ್ಟ್ರಿಸಿಟಿ ಬಗ್ಗೆ. ಬಹಳ ಮುಖ್ಯವಾದ ವಿಷಯ. ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಇವರ ಪರ್‌ಫಾರ್ಮೆನ್ಸ್ ನೋಡಿದರೆ ಖಂಡಿತವಾಗಿಯೂ ಶೋಚನೀಯವಾಗಿದೆ. ಕೆ.ಇ.ಬಿ. ಬಗ್ಗೆ ಬರುವಷ್ಟು ದೂರುಗಳು ಬೇರೆ ಯಾವುದರ ಬಗ್ಗೆಯೂ ಇಲ್ಲ. ಸರಿಯಾಗಿ ಕೊಡುವುದಿಲ್ಲ, ಲೋಡ್‌ಶೆಡ್ಡಿಂಗ್ ಹಾಕುತ್ತಿದ್ದಾರೆ, ರೈತರಿಗೆ ತೊಂದರೆಯಾಗುತ್ತಿದೆ, ಪಂಪ್‌ಸೆಟ್ಟುಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಪ್ರತಿದಿವಸ ಕರೆಂಟ್ಸ್ ಹೋಗುತ್ತದೆ. ಹೀಗೆಲ್ಲ ನಮ್ಮ ರಾಜ್ಯದ ರೈತರು ಗೋಳಿಟ್ಟು ಹೇಳುತ್ತಿದ್ದಾರೆ. ಇದನ್ನೆಲ್ಲ ಸರಿಮಾಡುವುದಕ್ಕೆ ಕೆ.ಇ.ಬಿ.ಗೆ ಸಾಧ್ಯವಿಲ್ಲ. ಅದನ್ನು ಬಿಟ್ಟುಬಿಡಿ. ಮೂಲಭೂತವಾಗಿ ನೋಡಬೇಕೆಂದರೆ ಒಟ್ಟಾರೆ ಇವರ ಪರ್‌ಫಾರ್ಮೆನ್ಸ್ ಎಲೆಕ್ಟ್ರಿಸಿಟಿ ಜನರೇಶನ್ ಮಾಡುವುದರೊಳಗೆ ಎಷ್ಟು ಪಡೆದಿದ್ದಾರೆ, ಅದು ಏನಾಗಿದೆ ಎಂದು ಫಲಾನುಫಲಗಳನ್ನು ನೋಡಿದರೆ ಒಂದನ್ನು ತಮ್ಮ ಗಮ್ಮನಕ್ಕೆ ತರುತ್ತಿದ್ದೇವೆ. ಇದರಿಂದ ಇದ್ದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ಮತ್ತು ಎಲೆಕ್ಟ್ರಿಸಿಟಿ ಜನರೇಟೆಡ್. ಇದರೆ ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ೨೧೯೯.೮ ಮೆಗಾವಾಟ್ಸ್ (ಹೈಡಲ್). ೮೭–೮೮ರಲ್ಲಿ ಅಷ್ಟೇ

ಇದೆ. ಅಂದರೆ ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ಜಾಸ್ತಿ ಮಾಡಲಿಲ್ಲ. ಥರ್ಮಲ್‌ಗೂ ಜಾಸ್ತಿ ಮಾಡಲಿಲ್ಲ. ೪೨೦ ಮೆಗಾವಾಟ್ಸ್ ಇದೆ. ಅಂದರೆ ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ಚೇಂಜ್ ಆಗುವ ಪ್ರಶ್ನೆ ಇಲ್ಲ. ಈಗ ಏನೋ ಆ್ಯಂಟಿಸಿಪೇಟೆಡ್ ಆಗಿ ಚೇಂಜ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನೋಡಬೇಕು. ಇಷ್ಟು ವಿಷಯಗಳು ಇದರಲ್ಲಿ ಕಂಡುಬರುವಂಥಾದ್ದು, ಇದನ್ನು ಏಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ ಇಲೆಕ್ಟ್ರಿಸಿಟಿ ಜನರೇಟೆಡ್ ಮತ್ತು ಕೆಪ್ಯಾಸಿಟಿ ಇನ್‌ಸ್ಟಾಲ್ಡನ್ನು ಹೋಲಿಸಿ ನೋಡಿದರೆ ೭೫ ಪರ್ಸೆಂಟ್ ಇನ್‌ಸ್ಟಾಲ್ಡ್ ಕೆಪ್ಯಾಸಿಟಿ ಇದ್ದರೆ ಸರಿಯಾಗಿದೆ ಎಂದು ಹೇಳಬಹುದಿತ್ತು. ೫೦ ಪರ್ಸೆಂಟ್, ೬೦ ಪರ್ಸೆಂಟ್ ಕೂಡ ಆಗದೇ ಹೋದರೆ ಇವತ್ತಿನದಿವಸ ಪರ್‌ಫಾರ್ಮೆನ್ಸ್ ಹೇಗೆ ಸರಿಯಾಗುತ್ತದೆ ?

೫-೦೦ ಪಿ.ಎಂ.

ಅಷ್ಟು ಮಾತ್ರವಲ್ಲ, ತಮ್ಮ ಗಮನಕ್ಕೆ ತರಬೇಕೆಂದರೆ, ಕೆಲವು ಥರ್ಮಲ್ ಯೂನಿಟ್‌ಗಳು ನಮ್ಮ ರಾಜ್ಯದಲ್ಲಿ ಮುಚ್ಚಿಹೋಗಿವೆ. ಇವರು ರಾಯಚೂರು ಹೇಳುತ್ತಾರೆ. ವಾಡಿಯಲ್ಲಿ ಮೈಸೂರು ಸಿಮೆಂಟ್ಸ್ ಥರ್ಮಲ್ ಪವರ್ ಸ್ಟೇಷನ್ ಎಂದು ಇತ್ತು. ಇದನ್ನು ಬಿರ್ಲಾರವರು ಕಟ್ಟಿಸಿದ್ದು. ಇದು ಒಂದು ಗ್ರಿಡ್ಜ್ ಮೂಲಕ ಕೆ.ಇ.ಬಿ. ನವರು ಕೊಂಡುಕೊಳ್ಳುತ್ತಾರೆ, ಅವರಿಗೆ ಎಷ್ಟುಬೇಕೋ ಅಷ್ಟನ್ನು ಕೊಡುತ್ತಾರೆ. ಅಂದರೆ ಎಲೆಕ್ಟ್ರಿಸಿಟಿ ಜನರೇಟ್ ಆಗುತ್ತದೆ. ಈಗ ಬಿರ್ಲಾರವರು ಏನು ಹೇಳುತ್ತಾರೆ. ಎಂದರೆ ಇದು ನನಗೆ ಬೇಡ, ನಾನೇ ಒಂದು ಜನರೇಟರ್ ಸೆಟ್ ಹಾಕಿಕೊಂಡಿದ್ದೇನೆ ನನಗೆ ಪವರ್ ಸ್ಟೇಷನ್ ಬೇಡ ಎಂದು ಮುಚ್ಚಿದ್ದಾರೆ. ಇವತ್ತು ಅಲ್ಲಿಯ ಕಾರ್ಮಿಕರಿಗೆ ಸರಿಯಾಗಿ ಸಂಬಳ ಕೊಟ್ಟಿಲ್ಲ. ಅವರು ಕೇಳುತ್ತಿದ್ದಾರೆ, ಸ್ವಾಮಿ ಏಕೆ ಹೀಗಾಗುತ್ತಿದೆ ಎಂದು. ಈ ಸರ್ಕಾರ, ಈ ಥರ್ಮಲ್ ಪ್ಲಾಂಟ್ ಬಗ್ಗೆ, ಈ ಬಿರ್ಲಾರವರ ಬಗ್ಗೆ ಏನು ಗಮನ ಹರಿಸಿದ್ದಾರೆ ? ಅವರನ್ನು ಹದ್ದುಬಸ್ತಿಗೆ ತರುವುದಕ್ಕಾಗುವುದಿಲ್ಲವೇ ? ಅಥವಾ ಸರ್ಕಾರವೇ ಇದನ್ನು ಏಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ? ಇದನ್ನೆಲ್ಲಾ ನೋಡಿದರೆ, ನಿಮ್ಮ ಪರ್ಫಾರ್ಮೆನ್ಸ್ ಬಹಳ ಕೆಳಮಟ್ಟಕ್ಕೆ ಹೋಗುತ್ತಿದೆ ಎಂದು ಹೇಳಬೇಕಾಗುತ್ತದೆ. ಇದೇರೀತಿ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾಗುತ್ತದೆ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಕತೆ ನಮಗೆ ಗೊತ್ತಿದೆ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬಗ್ಗೆ ಏನು ಹೇಳುತ್ತಾರೆ ಮೂರು ಗ್ರೋತ್ ಸೆಂಟರ್ಸ್ ಮಾಡುತ್ತೇವೆ, ಇವುಗಳ ಆಧಾರದ ಮೇಲೆ ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ, ಅವರು ಕೊಟ್ಟಮೇಲೆ ನಮಗೆ ಹಣ ಬರುತ್ತದೆ, ಅದರಿಂದ ಇದನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರೆ. ಗ್ರೋತ್ ಸೆಂಟರ್ಸ್ ಇರಲಿ, ಇರುವುದನ್ನಾದರೂ ಉಳಿಸಿಕೊಳ್ಳಬೇಕಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ೩ ಸಾವಿರ ಸಣ್ಣ ಕೈಗಾರಿಕೆಗಳು ಮುಚ್ಚಿಹೋಗಿವೆ. ಈ ೬ ಸಾವಿರ ಕೈಗಾರಿಕೆಗಳು ಮುಚ್ಚಿಹೋಗಿರಬೇಕಾದರೆ, ಗ್ರೋತ್ ಸೆಂಟರ್ಸ್ ಬರುವುದಕ್ಕೆ ಹೇಗೆ ಸಾಧ್ಯ ? ಬೆಂಗಳೂರು, ಗುಲ್ಬರ್ಗಾ, ಹುಬ್ಬಳ್ಳಿ, ಮೈಸೂರು ಮತ್ತಿತರ ಕಡೆಗಳಲ್ಲಿ ಇವತ್ತು ಕೈಗಾರಿಕೆಗಳು ಮುಚ್ಚಿವೆ ಜೊತೆಗೆ ದಾವಣಗೆರೆಯಲ್ಲಿಯೂ ಮುಚ್ಚಿವೆ. ಈ ಸಣ್ಣ ಕೈಗಾರಿಕೆಗಳ ಬಗ್ಗೆ ಸರ್ಕಾರ ಏನು ಮಾಡಿದೆ ? ಇನ್ನು ಟೆಕ್ಸ್‌ಟೈಲ್ ಕೈಗಾರಿಕೆಗಳು ಪೂರ್ಣವಾಗಿ ನಮ್ಮ ರಾಜ್ಯದಲ್ಲಿ ಮುಚ್ಚಿವೆ. ಇವತು ದಾವಣಗೆರೆ ಬಿನ್ನಿಮಿಲ್ ಮುಚ್ಚಿದೆ, ಕೆ.ಆರ್.ಮಿಲ್ ಮುಚ್ಚಿಹೋಗಿದೆ. ಈ ಟೆಕ್ಸ್‌ಟೈಲ್ ಕೈಗಾರಿಕೆ ಬಗ್ಗೆ ಮಾತನಾಡಬೇಕಾದರೆ, ನಮ್ಮ ಮಿತ್ರರು ಹೇಳುತ್ತಾರೆ. ಈ ಟೆಕ್ಸ್‌ಟೈಲ್ ನೀತಿ, ಕೇಂದ್ರ ಸರ್ಕಾರದ್ದು ಎಂದು ಹೇಳುತ್ತಾರೆ. ಹೌದು, ಇದು ಕೇಂದ್ರ ಸರ್ಕಾರದ ನೀತಿ. ಇದು ಭಾಗಶ: ನಿಜಾಂಶ ಆದರೆ ಪೂರ್ತಿ ನಿಜಾಂಶವಲ್ಲ. ಈ ಟೈಕ್ಸ್‌ಟೈಲ್ ಕೈಗಾರಿಕೆಗಳ ಬಗ್ಗೆ ಕೇಂದ್ರ ಸರ್ಕಾರದ್ದೂ ಕೂಡ ತಪ್ಪಿದೆ. ಎಂಬುದನ್ನು ಒಪ್ಪೋಣ, ನಾನೂ ಕೂಡ ಇದನ್ನು ಖಂಡಿಸುತ್ತೇನೆ. ಈ ನೀತಿ ಸರಿ ಇಲ್ಲವೆಂದು ಹೇಳೋಣ. ಆದರೆ ನೀವು ಇಲ್ಲಿ ಲಕ್ಷಾಂತರ ಜನ ಕಾರ್ಮಿಕರನ್ನು ಬೀದಿ ಪಾಲು ಮಾಡಿದ್ದು ಸರಿಯೇ ? ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದನ್ನು ಯಾರೂ ಕೇಳುತ್ತಾ ಇಲ್ಲ, ಬರೀ ಅರಣ್ಯರೋಧನವಾಗುತ್ತಿದೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಇಲ್ಲಿ ಇಲ್ಲ. ಮಾನ್ಯ ಗೋವಿಂದೇಗೌಡರು ಕಾರ್ಮಿಕ ಮಂತ್ರಿಗಳು ಅವರು ಇದ್ದಾರೆ. ಕೈಗಾರಿಕ ಮಂತ್ರಿಗಳಾದ ವೀರಣ್ಣನವರೂ ಕೂಡ ನಮ್ಮ ಸ್ನೇಹಿತರೇ. ಅವರೂ ಕೂಡ ಉತ್ಸಾಹಶಾಲಿಗಳು ಹಾಗೂ ಯುವಕರು. ಅವರು ಈ ಹಿಂದೆ ಸೇವಿಂಗ್ಸ್ ಬಗ್ಗೆ ಚೆನ್ನಾಗಿ ಕೆಲಸ ಮಾಡಿದ್ದಾರೆ, ಅದರಲ್ಲಿ ಪ್ರಶಸ್ತಿಯನ್ನೂ ಕೂಡಪಡೆದಿದ್ದಾರೆ. ಇವತ್ತು ಈ ಕೈಗಾರಿಕೆ ಬೆಳವಣಿಗೆ ಮತ್ತು ಕಾರ್ಮಿಕರು ಈ ಎರಡಕ್ಕೂ ಸಂಬಂಧ ಇದೆ. ಕೈಗಾರಿಕೆ ನಿಂತುಹೋದರೆ, ಕಾರ್ಮಿಕರು ಬೆನ್ನು ಹತ್ತುತ್ತಾರೆ. ಈ ರಾಜ್ಯದಲ್ಲಿ ಪೊಲಿಟಿಕಲ್ ವಿಲ ಇಲ್ಲ. ಮುಚ್ಚಿರುವ ಕೈಗಾರಿಕೆಗಳನ್ನು ತೆರೆಯುವ ಬಗ್ಗೆ, ಕೆಲವು ರಾಜ್ಯಗಳಲ್ಲಿ ರಾಜಕೀಯವಾಗಿ ತೀರ್ಮಾನ ಮಾಡಲೇಬೇಕೆಂದು ಮಾಡಿದ್ದಾರೆ. ಪಶ್ಚಿಮ ಬಂಗಾಳದ ಸರ್ಕಾರ ಮಾಡಿದೆ, ಕೇರಳ ಸರ್ಕಾರ ಮಾಡಿದೆ.

ಈ ರೀತಿಯ ಪೊಲಿಟಿಕಲ್ ವಿಲ್ ನಮ್ಮ ರಾಜ್ಯದಲ್ಲಿ ಇಲ್ಲ. ಏತಕ್ಕೆ ಇಲ್ಲ ಎಂಬುದನ್ನು ನಾನು ಮೊದಲೇ ಹೇಳಿದ್ದೇನೆ. ಹಿಂದೆ ಜೆ.ಹೆಚ್. ಪಟೇಲರ ಬಗ್ಗೆ ಟೀಕೆ ಮಾಡಿ, ಅವರನ್ನು ಡಿಸ್‌ಮಿಸ್ ಮಾಡಿ ಎಂದು ಹೇಳಿದೆ, ಆದರೆ ಡಿಸ್‌ಮಿಸ್ ಮಾಡಲಿಲ್ಲ. ಈಗ ಅವರ ಖಾತೆ ಬದಲಾವಣೆಯಾಗಿದೆ, ಬಹಳ ಸಂತೋಷ ಇವರು ಹೋದರು, ಈಗ ಮಾನ್ಯ ವೀರಣ್ಣನವರು ಬಂದರು. ಹಿಂದೆ ಕಾಂತಾ ಅವರಿಗೂ ಮತ್ತು ಜೆ.ಹೆಚ್. ಪಟೇಲರಿಗೂ ಆಗುತ್ತಾ ಇರಲಿಲ್ಲ. ಕಾಂತಾರವರು ಉತ್ತರ ಎಂದರೆ, ಇವರು ದಕ್ಷಿಣ ಎಂದು ಹೇಳುತ್ತಿದ್ದರು...

ಶ್ರೀ ಯು. ಭೂಪತಿ.—ಜೆ.ಹೆಚ್. ಪಟೇಲರನ್ನು ಕಿತ್ತು ಹಾಕಿ ಎಂದು ಹೇಳಿದಿರಿ. ಆದರೆ ಇವತ್ತು ಅವರ ಖಾತೆ ಬದಲಾವಣೆ ಆದರೂ ಕೂಡ, ಮಂತ್ರಿ ಮಂಡಲದಲ್ಲಿ ನಂಬರ್ ಒನ್ ಅವರೇ.

ಶ್ರೀ ಎಂ.ಎಸ್. ಕೃಷ್ಣನ್.—ಇವರು ಕೈಗಾರಿಕೆಗಳಲ್ಲಿ ಸ್ವಲ್ಪ ಮಟ್ಟಿಗೆ ಕೈ ಸುಟ್ಟು ಕೊಂಡಿರುವುದರಿಂದ, ಇವರು ಕೈಗಾರಿಕೆಯಲ್ಲಿ ಮೆಡಲ್ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ ನೋಡಬೇಕು. ಇದರ ಬಗ್ಗೆ ಉತ್ಸಾಹಶಾಲಿ ಯುವಕರು ಯೋಚನೆ ಮಾಡಿದರೆ ಒಳ್ಳೆಯದು. ಆಗ, ತಿಕ್ಕಾಟ ಬಂತು, ಕಾಂತಾರವರು ತೆಗೆಯಬೇಡಿ ಎಂದು ಹೇಳಿ, ಸಲಹೆ ಕೊಟ್ಟರು, ಜೆ.ಹೆಚ್. ಪಟೇಲರು ಆ ಸಲಹೆಯನ್ನು ಒಪ್ಪಲಿಲ್ಲ. ಅಂದರೆ ಇವರು ಉತ್ತರ, ಅವರು ದಕ್ಷಿಣ ಎನ್ನುವಂತಾಯಿತು. ಈ ರೀತಿ ಆಗಿ ಇದುವರೆಗೂ ಈ ಪ್ರಶ್ನೆ ಇತ್ಯರ್ಥ ಆಗಲಿಲ್ಲ. ಈಗಲಾದರೂ ಸಹ ಮಾನ್ಯ ಗೋವಿಂದೇಗೌಡರು ಮತ್ತು ನಮ್ಮ ವೀರಣ್ಣನವರು ಸರಿ ಮಾಡುತ್ತಾರೆಯೋ ಎಂದು ನೋಡಬೇಕು. ಗೋವಿಂದೇಗೌಡರು ನಮ್ಮ ಸ್ನೇಹಿತರು, ಪ್ಲಾಂಟರ್ ಮನೆತನದಿಂದ ಬಂದವರು, ಅವರಿಗೆ ಪ್ಲಾಂಟೇಷನ್ ಎಷ್ಟಿದೆಯೋ ಗೊತ್ತಿಲ್ಲ, ಆದರೆ ಕಾರ್ಮಿಕರ ಪರ ಅನುಕಂಪ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಏನು ಬಹಳ ಹೊಗಳುತ್ತಿದ್ದೀರಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಹೊಗಳುತ್ತಿಲ್ಲ, ವಾಸ್ತವಾಂಶ ಹೇಳುತ್ತಿದ್ದೇನೆ. ಒಳ್ಳೆಯ ಕೆಲಸ ಮಾಡಿದರೆ ಹೊಗಳುತ್ತೇವೆ. ಈಗ ಕಾಂತಾರವರನ್ನು ಹೊಗಳುತ್ತಿದ್ದೇನೆ. ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಸಲ ಅವರನ್ನು ಬಿಟ್ಟುಬಿಟ್ಟರು. ಇದರ ಬಗ್ಗೆ ಅಸಂತೋಷ ಇದೆ. ನಿಮ್ಮ ಒಳಜಗಳದಿಂದ ಅವರನ್ನು ಬಿಟ್ಟುಬಿಟ್ಟಿದ್ದೀರಿ. ಅವರೂ ಇದ್ದು ಇವರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಇದರ ಬಗ್ಗೆ ಒಂದು ಪೊಲಿಟಿಕಲ್ ವಿಲ್ ತೋರಿಸಬೇಕು, ಇಲ್ಲದೇ ಹೋದರೆ ಕಷ್ಟವಾಗುತ್ತದೆ. ತೊಂದರೆ ಬರುತ್ತದೆ ಒಂದು ವಿಷಯವನ್ನು ಮಾನ್ಯ ಬಸವಲಿಂಗಪ್ಪನವರು ಪ್ರಸ್ತಾಪ ಮಾಡಿದರು. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಮತ್ತು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಎಂ.ಇ.ಐ. ಫ್ಯಾಕ್ಟರಿ ಎಂದು ಒಂದು ಫ್ಯಾಕ್ಟರಿ ಇದೆ. ಅದಕ್ಕೆ ಪ್ರತಿವರ್ಷವೂ ಸಹ ಹಣ ಕೊಟ್ಟುಕೊಂಡು ಬಂದು ಅದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದೀರಿ. ನಾನೂ ಸಹ ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಪಟ್ಟೆ. ನಾನು ೨೦ ಪೇಜ್‌ಗಳ ಮೆಮೊರಾಂಡಮ್ ಕೊಟ್ಟೆ. ಅದನ್ನು ತೆಗೆದುಬಿಡಿ ಎಂದು ಹೇಳಲಿಲ್ಲ. ಏನು ಹುಳುಕು ಇದೆ, ಅದನ್ನು ಯಾವರೀತಿ ಸರಿ ಮಾಡಬೇಕೆಂದು ಥಿಯರಿಟಿಕಲ್ ಆಗಿ ಬರೆದು ಕೊಟ್ಟಿದ್ದೇನೆ. ಅದನ್ನು ಪಟೇಲರಿಗೆ ಕೊಟ್ಟು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಎರಡುಮೂರು ಸಲ ಕೇಳಿದ್ದೇನೆ. ಪ್ರತಿಸಲ ಮೀಟಿಂಗ್ ಕರೆಯುತ್ತಿದ್ದರು ಆದರೆ ಮೀಟಿಂಗ್ ಮಾತ್ರ ನಡೆಯಲಿಲ್ಲ. ಕೆಲಸಗಾರರಿಗೆ ಕೆಲಸ ಇಲ್ಲ. ಅದು ಯಾವಾಗ ಮುಚ್ಚಿಕೊಂಡು ಹೋಗುತ್ತದೋ ಗೊತ್ತಿಲ್ಲ. ಹಿಂದೆ ಒಬ್ಬ ಅಧಿಕಾರಿ ಇದ್ದರು, ಅವರು ಏನೂ ಕೆಲಸ ಮಾಡುತ್ತಿರಲಿಲ್ಲ ಅವರನ್ನು ತೆಗೆದು ಹಾಕಿದರು. ಬಹಳ ಒಳ್ಳೆಯದು ಮಾಡಿದರು. ಈಗ ಒಬ್ಬ ಅಧಿಕಾರಿ ಬಂದಿದ್ದಾರೆ ಅವರೂ ಸಹ ಕೆಲಸ ಮಾಡುತ್ತಿಲ್ಲ. ಅಲ್ಲಿ ಸಂಬಳ ೧೫ ಲಕ್ಷ, ಪ್ರೊಡಕ್ಷನ್ ೧೩ ಲಕ್ಷ. ಈ ವರ್ಷದ ಬಜೆಟ್‌ನಲ್ಲಿ ಅದಕ್ಕೆ ಒಂದು ನಯಾಪೈಸವನ್ನೂ ನೀವು ಕೊಟ್ಟಿಲ್ಲ. ಕೈಗಾರಿಕೆ ನಡೆಯಬೇಕು, ಇದು ಆಗುತ್ತವೆಯೋ ? ನಾಳೆ ದಿವಸ ಅಲ್ಲಿಯ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತೀರಿ ಎಂದು ನಾನು ಗುರುತರವಾದ ಅಪಾದನೆಯನ್ನು ನಿಮ್ಮ ಮೇಲೆ ಹೊರಿಸುತ್ತಿದ್ದೇನೆ. ನೀವು ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸನ್ನು ಹಾಳು ಮಾಡುತ್ತಿದ್ದೀರಿ. ಸೆಬೊಟೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಹೀಗೆ ಮಾಡಿ ಕೈಗಾರಿಕೆಗಳು ನಡೆಯದ ಹಾಗೆ ಮಾಡುತ್ತಿದ್ದೀರಿ. ಈಗಲಾದರೂ ಎಚ್ಚೆತ್ತುಕೊಳ್ಳಿ ತೀರ್ಮಾನ ಮಾಡಿ. ಬೇರೆಯದನ್ನೆಲ್ಲಾ ಮಾಡುತ್ತಿದ್ದೀರಿ, ಇದನ್ನು ಮಾಡುತ್ತಿಲ್ಲ. ಇನ್ನು ಹತ್ತು ವರ್ಷ ಸಂಬಳ ಜಾಸ್ತಿ ಮಾಡಕೂಡದು ಎಂದು ಹೇಳುತ್ತಿದ್ದೀರಿ. ಕರ್ನಾಟಕ ರಿಲೀಫ್ ಫಂಡನ್ನು ಹತ್ತು ವರ್ಷ ಮುಂದುವರಿಸಬೇಕೆಂದು ತಿದ್ದುಪಡಿ ತೆಗೆದುಕೊಂಡು ಬಂದಿದ್ದೀರಿ ಇದರ ಬಗ್ಗೆ ಏತಕ್ಕೆ ತಿದ್ದುಪಡಿ ತೆಗೆದುಕೊಂಡು ಬರಲಿಲ್ಲ. ಮುಖ್ಯವಾದ ತಿದ್ದುಪಡಿಯನ್ನು ನೀವು ತೆಗೆದುಕೊಂಡು ಬರುವುದಕ್ಕೆ ತಯಾರಾಗಿಲ್ಲ. ಕೆಲಸಗಾರರನ್ನು ವಿನಾಕಾರಣ ವಜಾ ಮಾಡುತ್ತಿದ್ದಾರೆ. ಅವರು ಕೋರ್ಟಿಗೆ ಹೋಗು

ತ್ತಿದ್ದಾರೆ ಇದರ ಬಗ್ಗೆ ತಾವು ಏತಕ್ಕೆ ತಿದ್ದುಪಡಿ ತರುತ್ತಿಲ್ಲ. ಈಗಲಾದರೂ ಇದರ ಬಗ್ಗೆ ಯೋಚನೆ ಮಾಡುತ್ತೀರೋ ಏನೋ ಗೊತ್ತಿಲ್ಲ.

ಇದೇ ರೀತಿ ಸಿಲ್ಕ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಬಗ್ಗೆ ಹೇಳುತ್ತೇನೆ. ಅದೊಂದು ಭ್ರಷ್ಟಾಚಾರದ ಆಗರ. ಅಲ್ಲಿ ಒಬ್ಬರು ಅಧಿಕಾರಿಗಳು ಇದ್ದಾರೆ. ಅವರು ಸೂಪರ್ ಅಧಿಕಾರಿ. ಅವರು ಸಿದ್ದರಾಮಯ್ಯನವರಿಗೆ ಬಹಳ ಆಪ್ತರು. ಅವರ ಹೆಸರು ಕೆ.ಆರ್.ಎಸ್. ಗೌಡ ಎಂದು. ಹೆಸರು ಹೇಳುತ್ತೇನೆ. ವೆರಿಫೈ ಮಾಡಿ, ನನ್ನ ಹತ್ತಿರ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಇದೆ. ಅವರು ಪ್ಯಾರಲಲ್ ಬಿಸಿನೆಸ್ ನಡೆಸುತ್ತಿದ್ದಾರೆ. ಇಲ್ಲಿ ತಯಾರಾಗುವ ಒಳ್ಳೊಳ್ಳೆಯ ಸೀರೆಗಳನ್ನು ತೆಗೆದುಕೊಂಡು ಹೋಗಿ ಯಾರಿಗೋ ಮಾರಿಕೊಳ್ಳುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಇದರಲ್ಲಿ ಹೋಗುತ್ತಿದೆ. ಅವರನ್ನು ಕದಲಿಸುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ. ಅವರು ಅಸಿಸ್ಟೆಂಟ್ ಮ್ಯಾನೇಜರ್ ಆಗಿದ್ದಾರೆ. ಯಾರೂ ಅವರನ್ನು ಕದಲಿಸುವುದಕ್ಕೆ ಆಗುತ್ತಿಲ್ಲ. ನಮ್ಮ ಯೂನಿಯನ್‌ನವರು ಹೀಗೇಕೆ ಆಗುತ್ತಿದೆ ಎಂದು ಸರಕಾರಕ್ಕೆ ಮನವಿ ಕೊಟ್ಟು ಇದನ್ನು ಸರಿ ಮಾಡಿ ಎಂದು ಹೇಳಿದ್ದಾರೆ. ಮನವಿ ಕೊಟ್ಟಿದ್ದಕ್ಕಾಗಿ ಅವರು ನಮ್ಮ ಯೂನಿಯನ್ ಅಧಿಕಾರ ವರ್ಗದವರನ್ನೇ ಡಿಸ್‌ಮಿಸ್ ಮಾಡಿರುತ್ತಾರೆ. ಇದಕ್ಕಿಂತ ಅನ್ಯಾಯದ ವರ್ತನೆ ಉಂಟೇ ಎಂದು ಕೇಳುತ್ತೇನೆ. ಮಾನ್ಯ ಕೃಷ್ಣ ಅವರಿಗೆ ಕೇಳಿದ್ದೂ ಆಯಿತು ಅವರು ಚೂಸ್ತಾನು ಚೇಸ್ತಾನು ಎಂದು ಹೇಳುತ್ತಿದ್ದಾರೆ. ಅದು ಏನಾಗುತ್ತದೋ ಗೊತ್ತಿಲ್ಲ. ಈ ರೀತಿ ಆದರೆ ಖಂಡಿತಾ ಭರವಸೆ ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಸ್ವಲ್ಪ ಮಟ್ಟಿಗೆ ಪೊಲಿಟಿಕಲ್ ವಿಲ್ ಇರಬೇಕು. ಸರಿಯಾಗಿ ನಡೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಹೌಸಿಂಗ್ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೊಂದು ಸರಿಯಾದ ಹೌಸಿಂಗ್ ಪಾಲಿಸಿ ಇರಬೇಕು. ನೀವು ಈಗ ೧೭,೫೦೦ ಮನೆಗಳನ್ನು ಏನೋ ಕಟ್ಟುತ್ತೀವೆಂದು ಹೇಳಿದ್ದೀರಿ, ಆದರೆ ಮೂಲಭೂತವಾಗಿ ಹೌಸಿಂಗ್ ಎನ್ನುವುದು ಒಂದು ಫಂಡಮೆಂಟಲ್ ರೈಟ್ಸ್ ತರಹ ಜಾರಿಗೆ ಬರಬೇಕು. ಈ ಒಂದು ಕೆಲಸವನ್ನು ಸರ್ಕಾರ ಮಾಡಬೇಕು. ಆಗ ಮಾತ್ರ ಇದು ಸಾಧ್ಯವಾಗುತ್ತದೆ. ಈ ಬಗ್ಗೆ ಒಂದು ದೊಡ್ಡ ಚಳುವಳಿ ನಮ್ಮ ದೇಶದಲ್ಲಿ ನಡೆಯುತ್ತಿದೆ. ಕೇಂದ್ರ ಸರ್ಕಾರಕ್ಕೆ ಸುಮಾರು ೨೦ಲಕ್ಷ ಜನ ಸಹಿ ಮಾಡಿ ಒಂದು ದೊಡ್ಡ ಮನವಿಯನ್ನು ಕೊಟ್ಟಿದ್ದಾರೆ. ಅದರ ಕಾಪಿ ಒಂದು ನನ್ನ ಬಳಿ ಸಹ ಇದೆ. ಅದನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತಿದ್ದೇನೆ. ಅದನ್ನು ತಾವು ನೋಡಿದರೆ ಒಳ್ಳೆಯದು. ಇದಕ್ಕೆ ಜವಾಬ್ದಾರಿ ಇರಬೇಕು ಪೀಪಲ್ಸ್ ಕ್ಯಾಂಪೇನ್ ಕಮಿಟಿ ಫಾರ್ ಹೌಸಿಂಗ್ ಮಾಡಿ ಎಂದು ಕೇಳಿದೆ. ಬಡವರಿಗೆ ತಾವು ಈ ಹೌಸಿಂಗ್ ಪಾಲಿಸಿ ಮಾಡಿ ಕೊಡಿ. ಮನೆ ಇಲ್ಲದಂತಹವರಿಗೆ ಒಂದು ಸೂರು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ನಮ್ಮ ಸರ್ಕಾರದವರೂ ಸಹ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಅದರ ಜೊತೆಗೆ ಸರ್ಕಾರದ ಜಮೀನಿನಲ್ಲಿ ಯಾರು ಮನೆ ಕಟ್ಟಿಕೊಂಡಿರುತ್ತಾರೋ ಅವರಿಗೇ ಆ ಜಾಗವನ್ನು ಕೊಡುವಂತಹ ಕೆಲಸ ಸರ್ಕಾರ ಮಾಡಬೇಕು. ಅದಕ್ಕೆ ಏನಾದರೂ ಅಡ್ಡಿ ಆತಂಕಗಳು ಬಂದರೆ ಅದನ್ನು ತಡೆಗಟ್ಟುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇದು ಬಹಳ ಮುಖ್ಯವಾದುದು. ಇನ್ನು ಕಡೆಯದಾಗಿ ನಾನು ಎರಡು ಮೂರು ವಿಷಯಗಳನ್ನು ಮಾತ್ರ ಮಾತನಾಡುತ್ತೇನೆ. ಮಹಿಳೆಯರಿಗೆ ಆದ್ಯತೆ ಕೊಡುವ ಬಗ್ಗೆ. ಅವರಿಗೆ ಕೆಲಸ ಕೊಡಬೇಕು. ಅವರಿಗೆ ಇನ್ನೂ ಹೆಚ್ಚು ಹೆಚ್ಚು ಅನುಕೂಲಗಳನ್ನು ಮಾಡಿಕೊಡಬೇಕು. ಇವತ್ತು ಗಂಡಸರು ಮಹಿಳೆಯರ ಮೇಲೆ ತಮ್ಮ ಪರಮಾಧಿಕಾರ ಹೊಂದಿದ್ದಾರೆ. ಇದು ಹೋಗಬೇಕು. ಈಗ ತಾವೇನೋ ಒಂದು ಸಣ್ಣ ಹೆಜ್ಜೆ ಇಟ್ಟಿದ್ದೀರಿ. ಇದನ್ನು ಹೀಗೆ ಮುಂದುವರಿಸಬೇಕು. ಮಾರ್ಚಿ ೮ನೇ ತಾರೀಖು ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ಬಗ್ಗೆ ಅಲ್ಲಿ ಚರ್ಚೆ ಕೂಡ ನಡೆದಿದೆ. ಅವರಿಗೆ ಜಾಬ್ಸ್‌ನಲ್ಲಿ ರಿಜರ್ವೇಶನ್ ೫೦ ಪರ್ಸೆಂಟ್ ಕೊಡಬೇಕೆಂದು ಕೇಳಿದ್ದಾರು. ಅದೇ ರೀತಿ ವರದಕ್ಷಿಣೆ ಪಿಡುಗು ನಿವಾರಣೆ ಮಾಡುವ ಸಲುವಾಗಿ, ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡಲು ಮತ್ತು ಸೀಮೆ ಎಣ್ಣೆ ಹಾಕಿ ಸುಟ್ಟು ಹಾಕುವುದರ ವಿರುದ್ಧವಾಗಿ, ಒಂದು ದೊಡ್ಡ ಚಳುವಳಿಯನ್ನೇ ರೂಪಿಸಬೇಕು ಎಂದು ಅವರು ಆ ದಿವಸ ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸಿಂಧ್ಯರವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳುತ್ತೇನೆ. ಅವರು ಈಗ ಇಲ್ಲ: ನೀವು ಏನೇ ಕಾರ್ಯಕ್ರಮ ತೆಗೆದುಕೊಂಡರೂ ಸಹ ಅದು ಕಾರ್ಯರೂಪಕ್ಕೆ ಬರುವಂತಿರಬೇಕು. ಹೆಂಗಸರ ಬಗ್ಗೆ ದಬ್ಬಾಳಿಕೆ ನಡೆಸುವವರ ವಿರುದ್ಧ ತೀವ್ರತರವಾದ ಶಿಕ್ಷೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಅದೇ ರೀತಿ ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದಾರೆ. ಅದೂ ಸಹ ಸ್ವಾಗತಾರ್ಹವಾದುದು.

ಇನ್ನು ಕೃಷಿ ಕಾರ್ಮಿಕರ ಬಗ್ಗೆ ಹೇಳುವುದಾದರೆ ತಾವು ಇನ್‌ಶೂರೆನ್ಸ್ ಮಾಡುತ್ತೇವೆಂದು ಹೇಳಿದ್ದೀರಿ. ಅದು ಸ್ವಲ್ಪಮಟ್ಟಿಗೆ ಪರಿಹಾರವಾಗುತ್ತದೆ. ಮತ್ತು ಪೆನ್‌ಷನ್ ಸ್ಕೀಮ್ ಸಹ ತರುತ್ತೇವೆಂದು ಹೇಳಿದ್ದೀರಿ. ಅದೂ ಕೂಡ ಸ್ವಾಗತಾರ್ಹವಾದುದು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಗೋವಿಂದೇಗೌಡರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೇ. ಕೃಷಿ ಕಾರ್ಮಿಕರ ಬಗ್ಗೆ ಒಂದು ಕಾನೂನು ತೆಗೆದುಕೊಂಡು ಬನ್ನಿ. ಅವರ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟ ಹಾಗೆ ಅವರ ಸಮಸ್ಯೆಗಳಿಗೆ ಸಂಬಂಧಪಟ್ಟ ಹಾಗೆ, ತನ್ನಿ. ಕೇರಳದಲ್ಲಿ ಈಗಾಗಲೇ ಇಂಥ ಕಾನೂನು ತಂದಿದ್ದಾರೆ. ಬಂಗಾಳದಲ್ಲಿ ತಂದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಇನ್ನು ಇಲ್ಲ. ಮಾನ್ಯ ಅಜೀಜ್‌ಸೇಠ್‌ರವರು ಒಂದು ಸಾರಿ ಹೇಳಿದ್ದರು. ಆದರೆ ಇದುವರೆಗೂ ಅದು ಆಗಿಲ್ಲ. ಈ ವಿಷಯದಲ್ಲಿ ನಾವೇ ಒಂದು ಪ್ರೈವೇಟ್ ಮೆಂಬರ್ಸ್ ಬಿಲ್ ತಂದು ಮಾತನಾಡಿದ್ದೇವೆ. ಕೃಷಿ ಕಾರ್ಮಿಕರ ಬಗ್ಗೆ ಒಂದು ಕಾನೂನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ತೆರಿಗೆಗಳ ಬಗ್ಗೆ ಒಂದು ಅಭಿಪ್ರಾಯವಿದೆ ಎಂದರೆ ನಾವು ರ್‍ಯಾಷನಲೈಜೇಶನ್ ಮಾಡುತ್ತೇವೆಂದು ಹೇಳಿದ್ದೀರಿ. ಜಾಸ್ತಿ ತೆರಿಗೆ ಹಾಕಿಲ್ಲವೆಂದು ಹೇಳಿದ್ದೀರಿ. ಜಾಸ್ತಿ ತೆರಿಗೆಗಳು ಹಾಕಿಲ್ಲವೆಂದು ಒಪ್ಪಿಕೊಂಡರೂ ರ್‍ಯಾಷನಲೈಸ್ ಮಾಡುವ ರೂಪದಲ್ಲಿ ತೆರಿಗೆಗಳು ಜಾಸ್ತಿ ಆಗಿವೆ ಎನ್ನುವುದನ್ನು ಮರೆಯಬಾರದು. ಇದರ ಬಗ್ಗೆ ಎರಡು ನಿದರ್ಶನಗಳನ್ನು ಹೇಳುತ್ತೇನೆ. ಮೋಟರ್ ವೆಹಿಕಲ್ ಟ್ಯಾಕ್ಸ್ ನೋಡಿ. ಮೋಟರ್ ವೆಹಿಕಲ್ ಟ್ಯಾಕ್ಸ್ ಬಗ್ಗೆ ಬಿಲ್ ತಂದಾಗ ದೀರ್ಘವಾಗಿ ಮಾತನಾಡುವುದಕ್ಕೆ ಅವಕಾಶ ಇದೆ. ಆಗ ಮಾತನಾಡುತ್ತೇನೆ. ಬಜೆಟ್ ಪುಸ್ತಕದ ಪೇಜ್ ೫೫ರಲ್ಲಿ ಏನು ಇದೆ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಇದರಲ್ಲಿ ಏನಾಗಿದೆ ಎಂದರೆ, ಆಮ್ನಿ ಬಸ್ಸ್‌ಗಳು, ಅಂದರೆ, ಬಿ.ಇ.ಎಲ್. ಹೆಚ್. ಎಂ.ಟಿ ಹೆಚ್.ಎ.ಎಲ್., ಕಾರ್ಖಾನೆಗಳವರು ಬಸ್‌ಗಳನ್ನು ಇಟ್ಟಿದ್ದಾರೆ. ಇವರುಗಳು ಈ ಬಸ್‌ಗಳಲ್ಲಿ ಕಾರ್ಮಿಕರುಗಳನ್ನು ಕರೆದುಕೊಂಡು ಹೋಗುತ್ತಾರೆ. ಇನ್ನು ಕೆಲವು ಆಮ್ನಿ ಬಸ್‌ಗಳಲ್ಲಿ ಮಕ್ಕಳನ್ನು ಸ್ಕೂಲುಗಳಿಗೆ ಕರೆದುಕೊಂಡು ಹೋಗುತ್ತಾರೆ. ಈ ಬಸ್‌ಗಳಿಗೆ ಸಿಕ್ಕಾಪಟ್ಟೆ ಟ್ಯಾಕ್ಸ್ ಹಾಕಿದ್ದೀರಿ, In respect of Omni buses-permitted to carry not more than ten persons (excluding the driver) for every person which the vehicle is permitted to carry, the existing rate of tax per seat per quarter is Rs. 80. Now, you are proposing to impose a tax of Rs. 550 per square meter per quarter having a floor area of not exceeding 8 square meters and for every square meter. Further, having a floor area of more than 8 Sq meters and not exceeding 12 sq meters, for every square meter Rs.600 and having a floor area of more than 12 sq.meters for every square meter Rs, 700. ಈ ಟ್ಯಾಕ್ಸ್ ಹಾಕಿರುವುದು ಬಹಳ ಭಾರಿ ಆಯಿತೆಂದು ನನಗನಿಸುತ್ತದೆ. ಇದರಿಂದ ಏನಾಗುತ್ತದೆ, ಎಂದರೆ ಯಾರೋ ಕೆಲವು ಪ್ರೈವೇಟ್ ಬಸ್ ಮಾಲೀಕರಿಗೆ ಅನಾನುಕೂಲವಾಗುತ್ತದೆಂದು ಈ ಪ್ರಶ್ನೆ ಅಲ್ಲ. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿರುವ ಕಾರ್ಖಾನೆಗಳು ನೌಕರರುಗಳನ್ನು ಕರೆದುಕೊಂಡು ಹೋಗುವ ಬಸ್‌ಗಳಿಗೆ ನೀವು ಹೆಚ್ಚು ಟ್ಯಾಕ್ಸ್ ಹಾಕಿದರೆ ಆ ಟ್ಯಾಕ್ಸ್‌ನ ಹೊರೆ ಕಾರ್ಮಿಕರ ಮೇಲೆ ಬೀಳುತ್ತದೆ. ಈ ರೀತಿ ಕಾರ್ಮಿಕರ ಮೇಲೆ ಹೊರೆ ಹೊರಿಸಿದರೆ ಖಂಡಿತಾ ಅವರಲ್ಲಿ ಅಶಾಂತಿ ಉಂಟಾಗುತ್ತದೆ. ಮಕ್ಕಳನ್ನು ಕರೆದುಕೊಂಡು ಹೋಗುವ ವಿದ್ಯಾ ಸಂಸ್ಥೆಗಳ ಬಸ್‌ಗಳ ಮೇಲೆ ಟ್ಯಾಕ್ಸ್ ಹಾಕಿದರೆ ನಿಜವಾಗಿ ಮಕ್ಕಳಿಗೆ ತೊಂದರೆ ಮಾಡಿದ ಹಾಗಾಗುತ್ತದೆ. ಇನ್ನು ಪ್ರೊಫೆಷನಲ್ ಟ್ಯಾಕ್ಸನ್ನು ಹೆಚ್ಚಿಗೆ ಮಾಡಿ ದೊಡ್ಡ ದೊಡ್ಡವರಿಗೆ ಬಲೆ ಹಾಕಿದ್ದೀರಿ. ಈಗ ಹಾಕಿರುವುದೂ ಕೂಡ ಜಾಸ್ತಿ ಎಂದು ನಾನು ಹೇಳಬೇಕಾಗುತ್ತದೆ. ಇನ್ನು ಸೇಲ್ಸ್ ಟ್ಯಾಕ್ಸ್ ಬಗ್ಗೆ ನಾನು ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಬಿಲ್ ಬಂದಾಗ ನಾನು ಮಾತನಾಡುತ್ತೇನೆ. ಇನ್ನು ಎಕ್ಸೈಸ್ ವಿಚಾರದಲ್ಲಿ ಹೇಳುವುದಾದರೆ, ಎಕ್ಸೈಸ್ ಮೇಲೆ ಟ್ಯಾಕ್ಸ್ ಹಾಕಬೇಕು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವು ಮಾಡಿರುವುದು ಖೋಡೆ ಅವರಿಗೆ ಅನುಕೂಲ ಮಾಡುವುದಕ್ಕೆ ಮಾಡಿದ್ದೀರೆಂದು ಕಾಣುತ್ತದೆ. ಪೇಜ್ ೩೪ ರಲ್ಲಿ ಏನಿದೆ ಎಂದರೆ, ಈ ಸರ್ಕಾರ ಬಂದ ಮೇಲೆ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಲಿಕ್ಕರ್ ಶಾಪ್ಸ್ ಜಾಸ್ತಿಯಾಗಿವೆ ವೈನ್ ಶಾಪ್ಸ್ ಜಾಸ್ತಿಯಾಗಿವೆ, ಬೆಂಗಳೂರು ನಗರದ ಮೂಲೆ ಮೂಲೆಯಲ್ಲೂ ಬೀರು, ಬ್ರಾಂದಿಗಳ ಶಾಪುಗಳು ಬಂದಿವೆ. ಇದರಿಂದ ಬೆಂಗಳೂರಿನ ಒಳ್ಳೆಯ ವಾತಾವರಣ ಕೆಟ್ಟು ಹೋಗಿದೆ. ಬೆಂಗಳೂರನ್ನು ಈ ಪರಿಸ್ಥಿತಿಗೆ ತಾವು ತೆಗೆದುಕೊಂಡು ಬಂದಿದ್ದೀರಿ: ಕೆಟ್ಟದ್ದನ್ನು ಕುಡಿಯುವುದರ ಬದಲು ಒಳ್ಳೆಯದನ್ನು ಕುಡಿಯಲೆಂದು ತಾವು ಮಾಡಿರಬಹುದು. ಇವತ್ತಿನ ದಿವಸ ಅದರಲ್ಲಿ ಏನಾಗಿದೆ.

ಎನ್ನುವ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. On page 34, you have mentioned thus :

> "The maximum selling price of arrack which was removed from 1st July 1987 is proposed to be reintroduced from 1st July 1989. This is to have better control over the distribution of arrack.
>
> An import fee will be levied on all imported beer at Rs. 0.50 per litre and IML at Rs. 2 per litre with effect from 1st July 1989, to promote the sale of liquor manufactured within the State."

ಅಂದರೆ, ವಿದೇಶಿ ಮದ್ಯ ಏನು ಬರುತ್ತಿದೆಯೋ ಅದರ ಮೇಲೆ ಹೆಚ್ಚು ತೆರಿಗೆ ಹಾಕುತ್ತೇವೆ, ನಮ್ಮ ದೇಶಿಯ ಮದ್ಯದ ಉಪಯೋಗವನ್ನು ಜಾಸ್ತಿ ಮಾಡುವುದಕ್ಕೆ ದೇಶಿಯ ಮದ್ಯಕ್ಕೆ ತೆರಿಗೆಯನ್ನು ಕಡಿಮೆ ಹಾಕುತ್ತಿದ್ದೇವೆಂದು ಹೇಳಿದ್ದಾರೆ.

ಹೀಗೆ ಮಾಡಿದ್ದರಿಂದ ಖೋಡೆಯವರಿಗೆ, ಯು.ಬಿ.ಯವರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ. ಅವರಿಗೆ ಅನುಕೂಲ ಮಾಡಿ ಕೊಟ್ಟ ಹಾಗೆ ಆಗುತ್ತದೆ. ಹೀಗೆ ಏತಕ್ಕಾಗಿ ಮಾಡಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ. ಒಟ್ಟಿನಲ್ಲಿ ನಿಜಾಂಶ ಏನೆಂದರೆ ಅಂತಹವರಿಗೆ ಸಹಾಯ ಮಾಡಿದ ಹಾಗೆ ಆಗಿದೆ ಎಂದು ಹೇಳಬಯಸುತ್ತೇನೆ. ಈಗಾಗಲೇ ಆ ಜನರು ಸಾಮ್ರಾಟರಾಗಿ ಇದ್ದಾರೆ. ಇನ್ನು ಮೇಲೆ ಈ ಅನುಕೂಲತೆಗಳಿಂದಾಗಿ ಸೂಪರ್ ಸಾಮ್ರಾಟ್ ಆಗುತ್ತಾರೆ. ಅವರನ್ನು ಸೂಪರ್ ಸಾಮ್ರಾಟ್ ರಾಗಿ ಮಾಡುವುದಕ್ಕೆ ನೀವು ಹೊರಟಿದ್ದೀರಿ ಎಂದು ಹೇಳಬೇಕಾಗುತ್ತದೆ. ವೈನ್‌ಶಾಪ್‌ಗಳ ಮೇಲೆ ಅಗತ್ಯವಾಗಿ ಒಂದು ಹತೋಟಿ ಮಾಡಬೇಕು. ದೇವಸ್ಥಾನದ ಹತ್ತಿರ, ಮಸೀದಿಗಳ ಹತ್ತಿರ, ಶಾಲಾ ಮಠಾರಗಳಲ್ಲಿ ಚರ್ಚ್‌ಗಳ ಸಮೀಪ, ಹರಿಜನ ಗಿರಿಜನರ ಕೇರಿಗಳ ಸಮೀಪಗಳಲ್ಲೆಲ್ಲಾ ಈ ಶಾಪ್‌ಗಳನ್ನು ತೆರೆಯುವ ಒಂದು ಕೆಟ್ಟ ಪ್ರವೃತ್ತಿ ಏನು ಇದೆ ಅದನ್ನು ನಿಲ್ಲಿಸಬೇಕು. ಹೀಗೆ ಈ ಮೂಲಕ ಖೋಡೆ, ಯು.ಬಿ. ಮುಂತಾದವರಿಗೆ ಅನುಕೂಲ ಮಾಡಿಕೊಡುವುದು ಸರಿಯಲ್ಲ.

ಇದರ ಜೊತೆಗೆ ಇನ್ನೊಂದು ತಪ್ಪನ್ನು ಇವರು ಮಾಡಿದ್ದಾರೆ. ಅದೇನೆಂದರೆ, it is proposed to extend the ban on sale of toddy to the whole of the districts of Uttara Kannada aud Belgaum from the year 1989-90. This will involve a less of Rs. 77 lakhs per annum. ಟಾಡಿ ಸೇಲ್ಸ್ ಮಾಡ ಕೂಡದು ಎಂದು. ಈ ಟಾಡಿಯನ್ನು ಈಚಲು ಮರದಿಂದ ತೆಗೆದು ಹೊಟ್ಟೆಪಾಡನ್ನು ಮಾಡಿಕೊಂಡು ಹೋಗುವವರು ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಬಹಳ ಇದೆ. ಇದನ್ನು ಅವಲಂಬಿಸಿ ತುಂಬಾ ಜನರು ಜೀವಿಸುತ್ತಿದ್ದಾರೆ. ಅಂಥ ಬಡ ಜನರಿಗೆ ಅವರ ಉದ್ಯೋಗಕ್ಕೆ ಚ್ಯುತಿ ಬರತಕ್ಕಂಥ ಒಂದು ಪರಿಸ್ಥಿತಿ ಈ ಸರ್ಕಾರದ ನಿರ್ಣಯದಿಂದ ಆಗಿದೆ. ಖೋಡೆಯವರಿಗೆ ಅನುಕೂಲ ಮಾಡುವ ಸಂದರ್ಭದಲ್ಲಿ ಟಾಡಿಯವರಿಗೆ ಅನ್ಯಾಯ ಮಾಡಿದ ಹಾಗೆ ಆಗಿದೆ. ಈ ಟಾಡಿಯನ್ನು ತೆಗೆಯುವ ಜನರಿಗೆ ಸಹಾಯ ಮಾಡಲು ನಮ್ಮ ಕೇಂದ್ರ ಸರಕಾರದವರು ಕೆಲವೊಂದು ಸಹಾಯ ಮಾಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ರಾಜ್ಯದಲ್ಲಿ ಬೇಡ ಎಂದು ಹೇಳುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ಇದು ಸರಿಯಾದ ಕ್ರಮವಾಗಲಾರದು. ಇದನ್ನು ಬದಲಾವಣೆ ಮಾಡದಿದ್ದರೆ ಅದು ತಪ್ಪಾಗುತ್ತದೆ ಎಂದು ಹೇಳಬಯಸುತ್ತೇನೆ.

ಒಟ್ಟಾರೆ ನನ್ನ ಅಭಿಪ್ರಾಯದಲ್ಲಿ ಈ ಬಜೆಟ್‌ನೊಳಗೆ ಒಪ್ಪಿಕೊಳ್ಳತಕ್ಕಂಥ ಅಂಶಗಳು ಬಹಳ ಕಡಿಮೆ ಇದ್ದು, ಟೀಕೆ ಮಾಡತಕ್ಕಂಥ ಅಂಶಗಳು ಬಹಳಷ್ಟು ಜಾಸ್ತಿ ಇವೆ ಎಂದು ಹೇಳುತ್ತಾ, ಇದೊಂದು ಚುನಾವಣಾ ಬಜೆಟ್ ಎನ್ನುವುದರಲ್ಲಿ ಸಂಶಯವಿಲ್ಲವೆಂದು ಹೇಳಬೇಕಾಗಿದೆ. ನಾವು ಹೇಳಿರುವಂಥ ಸೂಚನೆಗಳನ್ನು ತಾವುಗಳು ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಪರಿಶೀಲಿಸುವುದು ಯೋಗ್ಯ ಎಂದು ಹೇಳಿ, ನಿಮ್ಮ ಲೋಪದೋಷಗಳನ್ನು ಸಕಾಲದಲ್ಲಿ ತಿದ್ದಿಕೊಳ್ಳದಿದ್ದಲ್ಲಿ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಆರ್. ವೆಂಕಟರಾಮಯ್ಯನವರು ತಮ್ಮ ಭಾಷಣ ಪ್ರಾರಂಭ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಈಗಾಗಲೇ ೫-೩೦ ಗಂಟೆಯಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.— ಅಧ್ಯಕ್ಷರೇ, ಅರ್ಧ ಗಂಟೆ ಕಾಲಾವಧಿಯ ಚರ್ಚೆಯ ವಿಚಾರ ಏನಾಯಿತು?

ಅಧ್ಯಕ್ಷರು.— ಅದನ್ನು ನಾಳೆ ತೆಗೆದುಕೊಳ್ಳೋಣ.

ಪ್ರೊ. ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಪಟ್ಟಿಯ ಮೇಲೆ ದಿನವೂ ನಾಲ್ಕು ಜನರು ಚರ್ಚೆ ಮಾಡತಕ್ಕದೆಂದು ತೀರ್ಮಾನವಾಗಿದೆ. ಈ ಚರ್ಚೆಯು ಗುರುವಾರಕ್ಕೆ ಮುಗಿಯಬೇಕೆಂದೂ ಕೂಡ ತೀರ್ಮಾನವಾಗಿದೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ, ಸೋಮವಾರ ೨೭ನೇ ತಾರೀಖಿನ ದಿವಸ ಮುಂಜಾನೆ ಸ್ವಲ್ಪ ಸಮಯ ಕೊಟ್ಟು ನಂತರ ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಉತ್ತರವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದಾದ ಮೇಲೆ ಫೈನಾನ್ಸ್ ಬಿಲ್ ಆಗಬೇಕು, ಟ್ಯಾಕ್ಸೇಶನ್ ಬಿಲ್ ಆಗಬೇಕು ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಮಾನ್ಯ ವೆಂಕಟರಾಮಯ್ಯನವರು ಇವೊತ್ತು ಅರ್ಧ ಗಂಟೆ ಹೊತ್ತು ಮಾತನಾಡಲಿ.

ಅಧ್ಯಕ್ಷರು.— ವೆಂಕಟರಾಮಯ್ಯನವರು ಅರ್ಧ ಗಂಟೆ ಕಾಲ ತಮ್ಮ ಭಾಷಣ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ— ನಿಮ್ಮ ಮಿತ್ರ ಪಕ್ಷದವರು ಮಾತನಾಡುತ್ತಾರೆ ಸಮಾಧಾನ ವಾಗಿ ಕೇಳಿ.

ಪ್ರೊ. ಶ್ರೀ ಎ. ಲಕ್ಷ್ಮೀಸಾಗರ್.— ನಿಮ್ಮನ್ನೂ ಕೂಡ ಮಿತ್ರರೆಂದು ತಿಳಿದುಕೊಂಡಿದ್ದೇವೆ.

ಶ್ರೀ ಯು. ಭೂಪತಿ.— ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಇವೊತ್ತು, ೫–೩೦ ಗಂಟೆಗೆ ಸಭೆ ಕರೆದಿದ್ದಾರೆ. ಅದಕ್ಕೆ ಇಲ್ಲಿರುವ ಅರ್ಧದಷ್ಟು ಜನರು ಹೋಗುತ್ತಾರೆ, ನೀವು ಕೂಡ ಬರಬೇಕು. ನಿಮ್ಮ ಸಲಹೆಗಳನ್ನು ಕೊಡಬೇಕು.

ಅಧ್ಯಕ್ಷರು.— ವೆಂಕಟರಾಮಯ್ಯನವರು ತಮ್ಮ ಭಾಷಣ ಪ್ರಾರಂಭಿಸಿ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಅಧ್ಯಕ್ಷರೇ, ಮಾನ್ಯ ಕೃಷ್ಣನ ರವರು ಪ್ಯಾರಾ ೧ರಿಂದ ೧೪ರವರೆಗೆ ಬರೆದಿರುವುದರ ಬಗ್ಗೆ ಏನು ಹೇಳಿದ್ದಾರೆ, ಅದನ್ನು ನಾನೂ ಒಪ್ಪುತ್ತೇನೆ. ಇದು ರಾಜ್ಯದ ಸಮಸ್ಯೆಯಲ್ಲ, ರಾಷ್ಟ್ರದ್ದು. ೧ರಿಂದ ೧೪ನೇ ಪ್ಯಾರಾದಲ್ಲಿರುವುದನ್ನು ನೋಡಿದರೆ ಸೆಂಟ್ರಲ್ ಗೌರ್ನಮೆಂಟಿನವರು ಯಾವ ರೀತಿ ಸ್ಟೇಟ್ ಫೈನಾನ್ಸ್‌ನಲ್ಲಿ ತಲೆ ತೂರಿಸಿದ್ದಾರೆ ಯಾವ ರೀತಿ ಇಂಟರ್‌ಫಿಯರೆನ್ಸ್ ಆಗಿದೆ, ಯಾವ ರೀತಿ ಮೋಸ ಮಾಡುತ್ತಿದ್ದಾರೆ ಎಂಬುದನ್ನು ಕೃಷ್ಣನ್ ರವರು ತಿಳಿಸಿದ್ದಾರೆ. ಇದರಿಂದ ಗೊತ್ತಾಗುತ್ತದೆ. ನಮಗೆ ಬರಬೇಕಾದ ಸುಮಾರು ೩೦೦ ಕೋಟಿ ವರ್ಷಂಪ್ರತಿ ಅವರು ಕೊಡುತ್ತಿಲ್ಲ. ಇದೊಂದರ ಬಗ್ಗೆಯೇ ಬೊಮ್ಮಾಯಿ ಯವರು ಧೈರ್ಯವಾಗಿ ಮಾತಾಡಿರುವುದು ಅದನ್ನು ಸ್ವಾಗತಿಸುತ್ತೇನೆ. ಇನ್‌ಕಮ್ ಟ್ಯಾಕ್ಸ್‌ನಿಂದ ಎಷ್ಟು ಬರುತ್ತಿತ್ತೋ ಅದನ್ನು ಕೊಡುತ್ತಿಲ್ಲ, ಅಡ್ಮಿನಿಸ್ಟರ್ಡ್ ಪ್ರೈಸಸ್ ಎಂದು ಹೇಳುತ್ತಾರೆ ಆಮೇಲೆ ಮೋಸ ಮಾಡುತ್ತಾರೆ. ಆಮೇಲೆ ಸರಚಾರ್ಜ್ ಎಂದು ಹೇಳುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಮ್ಮದು ಹೇಳ್ರಿ ಎಂದರೆ ಸೆಂಟ್ರಲ್‌ದು ತಗೊಂಡ್ರು.

ಶ್ರೀ ಆರ್. ವೆಂಕಟರಾಮಯ್ಯ.— ನೋಡಿ, ಮಧ್ಯೆ ತಲೆ ಹಾಕಬೇಡಿ, ಇಷ್ಟು ಹೊತ್ತು ನಿಮ್ಮನ್ನು ಮಿತ್ರ ಪಕ್ಷದವರು ಎಂದು ತಿಳಿದುಕೊಂಡಿದ್ದೆ, ಇನ್ನು ಮುಂದೆ ಶತ್ರು ಪಕ್ಷದವರು ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮತ್ತೆ ಡೆಲ್ಲಿಗೇಕೆ ಹೋಗ್ತೀರಿ ಸ್ವಾಮಿ.

ಶ್ರೀ ಆರ್. ವೆಂಕಟರಾಮಯ್ಯ.— ಕರ್ನಾಟಕಕ್ಕೆ ಬರುತ್ತೇನೆ. ಈ ರೀತಿ ಹೇಳಿಕೊಂಡು ರಾಜ್ಯಕ್ಕೆ ಬರಬೇಕಾದ ಎಲ್ಲ ಬಜೆಟನ್ನು ಅವರೇ ತೆಗೆದುಕೊಂಡು ಬಹಳ ಅನ್ಯಾಯ ಮಾಡುತ್ತಿದ್ದಾರೆ ಸ್ವಾಮಿ. ಈ ಬಗ್ಗೆ ಸರ್ಕಾರಿಯಾ ಕಮಿಷನ್ ಏನು ಹೇಳಿತು, ಫೈನಾನ್ಸ್ ಕಮಿಷನಿನಲ್ಲಿ ಇರುವವರು ಅದನ್ನು ಅರ್ಥ ಮಾಡಿಕೊಳ್ಳಬೇಕು. ರಾಜ್ಯಕ್ಕೆ ಬರುವುದು ಸರಿಯಾಗಿ ಬರುತ್ತಿಲ್ಲ. ಬೊಮ್ಮಾಯಿ ಯವರು ಹೇಳಿರುವುದು ಸರಿಯಾಗಿದೆ. ಈ ಬಗ್ಗೆ ಕಾಂಗ್ರೆಸೇತರ ಮುಖ್ಯಮಂತ್ರಿಗಳು ಒಂದು ಮೀಟಿಂಗ್ ಮಾಡಿ ಕೆಲವು ಸವಲತ್ತು ಕೇಳಿದ್ದಾರೆ. ಒ.ಡಿ.ಯನ್ನು ಒಂದು ವಾರ ಮಾತ್ರ ಹೆಚ್ಚಿಗೆ ಕೊಡಿ ಎಂದು ಕೇಳಿದರೂ ಅದಕ್ಕೂ ಕೇಂದ್ರ ಒಪ್ಪಲಿಲ್ಲ. ಸೆಂಟ್ರಲ್ ಗವರ್ನಮೆಂಟಿನಲ್ಲಿ ರಾಜೀವ್ ಗಾಂಧಿಯವರೇನು ಪರ್ಮನೆಂಟಾಗಿ ಇರ್ತೀನಿ ಎಂದು ತಿಳಿದುಕೊಂಡಿದ್ದಾರೇನೋ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವಂತೂ ಹೋಗುವುದಿಲ್ಲ ಬಿಡಿ.

ಶ್ರೀ ಆರ್. ವೆಂಕಟರಾಮಯ್ಯ.—ನಮಗಂತೂ ಚಾನ್ಸ್ ಉಂಟು. ಇವರಿಗಂತೂ ಇಲ್ಲವೇ ಇಲ್ಲ. ಈ ವರ್ಷವೇ ಕಡೆ, ಕರ್ನಾಟಕದಲ್ಲೂ ಇಲ್ಲ, ಕೇಂದ್ರದಲ್ಲೂ ಇಲ್ಲ ಮುಂದಿನ ವರ್ಷದಿಂದ ಇವರಿಗೆ ಮೊಯ್ಲಿಯವರು ಪ್ರತಿಯೊಂದು ರಾಜ್ಯದ ಇಂಟರೆಸ್ಟ್ ವಿಷಯದಲ್ಲೂ ಅನ್ಯಾಯವಾಗಿದ್ದರೆ ಹೇಳುತ್ತಾರೆ. ಆದರೆ ಅವರು ಸುಮ್ಮನಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾಳೆ ನಾನು ಮಾತನಾಡುತ್ತೇನೆ, ಕೇಳಿ.

ಶ್ರೀ ಪಟವಾರಿ ರತ್ನಾಕರ್.— ನಾವು ಈಗಲೂ ಇದ್ದೇವೆ, ಮುಂದೇನೂ ಇರ್ತೇವೆ. ನಿಮ್ಮದು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.— ಸ್ವಾಮಿ, ಈ ಹಿಂದೆ ಕುಳಿತಿರುವವರು ಹುಡುಗುಮುಂಡೇವು ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆ ಹುಡುಗುಮುಂಡೇವು ಅನ್ನುವುದನ್ನು ಎಕ್ಸ್‌ಪಂಜ್ ಮಾಡಬೇಕು.

SRI R. VENKATARAMAIAH.— I am sorry. Out of affection I said it. Let it not go on record.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕಮ್ಯುನಿಸ್ಟರು ದಾರಿ ತಪ್ಪುತ್ತಾರೆ ಎಂದು ಹೇಳುವುದು ಇದಕ್ಕೇನೆ.

೫-೩೦ ಪಿ. ಎಂ.

ನಮಗೆ ದಾರಿ ಇಲ್ಲ. ನೀವು ಹೋಗುವುದೇ ದಾರಿ. ನಮ್ಮನ್ನು ಯಮಲೋಕಕ್ಕೆ ಕಳಿಸುವುದೊಂದೇ ದಾರಿ ನಿಮಗೆ. ಇನ್ನು ನಮ್ಮ ರಾಜ್ಯದ ಬಡ್ಜೆಟ್ಟಿನ ಬಗ್ಗೆ ಕೆಲವು ವಿಷಯವನ್ನು ಹೇಳಬೇಕಾಗುತ್ತದೆ ದುರದೃಷ್ಟವಶಾತ್ ಜನತಾ ಪಕ್ಷ, ಜನತಾ ದಳವೆಂದು ಎರಡು ಭಾಗವಾಗಿ ಆದ ಮೇಲೆ ಇಲ್ಲಿ ಆಡಳಿತ ನಿಯಂತ್ರಣ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇವರ ಅಣ್ಣ ತಮ್ಮಂದಿರ ಜಗಳದಲ್ಲಿ ಅಧಿಕಾರದಲ್ಲಿ ಇವರ ಕಂಟ್ರೋಲ್ ಇಲ್ಲ ಪೂರ್ತಿಯಾಗಿ ಹದಗೆಟ್ಟು ಹೋಗಿದೆ. ಯಾರನ್ನು ಯಾರೂ ಕೇಳುತ್ತಿಲ್ಲ. ಅಂತಹ ಪರಿಸ್ಥಿತಿಗೆ ಬಂದಿದೆ. ಹಣಕಾಸಿನ ಕಂಟ್ರೋಲ್ ಅಂತೂ ಪೂರ್ತಿಯಾಗಿ ಇಲ್ಲವೇ ಇಲ್ಲ. ತಾವು ನಮಗೆ ಒಂದು ಸರ್ಕ್ಯುಲರ್ ಅನ್ನು ಕಳಿಸಿದ್ದೀರಿ ಜಾಸ್ತಿ ಓದುವುದಕ್ಕೆ ಹೋಗುವುದಿಲ್ಲ ಬಾಧೆಯಾಗುತ್ತದೆ. ತೆರಿಗೆಗಳ ವಸೂಲಾತಿ ಬಗ್ಗೆ ಹೇಳಿದ್ದೀರಿ. ಇದನ್ನೆಲ್ಲಾ ನೋಡಿದರೆ ಯೋಜನೇತರ ಕಾರ್ಯಕ್ರಮಗಳಿಗೆ ಬಿಟ್ಟು ಯೋಜನೆಗಳಿಗೆ ಏನೂ ಖರ್ಚು ಮಾಡುವುದಿಲ್ಲ ಈಗ ಯೋಜನೆಗೆ ಕೇವಲ ೩೦ ಪರ್ಸೆಂಟ್ ಇದೆ. ಇನ್ನು ಸ್ವಲ್ಪ ದಿವಸಕ್ಕೆ ಪೂರ್ತಿಯಾಗಿ ಸಂಬಳಕ್ಕೆ ಕೊಡುತ್ತೀರಿ. ಮುಂದೆ ೩೦ ಪರ್ಸೆಂಟು ಬರುವುದಿಲ್ಲ. ಒಂದು ತಿಂಗಳಿಗೆ ೧೦೪ ಕೋಟಿ ರೂಪಾಯಿಯನ್ನು ಸಂಬಳಕ್ಕೆಂದು ಖರ್ಚು ಮಾಡುತ್ತೀರಿ. ಕಚೇರಿಯ ವೆಚ್ಚ, ಕಾರ್, ಟಿ. ಎ. ಡಿ. ಎ, ಎಲ್ಲಾ ಸೇರಿಸಿಕೊಂಡು ಗಿಂಬಳ ಬಿಟ್ಟು ೧೭೦ ಕೋಟಿ ರೂಪಾಯಿಯಾಗುತ್ತದೆ. ಇನ್ನು ಉಳಿಯುವುದು ಏನು ? ಮಾನ್ಯ ಬಸವಲಿಂಗಪ್ಪನವರು ಸಂಬಳದ ಬಗ್ಗೆ ಹೇಳಿದಂತಹ ಮಾತನ್ನು ನಾನು ಒಪ್ಪುವುದಿಲ್ಲ. ಸರಕಾರಿ ಅಧಿಕಾರಿಗಳೆಂದು ಏನು ನೀವು ಮಾಡಿ ಇಟ್ಟಿದ್ದೀರಿ ಅವರು ಸದುದ್ದೇಶದಿಂದ ಕೆಲಸ ಮಾಡದೇ ಸಂಬಳಕ್ಕಿಂತ ಗಿಂಬಳಕ್ಕೆ ಜಾಸ್ತಿ ಕೈ ಹಾಕುತ್ತಾರೆ. ಎಲ್ಲರೂ ಲಂಚಕೋರರೆಂದು ನಾನು ಹೇಳುತ್ತಿಲ್ಲ. ಪ್ರತಿಯೊಂದು ಇಲಾಖೆಯಲ್ಲೂ ಇದು ನಡೆಯುತ್ತಿದೆ. ನಮಗೆ ನಾಚಿಕೆಯಾಗುವಷ್ಟು ಭ್ರಷ್ಟತೆಗೆ ಇದು ಇಳಿದಿದೆ. ಐ. ಎ. ಎಸ್. ಅಧಿಕಾರಿಗಳೂ ಕೂಡ ಇಲ್ಲಿ ಇದ್ದಾರೆ. ಅನೇಕ ಜನ ಇದ್ದಾರೆ ನಾನು ಎಲ್ಲರ ಬಗ್ಗೆ ಹೇಳುತ್ತಿಲ್ಲ. ಈ ರೀತಿ ಪ್ರತಿಯೊಂದು ಹಂತದಲ್ಲಿಯೂ ಇದು ತುಂಬಿದೆ. ಎಕ್ಸೈಸ್ ಇಲಾಖೆಯ ಬಗ್ಗೆಯಂತೂ ಹೇಳುವುದಕ್ಕಾಗುವುದಿಲ್ಲ. ಜನರಿಗೆ ಕುಡಿಸಿ ಅವರೂ ಕುಡಿದು ಬೀದಿಗಳಲ್ಲಿ ಇರುತ್ತಾರೆ. ಪೋಲೀಸ್ ಇಲಾಖೆಯ ಬಗ್ಗೆ ಕೂಡ ಹೇಳುವಂತಿಲ್ಲ. ಒಂದೊಂದು ಪೋಲೀಸ್ ಸ್ಟೇಷನ್‌ನಲ್ಲಿ ೨೦-೩೦ ಸಾವಿರ ಮಾಮೂಲು ಉಂಟು. ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ ಎನ್. ಆರ್. ಇ ಪಿ. ಆರ್. ಎಲ್ ಇಜಿಪಿ ಯೋಜನೆಗೆ ಸಂಬಂಧಪಟ್ಟ ಕೆಲಸಗಳನ್ನು ನೋಡಿಕೊಳ್ಳಲು ಜೂನಿಯರ್ ಇಂಜಿನಿಯರ್‌ಗೇ ಕೊಟ್ಟಿದ್ದಾರೆ. ಅಲ್ಲಿ ಆತ ಆ ಕೆಲಸವನ್ನು ತೆಗೆದುಕೊಳ್ಳುವುದಿಲ್ಲ ೭೫ ಪರ್ಸೆಂಟ್ ನಷ್ಟು ಹಣವನ್ನು ತಿಂದು ಸ್ವಲ್ಪ ಎಸ್ಟಿಮೇಟ್ ಅನ್ನು ಮಾಡಿ ಕಂಟ್ರಾಕ್ಟರ್‌ಗೆ ಸ್ವಲ್ಪ ಕೊಟ್ಟು ಕೆಲಸ ಮಾಡದೇ ಇರುವ ಕೆಲಸಗಳು ಜಾಸ್ತಿ ಉಂಟು. ಎನ್ ಆರ್ ಇ ಪಿ ಯೋಜನೆಗಳಲ್ಲಿ ೪ ಕೋಟಿ ಜನರಿಗೆ ಕೆಲಸ ಕೊಟ್ಟಿದ್ದೇವೆಂದು ಮ್ಯಾನ್‌ಡೇಸ್‌ನ್ನು ಕೊಟ್ಟಿದ್ದಾರೆ. ೫೦ ಲಕ್ಷ ಕೂಡ ಇರುವುದಿಲ್ಲ.

ಎನ್ ಆರ್ ಇ ಪಿ ಯೋಜನೆಗಳು ಏನು ಇವೆ ಇವು ಪೂರ್ತಿಯಾಗಿ ದುರುಪಯೋಗವಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇವನ್ನು ಕಂಟ್ರೋಲ್ ಮಾಡುವುದಕ್ಕೆ ಲೋಕಾಯುಕ್ತ ಎಂಬ ಒಂದು ಬಿಳಿ ಆನೆ ಇದೆ. ಇದಕ್ಕಿಂತ ಮೊದಲು ಇದ್ದ ವಿಜಿಲೆನ್ಸ್ ಎಷ್ಟೋ ಚೆನ್ನಾಗಿ ಇತ್ತು. ಉದಾಹರಣೆಗೆ ಹೇಳುವುದಾದರೆ ಲೋಕಾಯುಕ್ತಕ್ಕೆ ನಾನು ಒಂದು ದೂರನ್ನು ಕೊಟ್ಟು ನಂತರ ನಾನೇ ಇದರಲ್ಲಿ ಸಿಕ್ಕಿಕೊಂಡೆ ನನಗೆ ಏಕೆ ಕಂಪ್ಲೇಂಟ್ ಕೊಟ್ಟೆನೋ ಎಂದು ಅನ್ನಿಸಿತು. ಏಕೆಂದರೆ ಅವರ ಮನೆಯಲ್ಲಿ ಎನ್‌ಕ್ವೈರಿ ಮಾಡುವ ಸಲುವಾಗಿ ಹೋದ ಅಧಿಕಾರಿ ಕುಳಿತು ಮೂರು ದಿವಸದಲ್ಲಿ ಆರು ಕೋಳಿಯನ್ನು ತಿಂದು ಬಂದಿದ್ದಾನೆ. ಬೆಳಿಗ್ಗೆ ಒಂದು ಕೋಳಿ, ಸಾಯಂಕಾಲ ಮತ್ತು ಮಧ್ಯಾಹ್ನ ಈ ರೀತಿ ಆರು ಕೋಳಿಗಳನ್ನು ತಿಂದು ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅಲ್ಲಿ ಎಲ್ಲಾ ಸರಿಯಾಗಿದೆ ಎಂದು ಬಂದಿದ್ದಾನೆ. ನನ್ನ ಗ್ರಹಚಾರ ಏತಕ್ಕೆ ಕಂಪ್ಲೇಂಟ್ ಕೊಟ್ಟೆನೋ ಎಂದೆನಿಸಿತು. ಇದರಿಂದ ನನಗೆ ಬುದ್ಧಿ ಬಂತು. ಇವರ ಹತ್ತಿರ ಡೀಲ್ ಮಾಡುವುದು ಬಹಳ ಕಷ್ಟ. ಎಲ್ಲಾ ಕಂಡೆಮ್ಡ್ ಫೆಲೋಸ್‌ಗಳನ್ನು ಹಾಕಿದ್ದಾರೆ. ಕೆಲವರು ಒಳ್ಳೆಯವರೂ ಇದ್ದಾರೆ. ಅಲ್ಲಿ ಶ್ರೀನಿವಾಸನ್ ಎಂದು ಒಬ್ಬರು ಅಧಿಕಾರಿ ಇದ್ದಾರೆ. ಅವರು ತುಂಬಾ ಒಳ್ಳೆಯವರು. ಅವರು ಐ. ಪಿ. ಎಸ್. ಆಫೀಸರ್. ಅದೇ ರೀತಿಯಲ್ಲಿ ಮೂರು-ನಾಲ್ಕು ಜನರ ಹೆಸರನ್ನು ಮಾತ್ರ ಹೇಳಬಹುದು. ಅಲ್ಲಿ ಕೆಲವರು ದುರ್ಗುಣಗಳು ಇದ್ದ ಹಾಗೆ ಇದ್ದಾರೆ. ತಿಗಣೆ ಹೇಗೆ ಆರು ತಿಂಗಳವರೆಗೂ ಒಣಗಿ ಬಿದ್ದಿದ್ದು ರಕ್ತ ಸಿಕ್ಕಿದರೆ ಒಟ್ಟಿಗೆ ಒಂದೇ ಸಾರಿ ಹೀರುತ್ತದೋ ಅದೇ ರೀತಿಯಲ್ಲಿ ಇವರೂ ಕೂಡಾ ಇದ್ದು ಯಾವುದಾದರೂ ಒಂದು ಕೇಸ್ ಬಂದರೆ ಒಂದೇ ಸಾರಿ ಹೀರಿ ಬಿಡುತ್ತಾರೆ. ಲೋಕಾಯುಕ್ತವನ್ನು ನಂಬಿಕೊಂಡು ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದಲ್ಲಿ ಲಂಚ ಹೋಗುತ್ತದೆ ಎಂದು ಹೇಳುತ್ತಿದ್ದರು. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇದರ ಜೊತೆಯಲ್ಲಿ ಕೆಲವು ಇಲಾಖೆಗಳನ್ನು ತೆಗೆದುಕೊಳ್ಳುವಾಗ ವಿದ್ಯಾಭ್ಯಾಸ ಇಲಾಖೆಯನ್ನು ತೆಗೆದುಕೊಳ್ಳಿ. ಅಲ್ಲಿ ಏನಾಗಿದೆ ಎಂದು ಹೇಳಿದರೆ ಜನತಾ ಪಾರ್ಟಿಯವರು ಬಂದ ಮೇಲೆ ನಾವು ಏನು ಅಂದುಕೊಂಡಿದ್ದೆವು ಎಂದರೆ ಇನ್ನು ಮುಂದಾದರೂ ಸ್ವಲ್ಪ ಸುಧಾರಿಸುತ್ತದೆ ಎಂದು ತಿಳಿದುಕೊಂಡಿದ್ದೆವು. ಆಂಧ್ರದಲ್ಲಿ ಎನ್. ಟಿ. ರಾಮರಾಯರು ಒಂದು ಪ್ರೈವೇಟ್ ಇನ್‌ಸ್ಟಿಟ್ಯೂಷನನ್ನು ಬಿಡದೆ ಅಬಾಲಿಷ್ ಮಾಡಿದ್ದಾರೆ. ನಮ್ಮಲ್ಲಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್ ಹೇಗೆ ಇದೆ ಎಂದು ಹೇಳಿದರೆ ನಮ್ಮಲ್ಲಿ ಸಾಕಷ್ಟು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳೇ ತುಂಬಿ ಹೋಗಿವೆ. ಬೆಂಗಳೂರಿನಲ್ಲಿ ಕೆಲವು ಶಾಲೆಗಳಲ್ಲಿ ಕಾನ್‌ವೆಂಟ್‌ಗೆ ಸೇರಿಸಬೇಕು ಎಂದು ಹೇಳಿದರೆ ಐದು ಸಾವಿರ ರೂಪಾಯಿ ಡೊನೇಷನ್ ಕೊಡಬೇಕು. ಕಾನ್‌ವೆಂಟ್ ಲೆವೆಲ್‌ನಿಂದ ಶುರು ಮಾಡಿ ಮೆಡಿಕಲ್ ಕಾಲೇಜುವರೆಗೆ ಎಲ್ಲಾ ನಟವರ್‌ಲಾಲ್‌ಗಳೂ ಎಲ್ಲರೂ ಅಲ್ಲಿಯೇ ಇದ್ದಾರೆ. ರಾಜಮಹಾರಾಜುಗಳು ತುಂಬಿ ಹೋಗಿದ್ದಾರೆ. ಮಣಿಪಾಲ್ ನೋಡಿದರೆ ಅಲ್ಲಿ ಒಬ್ಬ ದೊರೆ. ದಾವಣಗೆರೆಯಲ್ಲಿ ಹೋಗಿ ನೋಡಿದರೆ ಅಲ್ಲಿ ಒಬ್ಬ ಮಹಾರಾಜ. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ಹೋದರೆ ಅಲ್ಲಿ ರಾಜಾಧಿರಾಜ ಒಟ್ಟಿನಲ್ಲಿ ಪೂರ್ತಿಯಾಗಿ ಶಾಲೆಗಳನ್ನು ಅವರಿಗೆ ಮಾರಿ ಬಿಟ್ಟಿದ್ದೀರಿ ಇವರು ಏನು ಹೇಳುತ್ತಾರೆ ಎಂದರೆ ಡೊನೇಷನ್ ತೆಗೆದುಕೊಂಡರೆ ಆರು ತಿಂಗಳ ಸಜೆ ಎಂದು ಹೇಳುತ್ತಾರೆ. ಡೊನೇಷನನ್ನು ತೆಗೆದುಕೊಂಡು ಅವನೇನು ರಸೀದಿಯನ್ನು ಕೊಡುತ್ತಾನೆಯೋ ? ಅವನಿಗೆ ಬುದ್ಧಿ ಇಲ್ಲವೇ ? ಕಾನೂನನ್ನು ಹೊಸದಾಗಿ ಲಕ್ಷ್ಮೀಸಾಗರ್ ಹುಡುಕಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಡೊನೇಷನ್ ತೆಗೆದುಕೊಂಡು ರಸೀದಿಯನ್ನು ಕೊಡುವುದಿಲ್ಲ. ಆದರೆ ವಕೀಲರೂ ಕೂಡ ಫೀಜನ್ನು ತೆಗೆದುಕೊಳ್ಳುತ್ತಾರೆ. ಅವರೂ ಕೂಡಾ ರಸೀದಿಯನ್ನು ಕೊಡುವುದಿಲ್ಲ.

(ನಗು)

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲಿ ಏನಾಗಿದೆ ಎಂದರೆ ಅವರುಗಳಿಗೆ ಪೂರ್ತಿಯಾಗಿ ಎಜುಕೇಷನ್ ಡಿಪಾರ್ಟ್‌ಮೆಂಟ್‌ನ್ನೇ ಮಾರಿದ್ದೇವೆ. ಅವರಿಗೆ ಕೊಟ್ಟು ಬಿಟ್ಟಿದ್ದೇವೆ, ಏನಾದರೂ ಮಾಡಿಕೊಂಡು ಹೋಗಿ ಎಂದು ಹೇಳಿ ಬಿಟ್ಟಿದ್ದೇವೆ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಒಟ್ಟಿನಲ್ಲಿ ಬಜೆಟ್ ಮೇಲೆ ಮಾತನಾಡಲಿಕ್ಕೆ ವಿಷಯ ಏನೂ ಸಿಗುತ್ತಿಲ್ಲಇಲ್ಲ ಎಂದು ಹೇಳಿ ಕುಳಿತುಕೊಳ್ಳಿ

ಶ್ರೀ ಆರ್. ವೆಂಕಟರಾಮಯ್ಯ.—ಈ ಶ್ರೀನಿವಾಸ್ ಯಾವಾಗಲೂ ಹೀಗೆಯೇ ಸದನಕ್ಕೆ ಬಂದ ದಿವಸ ಏನಾದರೂ ಮಿಸ್ಚೀಫ್ ಮಾಡಿ ಹೋಗುತ್ತಾನೆ. (ನಗು) ಈ ಬಜೆಟ್‌ನಲ್ಲಿ ಬಹಳ ಐಟಂಸ್‌ಗಳನ್ನು ಮಾಡಿದ್ದಾರೆ. ಆದರಲ್ಲಿ ಅಗ್ರಿಕಲ್ಚರ್ ಲೇಬರರ್ಸ್ ಬಗ್ಗೆ ಒಂದು ತಿಂಗಳಿಗೆ ಅರವತ್ತು ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ದುರಾದೃಷ್ಟ ವಶಾತ್ ಅದು ಇಂಗ್ಲೀಷ್ ವರ್ಷನ್‌ಗೂ ಕನ್ನಡ ವರ್ಷನ್‌ಗೂ ನೋಡಿದರೆ ಅಗ್ರಿಕಲ್ಚರ್ ವರ್ಕರ್ಸ್‌ಗೆ ಏನೂ ಸಿಗುತ್ತಿಲ್ಲ.

ಗ್ರಾಮೀಣ ಕಾರ್ಮಿಕರು ನಮ್ಮ ರಾಷ್ಟ್ರೀಯ ಅರ್ಥ ವ್ಯವಸ್ಥೆಗೆ ಬುನಾದಿಯಾಗಿರುವ ಕಾರಣ ಕೃಷಿ ಕಾರ್ಮಿಕರ ವಿಶೇಷ ಕಲ್ಯಾಣ ಕ್ರಮವಾಗಿ, ಸಮೂಹ ವಿಮೆ ಹಾಗೂ ನಿವೃತ್ತಿ ವೇತನ ಯೋಜನೆ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿದ್ದೇವೆ. ಕೃಷಿ ಕಾರ್ಯದಲ್ಲೇ ಸಕ್ರಿಯನಾಗಿ ತೊಡಗಿರುವಾಗ ಅಸಮರ್ಥನಾದ ವ್ಯಕ್ತಿಗೆ ೬೦ ರೂಪಾಯಿಗಳ ಮಾಸಿಕ, ನಿವೃತ್ತಿ ವೇತನವನ್ನು ನೀಡಲಾಗುವುದು ಎಂದು ಹೇಳುತ್ತಾರೆ. ಅದೇ ಇಂಗ್ಲೀಷ್ ವರ್ಷನ್‌ನಲ್ಲಿ ಡಿಸೇಬಲ್ಡ್ ವರ್ಕರ್ಸ್ ಎಂದು ಹೇಳುತ್ತಾರೆ. ಡಿಸೇಬಲ್ಡ್ ಎಂದರೆ ಕೈ ಕಾಲು, ಕಣ್ಣು ಏನಾದರೂ ಕಳೆದುಕೊಂಡಿರುವವರು. ಹೀಗಿರುವಾಗ ಈಗ ೬೫ ವರ್ಷಕ್ಕೆ ಮೇಲ್ಪಟ್ಟವರಿಗೆ ಓಲ್ಡ್ ಏಜ್ ಪೆನ್‌ಷನ್ ಕೊಡಬೇಕೆಂದು ಹೇಳುತ್ತಾರೆ.

ಶ್ರೀ ಎಂ. ಚಂದ್ರಶೇಖರ್.— ಕೆಲಸ ಮಾಡುತ್ತಿದ್ದಾಗ ಡಿಸೇಬಲ್ಡ್ ಆದರೆ ಅಂತಹವರಿಗೆ...

ಶ್ರೀ ಆರ್. ವೆಂಕಟರಾಮಯ್ಯ.— ಇದು ತುಂಬಾ ಮೋಸ. ಇದು ಯಾರಿಗೂ ಸಿಕ್ಕುವುದಿಲ್ಲ. ವರ್ಕರ್ಸ್ ನನಗೆ ಮಾಸಿಕ ವೇತನ ಬರುತ್ತದೆ, ಬರುತ್ತದೆ ಎಂದು ತಿಳಿದು ಕೊಳ್ಳುತ್ತಾರೆ. ಮಾನ್ಯ ಚಂದ್ರಶೇಖರ್‌ರವರ ವರ್ಷನ್ ಕರೆಕ್ಟಾಗಿದ್ದರೆ ಅದು ಶುದ್ಧ ಮೋಸ. ಅವರಿಗೆ ಏನೂ ಸಿಕ್ಕುವುದಿಲ್ಲ. ದಯವಿಟ್ಟು ಇದನ್ನು ರಿವೈಸ್ ಮಾಡಿ. ಕೇರಳದಲ್ಲಿ ಸ್ಪಷ್ಟವಾಗಿ ೬೫ ರೂಪಾಯಿ ಕೊಡುತ್ತಾರೆ. ಅಲ್ಲಿ ನಿವೃತ್ತಿ ವೇತನದ ಬಗ್ಗೆ ಕಾನೂನು ಮಾಡಿದ್ದಾರೆ, ಕೊಡುತ್ತಾರೆ. ಇಲ್ಲಿ ಅದೇ ರೀತಿ We will give it to agricultural labourers. ಎಂದು ಹೇಳುವುದು ಬಿಟ್ಟು ಈ ಕಡೆ ನಾಲ್ಕು ಕಂಡೀಷನ್ ಮತ್ತೊಂದು ಕಡೆ ನಾಲ್ಕು ಕಂಡೀಷನ್ ಹಾಕುವುದು ಬೇಡ. ಇದರಲ್ಲಿ ದೊಡ್ಡದಾಗಿ ಹೇಳಿಕೊಳ್ಳುವುದು ೨೦ ಸಾವಿರ ಜನರಿಗೆ ಮುನ್ನೂರು ರೂಪಾಯಿ ಪ್ರಕಾರ ಅನುಕೂಲ ಮಾಡಿಕೊಡುತ್ತೇವೆ ಎಂದು. ನಾನು ಕೇಳಿಕೊಳ್ಳುವುದೇನೆಂದರೆ ನೀವು ಸ್ಟೈಫಂಡರಿಯವರಿಗೆ ೧೦ ವರ್ಷದಿಂದ ಕೊಟ್ಟಿದ್ದೀರಿ. ನೀವು ಐದು ವರ್ಷದಿಂದ ಕೊಟ್ಟಿದ್ದೀರಿ, ನಮ್ಮ ಕಾಂಗ್ರೆಸ್ ಮಿತ್ರರು ಮೊದಲು ಐದು ವರ್ಷ ಕೊಟ್ಟರು. ಆ ಮೇಲೆ ಕಾಂಟ್ರಾಕ್ಟ್ ಟೀಚರ್ಸ್, ಲೆಕ್ಚರರ್ಸ್ ಇದ್ದಾರೆ ಅವರಿಗೂ ಕೊಡಿ. ಯಾರಿಗೆ ಏನೂ ಕೊಡಲಿಲ್ಲ. ಅವರಿಗೆ ಸ್ವಲ್ಪ ದಿವಸ ಕೆಲಸ ಕೊಟ್ಟರೆ ಹೊಗಳುತ್ತಾರೆ. ಒಂದು ವರ್ಷವಾದ ಮೇಲೆ ಖಾಯಂ ಮಾಡಿ ಎಂದು ಬೆಂಗಳೂರಿನಲ್ಲಿ ಕ್ಯಾಂಪ್ ಹಾಕುತ್ತಾರೆ. ನಿಮ್ಮನ್ನು ಬಯ್ಯುತ್ತಾರೆ, ಇಷ್ಟೇ ನೀವು ಮಾಡಿಕೊಳ್ಳುವುದು. ಒಂದು ವರ್ಷ ಹೊಗಳುತ್ತಾರೆ. ಯಾರ್‍ಯಾರೋ ಎಂ. ಎಲ್. ಎ.ಗಳು ಬಾಧೆ ಬಿದ್ದು ಕೆಲಸ ಕೊಡಿಸುತ್ತಾರೆ. ಅದು ಆದ ಮೇಲೆ ಒಂದು ವರ್ಷವಾದ ಮೇಲೆ ಅವರು ಹೋರಾಟ ಶುರು ಮಾಡುತ್ತಾರೆ. ನಾನು ಹೇಳುವುದೇನೆಂದರೆ ನೀವು ಎಂಪ್ಲಾಯ್‌ಮೆಂಟ್ ಬಗ್ಗೆ ಏನು ಹೇಳಿಕೊಂಡಿದ್ದೀರಿ ಅದನ್ನು ಮಾಡಲಿಲ್ಲ. ಈಗ ಪ್ರಸ್ತಾಪಿಸಿರುವುದು ಒಳ್ಳೆಯದು ಆದರೆ ೪೭ ಸಾವಿರ ಸರ್ಕಾರಿ ಹುದ್ದೆಗಳು ಖಾಲಿ ಇದೆ, ಅದನ್ನು ಮಾಡುವುದು ಬಿಟ್ಟು ಮುನ್ನೂರು ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತೀರಿ. ಇದನ್ನು ಬಿಟ್ಟು ಉಪಾಧ್ಯಾಯರನ್ನು ಅಪಾಯಿಂಟ್ ಮಾಡಿಕೊಂಡರೆ ನೀವು ನಿಜವಾಗಿ ಜನಕ್ಕೆ ಸಹಾಯ ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತೇನೆ. ಎಕನಾಮಿಕ್ ಸರ್ವೆ ಮತ್ತು ಪ್ಲಾನ್ ಬಗ್ಗೆ ಹೇಳಬೇಕಾಗುತ್ತದೆ. ಹೋದ ವರ್ಷ ಇದ್ದ ಪ್ಲಾನ್ ೧೧೦೦ ಕೋಟಿ ರೂಪಾಯಿ ಈ ವರ್ಷ ಕಡಿಮೆ ಮಾಡಿದ್ದೀರಿ. ಇನ್‌ಫ್ಲೇಷನ್ ರೇಟ್ ೭.೫ ಇದೆ. ಇನ್‌ಫ್ಲೇಷನ್ ರೇಟ್ ೭.೫ ಇದ್ದರೂ ಕೂಡ ೮ ನೂರು ಕೋಟಿ ಪ್ಲಾನ್‌ನಲ್ಲಿ ಇಳಿಸಿದ್ದೀರಿ. ಅದನ್ನು ಎಷ್ಟು ಅನುಷ್ಠಾನಕ್ಕೆ ತರುತ್ತೀರೋ ನನಗೆ ಗೊತ್ತಿಲ್ಲ ನಿಜವಾಗಿಯೂ ಇದು ಕರ್ನಾಟಕಕ್ಕೆ ಮೋಸ ಮಾಡಿದ ಹಾಗೆ ಆಗುತ್ತದೆ. ವರ್ಷೇ ವರ್ಷೇ ಪ್ಲಾನ್ ಹೆಚ್ಚು ಆಗುತ್ತದೆ. ಇನ್‌ಫ್ಲೇಷನ್ ರೇಟ್ ಕ್ಯಾಲ್‌ಕ್ಯುಲೇಟ್ ಮಾಡಿ ಜಾಸ್ತಿ ಮಾಡದಿದ್ದರೆ ನಾವು ಒಪ್ಪಬಹುದಾಗಿತ್ತು. ನೀವು ಅದನ್ನು ತೆಗೆದುಕೊಂಡರೂ ಕೂಡ ಪ್ಲಾನ್‌ನಲ್ಲಿ ಇಂತಹ ಅನುಕೂಲ ಮಾಡಿಲ್ಲ. ನೀವು ಹೇಳುತ್ತೀರಿ

> "However, the high hopes generated thereby, were substantially compromised by the erratic behaviour of the monsoon in the crucial closing months of the Khariff season when heavy floods at harvesting time for certain crops were followed by a total dry spell of nearly three months covering harvesting of late sown Khariff crops and the sowings in rabi. Precipitation was below normal..."

ನೀವು ಹೇಳುತ್ತೀರಿ, ಇಂತಹ ಒಂದು ಒಳ್ಳೆಯ ಬೆಳೆ ಕೂಡ ಸಿಗಲಿಲ್ಲ ಎಂದು. ಒಂದು ಸರ್ತಿ ವಿಪರೀತ ಮಳೆ ಬಂತು ಒಂದು, ಸರ್ತಿ ಬರಲಿಲ್ಲ. ಆದ್ದರಿಂದ ಈ ಪರಿಸ್ಥಿತಿ ಬಂತು ಎಂದು. ಜೊತೆಗೆ ನೀವು ಹೇಳುತ್ತೀರಿ. The Price situation in the country during 1988-89 is

still a matter of concern," ತಾವು ಸೂಚನೆ ಕೊಟ್ಟಿದ್ದೀರಿ ಓಲ್ ಪಾಯಿಂಟ್ ಪ್ರೈಸ್ ಇಂಡೆಕ್ಸ್ ಆಗಿದೆ ಎಂದು.

"although it is less alarming compared with last year. The wholesale prices in general showed an increase of 4.5 per cent between March and December 19:8, But it is disquieting to note that the prices of essential commodities like foodgrains, fruits and vegetables, milk and milk products and other consumer products have continuously been rising much more than those of others,"

ಈಗ ಅಕ್ಕಿ ಎರಡು ರೂಪಾಯಿಗೆ ಹೋಗಿದೆ. ಪ್ರತಿ ಒಂದು ವಸ್ತುವಿನ ಬೆಲೆ ಜಾಸ್ತಿಯಾಗುತ್ತಿದೆ. ತಾವೇ ಮುಂದಕ್ಕೆ ಹೇಗಿದೆ ಎನ್ನುವ ಬಗ್ಗೆ ಹೇಳುತ್ತೀರಿ.

"The growth of employment in the organised sector has been rather sluggish due to in-adequatepower generation."

ಮಾನ್ಯ ಅಧ್ಯಕ್ಷರೆ, ನಾನೇ ಇವತ್ತು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟೆ. ನಮ್ಮ ಕರ್ನಾಟಕದಲ್ಲಿ ೩ ಲಕ್ಷ ೭೫ ಸಾವಿರ ಪಂಪ್‌ಸೆಟ್ಸ್ ಇವೆ. ಮಾನ್ಯ ರಮೇಶ್ ಕುಮಾರ್‌ರವರು ಇದ್ದರೆ ಹೇಳುತ್ತಾ ಇದ್ದರು, ಅವರು ಅತ್ತುಕೊಂಡು ಬಂದೆ ಎಂದು ಹೇಳುತ್ತಾ ಇದ್ದರು. ಏನು ಪವರ್ ಕೊಡುತ್ತೀರೋ ಗೊತ್ತಿಲ್ಲ. ಕರೆಂಟ್ ಅರ್ಧ ಗಂಟೆಯಲ್ಲಿ ಬರುತ್ತದೆ, ಅರ್ಧ ಗಂಟೆಯಲ್ಲಿ ಹೋಗುತ್ತದೆ. ರೈತರ ಕಷ್ಟ ಹೇಳುವುದಕ್ಕಾಗುವುದಿಲ್ಲ, ರಾತ್ರಿಯೆಲ್ಲಾ ಕಾದಿರಬೇಕು. ನಾನು ಇದರ ಬಗ್ಗೆ ಒಂದು ಸಾರಿ ಹೇಳಿದೆ. ನಮ್ಮ ಹಳ್ಳಿಯಲ್ಲಿ ಗಂಡ ಹೆಂಡತಿ ಮಲಗುವುದಕ್ಕೆ ಕೂಡ ಬಿಡುವುದಿಲ್ಲ. ಇದು ಒಂದು ತರಹ ಫ್ಯಾಮಿಲಿ ಪ್ಲಾನಿಂಗ್ ಲೈಟ್ ಹಾಕುವುದಕ್ಕೆ ಕಾದಿರಬೇಕು, ಸಡನ್ನಾಗಿ ಬರುತ್ತದೆ ಸಡನ್ನಾಗಿ ಹೋಗುತ್ತದೆ ಅರ್ಧ ಗಂಟೆಗೆ ಬರುತ್ತದೆ. ಪುನಃ ಹೋಗುತ್ತದೆ. ಹೀಗಾಗಿ ನಮ್ಮ ಬೆಳೆಗಳೆಲ್ಲಾ ಕಂಪ್ಲೀಟಾಗಿ ಹೋಗಿದೆ. ಇದರ ಬಗ್ಗೆ ಕೂಡ ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಇಲ್ಲಿ ಹೇಳಿದ್ದೂ ಹೇಳಿದ್ದೇ, ಆದರೆ ಏನೂ ಪ್ರಯೋಜನವಿಲ್ಲ. ಆಮೇಲೆ ಪರ್ ಕ್ಯಾಪಿಟಾ ಇನ್‌ಕಂ ಬಗ್ಗೆ ಹೇಳಿದ್ದಾರೆ.

"The per capita income is expected to move up during 1988-89 to Rs. 3077.42 from Rs. 2801.92 during 1987-88."

ಈ ಸ್ಟ್ಯಾಟಿಸ್ಟಿಕ್ ಸರಿಯೋ ಏನೋ ನಮಗೆ ಗೊತ್ತಿಲ್ಲ. ಅಲ್ಲಿ ೯೭ ರೂಪಾಯಿ ಜಾಸ್ತಿಯಾಗಿದೆ. ೭.೫೫ ಇನ ಫ್ಲೇಷನ್ ರೇಟ್ ತೆಗೆದುಕೊಂಡರೆ ಹೇಳಿಕೊಳ್ಳುವಂಥ ಅನುಕೂಲವಾಗಿಲ್ಲ. ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಹೇಳುವುದಾದರೆ, ಕರ್ನಾಟಕದಲ್ಲಿ ೪ ಸಾವಿರ ಇಂಡಸ್ಟ್ರೀಸ್ ಕ್ಲೋಸ್ ಆಗಿವೆ. ಮೇಜರ್ ಟೆಕ್ಸ್‌ಟೈಲ್ ಮಿಲ್ಸ್ ೧೩ ಕ್ಲೋಸ್ ಆಗಿವೆ. ೧೩,೫೦೦ ಜನ ಕೆಲಸವಿಲ್ಲದೆ ಇದ್ದಾರೆ. ಮಾನ್ಯ ಕೃಷ್ಣನ್‌ರವರು ಇದರ ಬಗ್ಗೆ ಹೇಳಿದರು. ಮಾನ್ಯ ಗೋವಿಂದೇಗೌಡರು ಲೇಬರ್ ಡಿಪಾರ್ಟ್‌ಮೆಂಟನ್ನು ವಹಿಸಿಕೊಂಡಿದ್ದಾರೆ, ಅವರು ಬಹಳ ಸೀನಿಯರ್ ಮಿನಿಸ್ಟರ್. ಅವರು ಏನು ಮಾಡುತ್ತಾರೋ ಗೊತ್ತಿಲ್ಲ. ಅವರ ಸೀನಿಯಾರಿಟಿ ಪೇ ಆಗುವುದಿಲ್ಲ. ಅಲ್ಲಿರುವಂಥ ಆಫೀಸರ್ಸ್ ಪ್ರೋಕ್ಯಾಪಿಟಲಿಸ್ಟ್‌ಗಳು. ಈಗಲೂ ಕೂಡ ಬಿನ್ನಿಮಿಲ್ ಕ್ಲೋಸ್ ಆಗಿದೆ, ಇಂಡಸ್ಟ್ರೀಸ್ ಕ್ಲೋಸ್ ಆಗಿದೆ. ಆದುದರಿಂದ ದಯಮಾಡಿ ಈಗಲಾದರೂ ಕೂಡ ಸ್ವಲ್ಪ ಶ್ರದ್ಧೆ ವಹಿಸಿ ಮಾಡಬೇಕು ಇವತ್ತು ಯಾವ ಯಾವ ಮಿಲ್ಸ್ ಕ್ಲೋಸ್ ಆಗಿದೆ ಅದರ ಬಗ್ಗೆ ತಾವು ಸಹಕರಿಸಿ ಅವೆಲ್ಲಾ ಓಪನ್ ಆಗುವ ಹಾಗೆ ಮಾಡಿ. ಗುತ್ತಿಗೆ ಶಿಕ್ಷಕರ ಬಗ್ಗೆ ಶ್ರದ್ಧೆ ವಹಿಸಿ ಅವರ ಸಮಸ್ಯೆಯನ್ನು ಪರಿಹಾರಮಾಡಿ ಎಂದು ಕೇಳಿಕೊಳ್ಳುತ್ತೇನೆ. ಆಮೇಲೆ ಹೋಟೆಲ್‌ಗಳ ಮೇಲೆ ಟ್ಯಾಕ್ಸನ್ನು ಹಾಕಿದ್ದೀರಿ. ಹೋಟೆಲ್‌ನವರ ಮೇಲೆ ೧೧ ರೂಪಾಯಿ ಟ್ಯಾಕ್ಸ್ ಹಾಕಿದರೆ ಅವರು ೨೦ ರೂಪಾಯಿ ಏರಿಸುತ್ತಾರೆ. ಆಮೇಲೆ ಮೋಟಾರ್ ವೆಹಿಕಲ್ಸ್ ಮೇಲೆ ಟ್ಯಾಕ್ಸ್ ಹಾಕಿದ್ದೀರಿ, ಬೀರ್ ಮೇಲೆ ಹಾಕಿದ್ದೀರಿ. ಈ ಎಕ್ಸೈಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಇದಕ್ಕೆ ಎಷ್ಟಾದರೂ ಟ್ಯಾಕ್ಸ್ ಹಾಕಿ, ನೀವು ಕೊಡುತ್ತಾ ಇರುವುದು ವಿಷ ಹೆಂಡ ಕೊಡುವುದಿಲ್ಲ, ಹೆಂಡವನ್ನು ಎಲ್ಲೂ ಕೊಡುತ್ತಾ ಇಲ್ಲ. ಏಕೆಂದರೆ ಈಚಲು ಮರಗಳು, ಈಚಲು ವನಗಳು ಇಲ್ಲ. ನಾವಿಕಾವಸ್ಥೆಗೆ ೧೦ ಮರಗಳನ್ನು ಟ್ಯಾಕ್ಸ್ ಕಟ್ಟಿ ತೆಗೆದುಕೊಂಡಿರುತ್ತಾರೆ. ಇವತ್ತು ಕ್ಲೋರಲ್ ಹೈಡ್ರೇಟನ್ನು ಕಂಪ್ಲೀಟಾಗಿ ಮಿಕ್ಸ್ ಮಾಡಿ ಕೊಡುತ್ತಾರೆ, ಕುಡಿಯುವವನಿಗೆ ಗೊತ್ತಾಗುವುದಿಲ್ಲ, ಏಕೆಂದರೆ ಅದು ಬೇಗ ಕಿಕ್ ಕೊಡುತ್ತದೆ, ೧೦ ವರ್ಷಗಳಲ್ಲಿ ಯಮಲೋಕಕ್ಕೆ

ಹೋಗುತ್ತಾನೆ ಏಕೆಂದರೆ ನರ್ವಸ್ ಡಿಬಿಲಿಟಿ ಬಂದುಬಿಡುತ್ತದೆ. ಇದರಲ್ಲಿ ಈಗ ಮೋಸ ಮಾಡುತ್ತಿದ್ದೀರಿ. ಎರಡನೆಯದು ಸೆಕೆಂಡ್ಸ್ ಹಾವಳಿ. ಇವತ್ತು ಖೋಡೆಯವರು ಇರಬಹುದು. ಮ್ಯಾಕ್‌ಡ್ವೆಲ್‌ನವರು ಇರಬಹುದು. ಇವತ್ತು ದಿನಕ್ಕೊಂದು ಕೋಟಿ ರೂಪಾಯಿ ಮೋಸವಾಗುತ್ತಾ ಇದೆ. ಅವರು ನಿಮ್ಮ ಸ್ನೇಹಿತರು ಯಾರಾದರೂ ಹೋಗಿ ದಂಡು ಮಾಡಿಕೊಂಡು ಬರುತ್ತಾರೋ ಏನೋ ಗೊತ್ತಿಲ್ಲ. ಸೆಕೆಂಡ್ಸ್ ಮಾರಾಟವನ್ನು ರದ್ದುಮಾಡುತ್ತೇವೆ ಎಂದು ಹೇಳುತ್ತೀರಿ. ೧೫ ದಿವಸಗಳ ಹಿಂದೆ ೪ ದಿವಸ ನಿಂತುಹೋಗಿಬಿಟ್ಟಿತು.

ಸ್ವಾಮಿ, ಈ ಬೇಸಿಗೆ ಕಾಲದಲ್ಲಿ ಫ್ಯಾಟ್ ಕಂಟೆಂಟ್ ಇರುವುದಿಲ್ಲ. ಈ ವಿಚಾರದಲ್ಲಿ ನಾನು ಹೇಳಬೇಕಾದ್ದು ಬಹಳಷ್ಟು ಇದೆ. ಆದರೆ ನಾನು ಹೇಳಿದ್ದನ್ನು ಕೇಳುವವರೇ ಇಲ್ಲ. ಮಾನ್ಯ ಸಿಂಧ್ಯರವರು ಒಬ್ಬರು ಮಾತ್ರ ಇದನ್ನು ಚೆನ್ನಾಗಿ ಕೇಳಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರೂ ಕೂಡ ಇಲ್ಲ, ನಾನು ಹೇಳುತ್ತಿರುವುದನ್ನು ಯಾರು ನೋಟ್ ಮಾಡಿಕೊಳ್ಳುತ್ತಿದ್ದಾರೋ ಗೊತ್ತಿಲ್ಲ...

ಶ್ರೀ ವೇದಾಂತ ಹೆಮ್ಮಿಗೆ.— ನೀವು ಆಲ್ಕೊಹಾಲ್‌ನಿಂದ ಹಾಲಿಗೆ ಬಂದರೆ ಯಾರಿಗೆ ಗೊತ್ತಾಗುತ್ತದೆ...

ಶ್ರೀ ಆರ್. ವೆಂಕಟರಾಮಯ್ಯ.— ಕೋ ಆಪರೇಟಿವ್ ಸೊಸೈಟಿಗಳಲ್ಲಿ ಸಾಲದ ಬಗ್ಗೆ ಕಳೆದಸಾರಿ ಒಂದು ಅನುಕೂಲವನ್ನು ಮಾಡಿಕೊಟ್ಟಿದ್ದೀರಿ. ಅದೇನೆಂದರೆ, ಇಂಟರೆಸ್ಟ್ ಫ್ರೀ ಲೋನ್ ಎಂದು ಕೊಟ್ಟಿದ್ದೀರಿ. ಅದನ್ನು ಈ ವರ್ಷವೂ ಕೂಡ ಕೊಡಿಸಬೇಕು. ಅವರಿಗೆ ಏನು ಹೆದರಿಕೆ ಎಂದರೆ ನಬಾರ್ಡ್‌ನವರು ಎಲ್ಲಿ ನಮಗೆ ಅಡ್ಡ ಬರುತ್ತಾರೋ ಎಂಬ ಭಯ ಇದೆ. ಆ ಭಯ ಬೇಡ. ಏಕೆಂದರೆ ಮಹಾರಾಷ್ಟ್ರದಲ್ಲಿ ಅಂತುಳೆಯವರು ಕೊಟ್ಟಿದ್ದಾರೆ, ತಮಿಳ್ನಾಡಿನಲ್ಲಿ ಕೊಟ್ಟಿದ್ದಾರೆ. ಆದರೆ ಈಸಾರಿ ತಾವು ನಮ್ಮ ರೈತರಿಗೆ ಏನೇನೂ ಅನುಕೂಲವನ್ನೇ ಮಾಡಿಕೊಟ್ಟಿಲ್ಲ. ರೈತರು ಬೆಳೆಯುತಕ್ಕ ಬೆಳೆಗೂ ಕೂಡ ಸರಿಯಾದ ಬೆಲೆಯನ್ನು ನಿಗದಿಮಾಡಿಲ್ಲ. ನೀವು ಈ ಸಾರಿ ೮೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಅದರಿಂದ ರೈತರಿಗೆ ಸ್ವಲ್ಪಮಟ್ಟಿಗೆ ಸಹಾಯ ಮಾಡಿದಂತಾಗುತ್ತದೆ. ನಿಮ್ಮ ಬಜೆಟ್‌ನಲ್ಲಿ ಅಕ್ರಮ ಸಾಗುವಳಿ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲ ಬಹಳಷ್ಟು ರೈತರು ಅಕ್ರಮ ಸಾಗುವಳಿಯನ್ನು ಮಾಡಿಕೊಂಡಿದ್ದಾರೆ. ಅವರಿಗೆ ಅದನ್ನು ಖಾಯಂ ಮಾಡಬೇಕೆಂದು ಕಳೆದ ೪ ವರ್ಷಗಳಿಂದ ನಾನು ಹೇಳುತ್ತಲೇ ಬಂದಿದ್ದೇನೆ. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಅಧಿವೇಶನದ ಕೊನೆಯ ದಿವಸ ತರುತ್ತಾರೆ. ಅದು ಏನೋ ಗಲಾಟೆಗಳ ಕಾರಣದಿಂದಾಗಿ ಪಾಸ್ ಆಗುವುದಿಲ್ಲ. ಡಿಸ್ಕಷನ್‌ಗೂ ಅವಕಾಶ ಆಗುತ್ತಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೩೦ ಲಕ್ಷ ಸಂಸಾರಗಳಿದ್ದು ಸುಮಾರು ೧೦ ಲಕ್ಷ ಸಂಸಾರಗಳು ಈ ರೀತಿ ಅಕ್ರಮ ಸಾಗುವಳಿಯನ್ನು ಮಾಡುತ್ತಿವೆ, ಇದೇರೀತಿ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮನೆಗಳನ್ನೂ ಕೂಡ ಕಟ್ಟಿಕೊಂಡಿದ್ದಾರೆ. ಇದನ್ನು ಸರ್ಕಾರ ಮಾನವೀಯತೆಯಿಂದ ಪರಿಶೀಲಿಸಬೇಕು. ಮ್ಯಾನುಫ್ಯಾಕ್ಚರಿಂಗ್ ಕಾಸ್ಟ್ ಒಂದು ಬಾಟಲಿಗೆ ೩೦ ರೂಪಾಯಿಗಳು ಬಿದ್ದಿರುತ್ತದೆ. ಉಳಿದದ್ದು ಇಬ್ಬರೂ ಹಂಚಿಕೊಳ್ಳುತ್ತಾರೆ. ಇದಕ್ಕೆ ಸೆಕೆಂಡ್ಸ್ ಅಂತ ಹೇಳುವುದು.

ಶ್ರೀ ಸಿ. ಬೈರೇಗೌಡ.— ಸೆಕೆಂಡ್ಸ್ ವ್ಯವಹಾರ ನಡೆಸಿದವರು ಯಾರೋ ಒಬ್ಬರು ಡೆಲ್ಲಿಯಲ್ಲಿ ಒಂದು ಯಾಗ ನಡೆಸಿದರಂತೆ. ಅದಕ್ಕೆ ಸುಮಾರು ೬೦–೭೦ ಲಕ್ಷ ರೂಪಾಯಿ ಖರ್ಚು ಮಾಡಿದರಂತೆ.

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೆ, ಇನ್ನು ಹಾಲು ಉತ್ಪಾದಕರ ಸಂಘದ ಬಗ್ಗೆ ಹೇಳಬೇಕಾಗುತ್ತದೆ. ಇವರು ರೈತರಿಗೆ ಸಹಾಯ ಆಗುವುದಕ್ಕೆ ೫೦ ಪೈಸೆ ಜಾಸ್ತಿ ಮಾಡಿದ್ದೇವೆ ಎಂದು ಹೇಳಿದರು. ಇದರಿಂದ ರೈತರಿಗೆ ಬಹಳ ಸಂತೋಷ ಆಯಿತು. ೫೦ ಪೈಸೆ ಜಾಸ್ತಿ ಮಾಡಿದ್ದಾರೆ ಅದಕ್ಕೆ ನಾವು ಆಭಾರಿಯಾಗಿರಬೇಕು ಎನ್ನುವುದು ಬಂತು. ಇವರು ಚಾರ್ಟ್ ರಿವೈಸ್ ಮಾಡಿ ೮.೫ ಎಸ್‌ಎನ್‌ಎಫ್ ಇದ್ದುದು ೮.೬ ಮಾಡಿದರು. ಅದರಿಂದಾಗಿ ಮಂಕ್ಕಾಲು ಪಾಲು ಹಾಲು ಲೋಯರ್ ಫ್ಯಾಟ್ ಕಂಟೆಂಟ್ ಅಂತ ಹೇಳಿ ರಿಜೆಕ್ಟ್ ಮಾಡುತ್ತಿದ್ದಾರೆ. ಅದರ ಬಗ್ಗೆ ನಾನೂ ಕೂಡ ಅಜಿಟೇಟ್ ಮಾಡಿದೆ. ಮಾನ್ಯ ಕೃಷ್ಣ ಅವರು ಇದ್ದಿದ್ದರೆ ಚೆನ್ನಾಗಿತ್ತು. ನ್ಯೂ ಚಾರ್ಟ್ ಮಾಡಿದ್ದರಿಂದ ತೊಂದರೆಯಾಗಿದೆ, ಹಳೇ ಚಾರ್ಟನ್ನೇ ಕಂಟಿನ್ಯೂ ಮಾಡಿ. ಹಳೆ ಚಾರ್ಟ್‌ನಲ್ಲಿ ೮.೫ ಇದ್ದುದನ್ನು ೮.೬ ಮಾಡಿದ್ದೀರಿ. ಈಗ ೮.೬ ಅನ್ನು ೮.೫೫ ಮಾಡಿದ್ದೀರಿ, ಅದಕ್ಕೆ ೫೦ ಪೈಸೆ ಜಾಸ್ತಿ ಮಾಡಿದ್ದೀರಿ. ಇದರಿಂದ ಏನಾಗುತ್ತದೆ ಅಂದರೆ ಆ ಉದ್ದಿಮೆಗೆ ಏಟಾಗುತ್ತದೆ. ರೈತರಿಗೆ ಎಷ್ಟು ಮೋಸ ಆಗುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಇವರು ಅರ್ಧ ಹಾಲನ್ನು ವಾಪಸ್ಸು ಕಳುಹಿಸುತ್ತಿದ್ದಾರೆ.

ಇನ್ನು ನೀರಿನ ಕಂದಾಯ ಮೊದಲು ೧೭ ಕೋಟಿ ಇದ್ದುದು ಈಗ ೧೫ ಕೋಟಿಗೆ ಇಳಿದಿದೆ. ನೀರಿನ ಕಂದಾಯವನ್ನೇ ಹಾಕುವುದಿಲ್ಲವೆಂದು ಹೇಳಿದ್ದವರು ಈಗ ಹಾಕಿದ್ದೀರಿ. ನೀರಿನ ಕಂದಾಯವನ್ನು ನಿಮ್ಮ ಅಧಿಕಾರಿಗಳು ಇನ್ನೂ ಕೂಡ ವಸೂಲುಮಾಡುತ್ತಲೇ ಇದ್ದಾರೆ. ನಾನು ಇದನ್ನು ಸರ್ಕಾರದ

ಗಮನಕ್ಕೆ ತಂದಾಗ ಇನ್ನು ಮುಂದೆ ನೀರಿನ ಕಂದಾಯವನ್ನು ವಸೂಲ್ಮಾಡದಂತೆ ಒಂದು ಸರ್ಕ್ಯುಲರನ್ನು ಕಳುಹಿಸಿಕೊಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳಾದ ಬೊಮ್ಮಾಯಿಯವರು ಹೇಳಿದ್ದರು. ಇದನ್ನು ಕಳುಹಿಸಿಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ ಮುಖ್ಯ ಮಂತ್ರಿಗಳು ಈರೀತಿ ಭರವಸೆಯನ್ನು ಕೊಟ್ಟಿದ್ದಾರೆ ಎಂದು ನಾವು ಅಧಿಕಾರಿಗಳಿಗೆ ಹೇಳಿದರೆ, ನಮಗೇನು ಗೊತ್ತು, ನಮಗೆ ಯಾವುದೇ ಸರ್ಕ್ಯುಲರ್ ಕೂಡ ಬಂದಿಲ್ಲ ಆದ್ದರಿಂದ ನೀವು ನೀರಿನ ಕಂದಾಯವನ್ನು ಕೊಡಬೇಕೆಂದು ವಸೂಲ್ಮಾಡುತ್ತಲೇ ಇದ್ದಾರೆ. ನೀವು ಸರಿಯಾದ ರೀತಿಯಲ್ಲಿ ನೀರನ್ನು ಕೊಟ್ಟರೆ ಅದಕ್ಕೆ ಬೇಕಾದರೆ ಕಂದಾಯವನ್ನು ವಸೂಲ್ಮಾಡಿ. ಆದರೆ ನೀರನ್ನೇ ಕೊಡದೆ ವಸೂಲ್ಮಾಡಬೇಡಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ತರಿ ಜಮೀನು ಎಂದು ತಿಳಿದುಬಂದರೆ ಸಾಕು, ರೆಕಾರ್ಡ್‌ನಲ್ಲಿ ಇದ್ದರೆ ಸಾಕು ಅದಕ್ಕೆ ನೀರಿನ ಕಂದಾಯವನ್ನು ಬಲಾತ್ಕಾರವಾಗಿ ವಸೂಲ್ಮಾಡುತ್ತಿದ್ದಾರೆ. ರಾಜ್ಯದ ಆದಾಯ ೩೫೦೦ ಕೋಟಿ ರೂಪಾಯಿ ಇರುವಾಗ ಇದರಲ್ಲಿ ನೀರಿನ ಕಂದಾಯ ಕೇವಲ ೧೫ ಕೋಟಿ ಮಾತ್ರ ಇರತಕ್ಕದ್ದು. ಇದನ್ನು ಲೆಕ್ಕ ಹಾಕಿದರೆ ಬಹಳ ಕಡಿಮೆ. ಆದ್ದರಿಂದ ಇನ್ನುಮುಂದೆ ನೀರಿನ ಕಂದಾಯವನ್ನು ಸರ್ಕಾರ ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಸಭೆಯನ್ನು ಮುಕ್ತಾಯ ಮಾಡಿ ನಾಳೆ ಬೆಳಿಗ್ಗೆ ೧೧ ಗಂಟೆಯವರೆಗೂ ಮುಂದೂಡಿದ್ದೇನೆ.

(ಸದನವು ಸಂಜೆ ೬ ಗಂಟೆಗೆ ಮುಕ್ತಾಯವಾಗಿ ಮತ್ತೆ ನಾಳೆ ತಾ:೨೨–೩–೭೮ರ ಬುಧವಾರ ೧೧ ಗಂಟೆಗೆ ಸಮಾವೇಶಗೊಳ್ಳುವುದೆಂದು ತೀರ್ಮಾನಿಸಿತು.)